ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 18 ಬುಧವಾರ 2023

ಸಂಪುಟ: 43 | ಸಂಚಿಕೆ: 271 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮಠಾಧೀಶರ ಚುನಾವಣಾ ಕಣಕ್ಕಿಳಿಸಲು ರಾಜ್ಯ ಬಿಜೆಪಿ ನಿರ್ಧಾರ


- ಈಗಾಗಲೇ ಕೆಲವು ಮಠಾಧೀಶರೊಂದಿಗೆ ಮಾತುಕತೆ
- ವರಿಷ್ಠರ ಸಲಹೆಯಂತೆ ರಾಜ್ಯ ನಾಯಕರ ಕಾರ್ಯತಂತ್ರ
- ಉತ್ತರ ಪ್ರದೇಶ, ಮಧ್ಯಪ್ರದೇಶದ 'ತಂತ್ರ' ವರ್ಕ್‌ಔಟ್ ಆಗುವ ಆಶಯ

ಬೆಂಗಳೂರು, ಜ.17(ಕೆಎಂಶಿ)–ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಕೆಲ ಮಠಾಧೀಶರನ್ನು ಪಕ್ಷದ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಲು ಬಿಜೆಪಿ ತೀರ್ಮಾನಿಸಿದೆ.

ದೆಹಲಿಯಲ್ಲಿ ನಡೆಯುತ್ತಿರುವ ಬಿಜೆಪಿಯ ಎರಡು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆದು, ಮುಂಬರುವ ಚುನಾವಣೆಯನ್ನು ಹಿಂದುತ್ವದ ಆಧಾರದ ಮೇಲೆ ನಡೆಸಲು ನಿರ್ಧರಿಸಲಾಗಿದೆ. ಇದರ ಅಂಗವಾಗಿ ಕೆಲವು ಪ್ರಭಾವಿ ಮಠಾಧಿಪತಿಗಳಿಗೆ ಟಿಕೆಟ್ ನೀಡಲು ನಿರ್ಧರಿಸಿದ್ದು, ಈಗಾಗಲೇ ಕೆಲವರು ಪಕ್ಷದ ಚಿನ್ಹೆಯಡಿ ಸ್ಪರ್ಧಿಸಲು ಅವಕಾಶ ಕೋರಿದ್ದಾರೆ. ಇವರ ಜೊತೆಗೆ ಮತ್ತಷ್ಟು ಪ್ರಭಾವಿಗಳ ಮನವೊಲಿಸಿ, ಕಣಕ್ಕಿಳಿಸಲು ಪಕ್ಷ ಮುಂದಾಗಿದೆ. ಉತ್ತರ ಪ್ರದೇಶ, ಮಧ್ಯ ಪ್ರದೇಶ ಸೇರಿದಂತೆ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಹಲವು ಮಠಾಧಿಪತಿಗಳು ಚುನಾವಣಾ ಕಣಕ್ಕಿಳಿದು, ಅದರಲ್ಲಿ ಒಬ್ಬರು ಮುಖ್ಯಮಂತ್ರಿಗಳಾಗಿದ್ದಾರೆ. ಕೆಲವರು ಸಚಿವರಾಗಿ ಅಧಿಕಾರ ನಿರ್ವಹಣೆ ಮಾಡಿದ್ದಾರೆ. ಕರ್ನಾಟಕದಲ್ಲೂ ಹಿಂದುತ್ವವನ್ನು ಬಲಿಷ್ಠಗೊಳಿಸುವ ಉದ್ದೇಶದಿಂದ ಮಠಾಧಿಪತಿಗಳಿಗೆ ಅವಕಾಶ ನೀಡುವ ತೀರ್ಮಾನಕ್ಕೆ ಪಕ್ಷ ಬಂದಿದೆ. ಚುನಾವಣಾ ಕಣಕ್ಕೆ ಯಾರನ್ನು ಇಳಿಸಬಹುದು ಎಂಬುದರ ಬಗ್ಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ▶ 8ನೇ ಪುಟಕ್ಕೆ

ಪಕ್ಷ, ಸರ್ಕಾರದಲ್ಲಿ ಬದಲಾವಣೆ ಸಂಬಂಧ ಯಡಿಯೂರಪ್ಪರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಚರ್ಚೆ

- ಬಿಜೆಪಿ ಕಾರ್ಯಕಾರಿಣಿ ನಡುವೆಯೇ ತಮ್ಮ ನಿವಾಸಕ್ಕೆ ಬಿಎಸ್‌ವೈ ಆಹ್ವಾನಿಸಿ ಮಾಹಿತಿ ಸಂಗ್ರಹ
- ಪಕ್ಷದ ರಾಜ್ಯಾಧ್ಯಕ್ಷರ ಬದಲಾವಣೆಯೂ ಸೇರಿದಂತೆ ಸರ್ಕಾರದಲ್ಲೂ ಮಾರ್ಪಾಟು ಸಂಭವ



ಬೆಂಗಳೂರು: ವಿಧಾನಸಭಾ ಚುನಾವಣಾ ಹೊಸ್ತಿಲಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಹಾಗೂ ಸರ್ಕಾರದಲ್ಲಿ ಕೆಲವು ಮಾರ್ಪಾಟು ಮಾಡುವ ಸಂಬಂಧ ಪ್ರಧಾನಿ ನರೇಂದ್ರ ಮೋದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಂದ ಮಾಹಿತಿ ಪಡೆದಿದ್ದಾರೆ. ದೆಹಲಿಯಲ್ಲಿ ನಡೆಯುತ್ತಿರುವ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ನಡುವೆಯೇ ಯಡಿಯೂರಪ್ಪ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡ ಪ್ರಧಾನಿಯವರು, ಮುಂಬರುವ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಸುಮಾರು 20 ▶ 8ನೇ ಪುಟಕ್ಕೆ

ಇಂದಿನಿಂದ ಆರು ದಿನ ಸುತ್ತೂರು ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವ

ಇದು ಧಾರ್ಮಿಕ ಉತ್ಸವ ಮಾತ್ರವಲ್ಲ ಆದರ್ಶ ಜನಜೀವನ ದರ್ಶನದ ಚಿತ್ರಣ ಅನಾವರಣ



ನಂಜನಗೂಡು, ಜ.17–ತಾಲೂಕಿನ ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ನಾಳೆಯಿಂದ (ಜ.18 ರಿಂದ ಜ23) ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಆರು ದಿನಗಳ ಕಾಲ ನಡೆಯಲಿದ್ದು, ಜಾತ್ರೆಗೆ ಎಲ್ಲವೂ ಸಿದ್ಧವಿದೆ. ಹತ್ತೂರ ಜಾತ್ರೆಗಿಂತ ಸುತ್ತೂರ ಜಾತ್ರೆ ಮೇಲು ಎಂಬ ಗ್ರಾಮೀಣ ನಾಣ್ನುಡಿಯಂತೆ ಈ ಜಾತ್ರೆ ಮಹತ್ವದ್ದು. ಆದರೂ ಕಳೆದ 2 ವರ್ಷಗಳಿಂದ ಕೊರೊನಾದಿಂದ ಜಾತ್ರೆ ರದ್ದುಗೊಂಡು ಈ ಭಾಗದ ಜನರಲ್ಲಿ ಬೇಸರ ಮೂಡಿತ್ತು. ಈ ಬಾರಿ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತಿದೆ. 6 ದಿನಗಳ ಕಾಲ ನಡೆಯುವ ಈ ಜಾತ್ರಾ ▶ 6ನೇ ಪುಟಕ್ಕೆ

ಸ್ಯಾಂಟ್ರೋ ರವಿ ಸೇರಿ ಮೂವರು ಸಿಐಡಿ ವಶಕ್ಕೆ



ಮೈಸೂರು, ಜ.17(ಆರ್‌ಕೆ)–ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧನದಲ್ಲಿದ್ದ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ಹಾಗೂ ಮತ್ತಿಬ್ಬರು ಆರೋಪಿಗಳನ್ನು ಇಂದು ಸಿಐಡಿ ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ. ಸಂತ್ರಸ್ತೆಯಾದ ಸ್ಯಾಂಟ್ರೋ ರವಿ ಪತ್ನಿ ನೀಡಿದ ದೂರಿನನ್ವಯ ವಿಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ನಿನ್ನೆ (ಜ. 16) ಸರ್ಕಾರ ಸಿಐಡಿಗೆ ವರ್ಗಾಯಿಸಿತ್ತು. ಅದರನ್ವಯ ತನಿಖೆ ಕೈಗೊಂಡಿರುವ ಸಿಐಡಿ ಆರ್ಥಿಕ ಅಪರಾಧಗಳ ವಿಭಾಗದ ಡಿವೈಎಸ್ಪಿ ನರಸಿಂಹಮೂರ್ತಿ ನೇತೃತ್ವದ ಅಧಿಕಾರಿಗಳು ಮಂಗಳವಾರ ▶ 8ನೇ ಪುಟಕ್ಕೆ

ಸಂತ್ರಸ್ತೆಯಿಂದ ಮತ್ತೊಂದು ಪ್ರಕರಣ ದಾಖಲು

ಮೈಸೂರು, ಜ. 17(ಆರ್‌ಕೆ)– ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣದಡಿ ಈಗಾಗಲೇ ಬಂಧಿತನಾಗಿ, ಈಗ ಸಿಐಡಿ ಪೊಲೀಸರ ವಶದಲ್ಲಿರುವ ಸ್ಯಾಂಟ್ರೋ ರವಿ ವಿರುದ್ಧ ಮೈಸೂರಲ್ಲಿ ಮತ್ತೊಂದು ಕೇಸ್ ದಾಖಲಾಗಿದೆ.

2020ರ ಸೆಪ್ಟೆಂಬರ್ 22ರಂದು ಮೈಸೂರಿನ ದೇವರಾಜ ಮಾರುಕಟ್ಟೆಗೆ ಹೋಗಿದ್ದಾಗ ನನ್ನ ಸ್ಕೂಟರ್ ಡಿಕ್ಕಿಯಲ್ಲಿ ಇರಿಸಿದ್ದ ಚೆಕ್‌ಬುಕ್ ಅನ್ನು ಸ್ಯಾಂಟ್ರೋ ರವಿ ಮತ್ತು ಸಹಚರ ಪ್ರಕಾಶ್ ಎಂಬುವು ಕಳವು ಮಾಡಿ ನಾನು ಸಹಿ ಮಾಡಿದ್ದ 4 ಚೆಕ್‌ಗಳನ್ನು ಕೆನರಾ ಬ್ಯಾಂಕ್‌ಗೆ ಸಲ್ಲಿಸಿ ವಂಚಿಸಿದ್ದಾರೆ ಎಂದು ಆತನ ಪತ್ನಿ ಸೋಮವಾರ ▶ 8ನೇ ಪುಟಕ್ಕೆ

ಕೆ.ಆರ್.ಕ್ಷೇತ್ರದ 7 ಉದ್ಯಾನಗಳ ಸಮಗ್ರ ಅಭಿವೃದ್ಧಿಗೆ ಶಾಸಕ ರಾಮದಾಸ್ ಚಾಲನೆ

ಮೈಸೂರು,ಜ.17(ಆರ್‌ಕೆಬಿ)– ಕೆ.ಆರ್. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಉದ್ಯಾನವನಗಳ ಸಮಗ್ರ ಅಭಿವೃದ್ಧಿಗೆ ಶಾಸಕ ಎಸ್.ಎ.ರಾಮದಾಸ್ ಮಂಗಳವಾರ ಚಾಲನೆ ನೀಡಿದರು.

55ನೇ ವಾರ್ಡ್‌ನ ಚಾಮುಂಡಿಪುರಂ ತಗಡೂರು ರಾಮಚಂದ್ರರಾವ್ ಉದ್ಯಾನವನ, ಶಂಕರನಾರಾಯಣ ಸ್ವಾಮಿ ದೇವಸ್ಥಾನದ ಎದುರಿನ ಉದ್ಯಾನ, 51ನೇ ವಾರ್ಡ್‌ನ ರಾಮಾನುಜ ರಸ್ತೆ 19ನೇ ಕ್ರಾಸ್ ಉದ್ಯಾನ, ಗನ್‌ಹೌಸ್ ವೃತ್ತದ ಬಳಿಯ ಬಸವೇಶ್ವರ ಉದ್ಯಾನ, ವಿಶ್ವಮಾನವ ಕುವೆಂಪು ಉದ್ಯಾನ, 52ನೇ ವಾರ್ಡ್ ಇಟ್ಟಿಗೆಗೂಡಿನ ಕರಗ ದೇವಸ್ಥಾನದ ಎದುರಿನ ಉದ್ಯಾನ, ಕೆಸಿ ನಗರ ಭಾಗದ ಜೋಡಿ ಉದ್ಯಾನವನಗಳ ಅಭಿವೃದ್ಧಿಗೆ ಶಾಸಕರು ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ರಾಮದಾಸ್, ಕ್ಷೇತ್ರದ 16 ಉದ್ಯಾನವನಗಳನ್ನು ವಿಷಯಾಧಾರಿತ ಉದ್ಯಾನಗಳಾಗಿ ಪರಿವರ್ತಿಸಲಾಗಿದೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ದೃಷ್ಟಿಯಿಂದ ಯೋಗ, ಆರೋಗ್ಯ, ಕನಕದಾಸ, ವಿಜ್ಞಾನ, ಬಸವೇಶ್ವರ ಇನ್ನಿತರೆ ವಿಚಾರಗಳನ್ನು ಈ ಉದ್ಯಾನಗಳಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದರು.

ಏಳು ಉದ್ಯಾನಗಳಿಗೆ ಇಂದು ಚಾಲನೆ ನೀಡಲಾಗಿದ್ದು, ಮುಂದಿನ ಎರಡು ತಿಂಗಳಲ್ಲಿ ಎಲ್ಲಾ ಉದ್ಯಾನಗಳ ಅಭಿವೃದ್ಧಿ ಮಾಡಲಾಗುವುದು. ಇವುಗಳ ಅಭಿವೃದ್ಧಿ ಮಾಡುವುದಷ್ಟೇ ಅಲ್ಲ, ಅವುಗಳ ಹಸಿರೀಕರಣದ ಜೊತೆಗೆ ವಾಯುವಿಹಾರಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ನಿರ್ವಹಣೆ ಕೂಡ ಮಾಡಲಾಗುವುದು ಎಂದರು.

ಪಾಲಿಕೆ ಸದಸ್ಯರಾದ ಮಾ.ವಿ.ರಾಮ್‌ಪ್ರಸಾದ್, ಬಿ.ವಿ.ಮಂಜುನಾಥ್, ಛಾಯಾದೇವಿ, ಮುಖಂಡರಾದ ಪುರುಷೋತ್ತಮ್, ಶಿವಪ್ಪ, ಬಾಲಕೃಷ್ಣ, ವಿದ್ಯಾ ಅರಸ್, ಉಮಾಶಂಕರ್, ಸಂದೀಪ್, ಕಿರಣ್, ವಿಜಯಾ, ಬೇಬಿ, ಪವನ್, ವಿನಯ್, ಮಲ್ಲಿಕಾರ್ಜುನ, ಮುರುಳಿ, ಧರ್ಮೇಂದ್ರ, ಶಾಂತ, ಮಂಜುನಾಥ್, ರಾಜಕುಮಾರ್, ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕಾರ್ಮಿಕರ ಪ್ರತಿಭಟನೆ




ಮೈಸೂರು,ಜ.17(ಆರ್‌ಕೆಬಿ)– ರಾಜ್ಯದ ಆರೋಗ್ಯ ಇಲಾಖೆಯ ಒಳ ಮತ್ತು ಹೊರ ಗುತ್ತಿಗೆ ನೌಕರರಿಗೆ ಸಂಬಂಧಿಸಿದ ಶ್ರೀನಿವಾಸಚಾರಿ ವರದಿ ಜಾರಿ ಮಾಡಬೇಕು. ಆ ನೌಕರರನ್ನು ಖಾಯಂ ಮಾಡಬೇಕು. ರಾಜ್ಯ ರಸ್ತೆ ಸಾರಿಗೆ ಇಲಾಖೆ ನೌಕರರ ವೇತನ ಪರಿಷ್ಕರಣೆ ಮಾಡಿ ಸರ್ಕಾರಿ ನೌಕರರಿಗೆ ಸರಿಸಮಾನ ವೇತನ ನಿಗದಿ ಮಾಡಬೇಕು. ಸರ್ಕಾರದ ಎಲ್ಲಾ ಇಲಾಖೆಯಲ್ಲಿರುವ ಒಳಗುತ್ತಿಗೆ ಮತ್ತು ಹೊರಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ಕೈಬಿಡಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಭಾರತೀಯ ಮಜ್ದೂರ್ ಸಂಘದ ಜಿಲ್ಲಾ ಘಟಕದ ಕಾರ್ಯಕರ್ತರು ಮಂಗಳವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ತಮ್ಮ ಬೇಡಿಕೆಗಳಿಗೆ ಸಂಬಂಧಿಸಿದ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಹಾಲಿ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು. ಕನಿಷ್ಠ ವೇತನವನ್ನು 21 ಸಾವಿರಕ್ಕೆ ಏರಿಸಬೇಕು. ಮೂರು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡಬೇಕು. ಎಲ್ಲಾ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಪಿಎಫ್ ನಿಧಿಯಿಂದ ನೀಡಲಾಗುತ್ತಿರುವ ಪಿಂಚಣಿಯನ್ನು 5 ಸಾವಿರ ರೂ.ಗಳಿಗೆ ಏರಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಸರ್ಕಾರಿ ಮತ್ತು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುವುದನ್ನು ನಿಲ್ಲಿಸಿ, ಅವುಗಳನ್ನು ಆಧುನೀಕರಣಗೊಳಿಸಬೇಕು. ಎಲ್ಲಾ ಕಾರ್ಮಿಕರ ಇಎಸ್‌ಐ ಯೋಜನೆಯ ಸೌಲಭ್ಯದ ಮಿತಿಯನ್ನು 21 ಸಾವಿರ ರೂ.ಗಳಿಂದ 35 ಸಾವಿರ ರೂ.ಗೆ ಏರಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದೂ ಒತ್ತಾಯಿಸಿದರು. ಈ ಎಲ್ಲ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಫೆ.6ರಂದು ಬೆಂಗಳೂರಿನಲ್ಲಿ ರಾಜ್ಯದ ಎಲ್ಲಾ ಕಾರ್ಮಿಕರು ಸೇರಿ, ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಂತಿಮವಾಗಿ ಜಿಲ್ಲಾಧಿಕಾರಿ ಕಚೇರಿಗೆ ತಮ್ಮ ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಕಾರ್ಯದರ್ಶಿ ಶಾಂತಕುಮಾರ್, ಜಿಲ್ಲಾ ಉಪಾಧ್ಯಕ್ಷರಾದ ಹರೀಶ್, ಚಂದ್ರು, ಪದಾಧಿಕಾರಿಗಳಾದ ಮಹೇಶ್, ಪಿ.ಬಾಲಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.

'ಅತ್ಯಾಚಾರ ಸಂತ್ರಸ್ತೆ' ಮದುವೆ: ರೇಪ್ ಕೇಸ್ ರದ್ದುಗೊಳಿಸಿದ 'ಹೈ'



ಬೆಂಗಳೂರು, ಜ.17– ಅತ್ಯಾಚಾರಕ್ಕೊಳಗಾಗಿದ್ದ ಸಂತ್ರಸ್ತೆಯ ಮದುವೆಯಾಗಿ ಬಾಳು ನೀಡಿದ ಆರೋಪಿ ವಿರುದ್ಧದ ಪ್ರಕರಣವನ್ನು ರದ್ದು ಮಾಡಿ ಹೈಕೋರ್ಟ್ ಆದೇಶ ಹೊರಡಿಸಿದೆ.

ಬೆಂಗಳೂರಿನ ಯುವತಿಯೊಬ್ಬರು 2022ರಲ್ಲಿ ಪೊಲೀಸರಿಗೆ ಅತ್ಯಾಚಾರದ ದೂರು ನೀಡಿದ್ದರು. ಹುಟ್ಟು ಹಬ್ಬದ ಆಚರಣೆಗಾಗಿ ಮನೆಗೆ ಕರೆದು, ಮದ್ಯಪಾನ ಮಾಡಿ ತನ್ನ ಮೇಲೆ ಅತ್ಯಾಚಾರ ಎಸಗಿದ ಎಂದು ಆರೋಪಿಸಿದ್ದರು. ನಂತರ ಪೊಲೀಸರು ಆರೋಪಿ ವಿರುದ್ಧ ಅತ್ಯಾಚಾರ, ಜೀವ ಬೆದರಿಕೆ ಆರೋಪಗಳಡಿ ಎಫ್‌ಐಆರ್ ದಾಖಲಿಸಿದ್ದರು.

ನಂತರ ಸಂತ್ರಸ್ತೆಯನ್ನು ಆರೋಪಿ ವಿವಾಹವಾದರೂ ಕೂಡ ಪೊಲೀಸರು ಆರೋಪಿಯನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಆದರೆ, ಆರೋಪಿ ಪ್ರಕರಣವನ್ನು ರದ್ದುಮಾಡುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದನು. ಅರ್ಜಿ ವಿಚಾರಣೆ ನಡೆಸಿದ ಕೋರ್ಟ್ ಅರ್ಜಿದಾರರ ಪರ ವಕೀಲರ ವಾದ ಆಲಿಸಿ ಸಂತ್ರಸ್ತೆಯನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಸೂಚಿಸಿ ಪ್ರಕರಣವನ್ನು ರದ್ದುಗೊಳಿಸಿ, ಆದೇಶಿಸಿದೆ.

27ಕ್ಕೆ ಮೋದಿ ಅವರಿಂದ ಪರೀಕ್ಷಾ ಪೇ ಚರ್ಚಾ



ರಾಜ್ಯದಲ್ಲೂ ಅಗತ್ಯ ಸಿದ್ಧತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಜ.27ರಂದು 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮ ಆಯೋಜಿಸಿದ್ದು, ರಾಜ್ಯದ ಮಕ್ಕಳು ಕಾರ್ಯಕ್ರಮದ ಗರಿಷ್ಠ ಪ್ರಯೋಜನ ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಸೂಚಿಸಿದರು. ನಗರದಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳ ಜತೆ ಪೂರ್ವ ಸಿದ್ಧತೆಗಳ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಮಕ್ಕಳು ಒತ್ತಡದಿಂದ ಹೊರಬಂದು ಖುಷಿಯಿಂದ ಪರೀಕ್ಷೆ ಬರೆಯುವಂತೆ ಪ್ರೋತ್ಸಾಹಿಸಲು ದೆಹಲಿಯ ಟಾಲ್ಕಟೋರಾ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಆನ್‌ಲೈನ್, ಪತ್ರಗಳ ಮೂಲಕ ಮಕ್ಕಳು, ಪಾಲಕರು ಕೇಳಿರುವ ಪ್ರಶ್ನೆಗಳಿಗೆ ಪ್ರಧಾನಿ ಉತ್ತರಿಸುವರು. ಮಾಹಿತಿಗೆ https://www.mygov.in/ppc–2023ಗೆ ಸಂಪರ್ಕಿಸಬಹುದು. ಹೆಚ್ಚಿನ ಮಕ್ಕಳು ಪ್ರಯೋಜನ ಪಡೆಯಲು ಶಾಲೆಗಳಲ್ಲಿ 'ಸ್ಕ್ರೀನ್' ವ್ಯವಸ್ಥೆ ಕಲ್ಪಿಸಬೇಕು. ಪೋಷಕರೂ ಭಾಗವಹಿಸಬೇಕು ಎಂದರು. ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್, ಆಯುಕ್ತ ವಿಶಾಲ್, ಸಮಗ್ರ ಕರ್ನಾಟಕ ಯೋಜನಾ ನಿರ್ದೇಶಕಿ ಕಾವೇರಿ ಇದ್ದರು.



ನೂತನ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅವರನ್ನು ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಭಾಸ್ಕರ್, ಪಟೇಲ್ ರಂಗಸ್ವಾಮಿ ಆತ್ಮೀಯವಾಗಿ ಅಭಿನಂದಿಸಿದರು.



ಭಾನುವಾರ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ತೊಣಚಿಕೊಪ್ಪಲಿನಲ್ಲಿ ಕೆಪಿಸಿಸಿ (ಓಬಿಸಿ) ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ ನೇತೃತ್ವದಲ್ಲಿ ರಾಸುಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಕಿಚ್ಚು ಹಾಯಿಸಲಾಯಿತು. ಈ ವೇಳೆ ಫೋಟೋ ರಾಜಣ್ಣ, ಸುರೇಶ್, ಮಂಜು, ಶ್ರೀನಿವಾಸ್, ರಾಘರಾಮು, ಪೈ.ಬೀರೇಶ್, ದರ್ಶನ್, ರವಿ, ಸಾಗರ್, ವಿನೋದ್, ವಿಕಾಶ್, ಯತಿರಾಜು, ದೀಪು ಇನ್ನಿತರರಿದ್ದರು.

ನಿಧನ

ಸರೋಜಮ್ಮ



ಕೊಳ್ಳೇಗಾಲ ತಾಲೂಕಿನ ದೊಡ್ಡಿಂದುವಾಡಿ ಗ್ರಾಮದ ರಾಜ್ಯ ರೈತ ಸಂಘದ ಹೋರಾಟಗಾರರು ಹಾಗೂ 24 ಮನೆ ತೆಲುಗು ಶೆಟ್ಟರ ಜನಾಂಗದ ಹಿರಿಯರಾದ ದಿವಂಗತ ನಾರಾಯಣಶೆಟ್ಟಿ ಅವರ ಪತ್ನಿ ಸರೋಜಮ್ಮ (85) ಅನಾರೋಗ್ಯದಿಂದ ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ರಮಾಬಾಯಿನಗರದಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಂದೇಗಾಲ ಸುನಿಲ್



ಗುಂಡ್ಲುಪೇಟೆ ತಾಲೂಕಿನ ಕಂದೇಗಾಲ ಗ್ರಾಮದ ನಿವಾಸಿ ಹಾಗೂ ಜೆಸಿಬಿ ಡ್ರೈವರ್ ಸುನಿಲ್(25) ಮಂಗಳವಾರ ಬೆಳಿಗ್ಗೆ ನಿಧನರಾದರು. ಮೃತರು ಪತ್ನಿ ಪ್ರತಿಮಾ, ತಂದೆ ನಿಂಗಯ್ಯ, ತಾಯಿ ಚೆನ್ನಾಜಮ್ಮ, ಸಹೋದರ ನಾಗರಾಜು, ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ಸಂಜೆ ನೆರವೇರಿತು.

ಎನ್.ಶ್ರೀನಿವಾಸ್



ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಪರಿಚಾರಕರಾದ ಎನ್.ಶ್ರೀನಿವಾಸ್ ಮಂಗಳವಾರ ನಿಧನರಾದರು. ಮೃತ ಎನ್.ಶ್ರೀನಿವಾಸ್ ಅವರಿಗೆ 54 ವರ್ಷ ವಯಸ್ಸಾಗಿದ್ದು, ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜ.18) ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ.

ಜ.22, ರಾಷ್ಟ್ರ ಮಟ್ಟದ ಶ್ವಾನ ಪ್ರದರ್ಶನ ಸ್ಪರ್ಧೆ

ಮೈಸೂರು,ಜ.17(ಪಿಎಂ)–ಕೆನ್ನೈನ್ ಕ್ಲಬ್ ಆಫ್ ಮೈಸೂರು ವತಿಯಿಂದ ಮೈಸೂರಿನಲ್ಲಿ ಜ.22ರಂದು ರಾಷ್ಟ್ರ ಮಟ್ಟದ ಶ್ವಾನ ಪ್ರದರ್ಶನ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕ್ಲಬ್‌ನ ಅಧ್ಯಕ್ಷ ಬಿ.ಪಿ.ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿಯ ಸ್ಕೌಟ್ಸ್ ಅಂಡ್ ಗೈಡ್ಸ್ ಆವರಣದಲ್ಲಿ ಅಂದು ಬೆಳಗ್ಗೆ 9ಕ್ಕೆ ಪ್ರದರ್ಶನ ಸ್ಪರ್ಧೆಗೆ ಚಾಲನೆ ದೊರೆಯಲಿದೆ. ಕೆನೆಲ್ ಕ್ಲಬ್ ಆಫ್ ಇಂಡಿಯಾದ ಮಾನದಂಡಗಳಡಿ ಸ್ಪರ್ಧೆ ನಡೆಯಲಿದ್ದು, ಅದರಂತೆ ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಸಬೇಕು ಹಾಗೂ ಮೂರು ತಲೆಮಾರಿನ ವಂಶದ ದಾಖಲೆ ಪ್ರಮಾಣ ಪತ್ರ ಹೊಂದಿರಬೇಕು ಎಂದು ಹೇಳಿದರು.

ಈಗಾಗಲೇ 400ಕ್ಕೂ ಹೆಚ್ಚು ಶ್ವಾನಗಳ ನೋಂದಣಿ ಆಗಿದೆ. ಎಲ್ಲಾ ವಿಭಾಗಗಳಿಂದ ಭಾಗವಹಿಸುವ ಒಟ್ಟು ಶ್ವಾನಗಳ ಪೈಕಿ 'ಬೆಸ್ಟ್ ಇನ್ ಶೋ'ಗೆ 9 ಶ್ವಾನಗಳು ಆಯ್ಕೆಯಾಗಲಿವೆ. ಪ್ರದರ್ಶನದ ವೇಳೆ ತಂಟೆ ಮಾಡುವ ಶ್ವಾನಗಳನ್ನು ಸ್ಪರ್ಧೆಯಿಂದ ಹೊರ ಹಾಕುವ ಅಧಿಕಾರವನ್ನು ತೀರ್ಪುಗಾರರು ಹೊಂದಿರುತ್ತಾರೆ. ಯಾವುದೇ ಮಿಶ್ರತಳಿ (ಕ್ರಾಸ್ ಬ್ರೀಡ್) ಶ್ವಾನಗಳಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಇಲ್ಲ. ಸ್ಥಳದಲ್ಲಿ ನೋಂದಣಿಗೆ ಅವಕಾಶ ಇಲ್ಲವಾಗಿದ್ದು, ಪ್ರದರ್ಶನಕ್ಕೆ ಮೂರು ದಿನಗಳ ಮುನ್ನ www.dogsnaows.com ಮೂಲಕ ಆನ್‌ಲೈನ್‌ನಲ್ಲಿ ನೋಂದಣಿ ಆಗಿರಬೇಕು. ಇಂದು ಸಂಜೆ 7ಕ್ಕೆ ನೋಂದಣಿ ಮುಕ್ತಾಯಗೊಳ್ಳಲಿದೆ ಎಂದು ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಕೆನ್ನೈನ್ ಕ್ಲಬ್ ಆಫ್ ಮೈಸೂರು ವತಿಯಿಂದ ಹಮ್ಮಿಕೊಂಡಿರುವ ರಾಷ್ಟ್ರ ಮಟ್ಟದ ಶ್ವಾನ ಪ್ರದರ್ಶನ ಸ್ಪರ್ಧೆಯ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಎಡದಿಂದ ಕೆನ್ನೈನ್ ಕ್ಲಬ್ ಆಫ್ ಮೈಸೂರು ಪೋಷಕ ವಿನೀತ್, ಪದಾಧಿಕಾರಿಗಳಾದ ಗಿರೀಶ್, ತೇಜಸ್ವಿ, ಡಾ.ಸಂಜೀವ್‌ಮೂರ್ತಿ, ಅಧ್ಯಕ್ಷ ಬಿ.ಪಿ.ಮಂಜುನಾಥ್, ಉಪಾಧ್ಯಕ್ಷ ಡಾ.ಡಿ.ಟಿ.ಜಯರಾಮಯ್ಯ, ಪದಾಧಿಕಾರಿಗಳಾದ ಅಭಿಷೇಕ್‌ಹೆಗ್ಡೆ, ಮನೋಹರ್ ಅವರನ್ನು ಕಾಣಬಹುದು.

ದೇಶ–ವಿದೇಶದ 40ಕ್ಕೂ ಹೆಚ್ಚು ತಳಿಗಳು ಸ್ಪರ್ಧೆಯಲ್ಲಿ ಭಾಗವಹಿಸಲಿವೆ. 4ರಿಂದ 6 ತಿಂಗಳು ವಿಭಾಗ, 6ರಿಂದ 12, 12ರಿಂದ 18, 18ರಿಂದ 36 ತಿಂಗಳು ವಿಭಾಗಗಳು ಮತ್ತು 36 ತಿಂಗಳ ಮೇಲ್ಪಟ್ಟ ಮುಕ್ತ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, ಇವುಗಳಲ್ಲಿ ಗಂಡು ಮತ್ತು ಹೆಣ್ಣು ಶ್ವಾನಗಳ ಪ್ರತ್ಯೇಕ ವಿಭಾಗಗಳೂ ಇರಲಿವೆ. ಎಲ್ಲಾ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಸ್ಥಾನ, 'ಬೆಸ್ಟ್ ಆಫ್ ಬ್ರೀಡ್', 'ಬೆಸ್ಟ್ ಇನ್ ಶೋ' ಸ್ಥಾನಕ್ಕೆ ಆಕರ್ಷಕ ಟ್ರೋಫಿ ಹಾಗೂ ಪ್ರಮಾಣ ಪತ್ರ ನೀಡಲಾಗುವುದು ಎಂದರು.

ಸಂಜೆ 8ಕ್ಕೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದ್ದು, ತೀರ್ಪುಗಾರರಾಗಿ ಚೆನ್ನೈನ ಸಿ.ವಿ.ಸುದರ್ಶನ್, ಬೆಂಗಳೂರಿನ ಟಿ.ಪ್ರೀತಂ, ಯಶೋಧರ ಹೇಮಚಂದ್ರ ಪಾಲ್ಗೊಳ್ಳಲಿದ್ದಾರೆ. ಸಾರ್ವಜನಿಕರು ಶ್ವಾನ ಪ್ರದರ್ಶನ ವೀಕ್ಷಿಸಲು 50 ರೂ.ಗಳ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಕ್ಲಬ್‌ನ ಉಪಾಧ್ಯಕ್ಷ ಡಾ.ಡಿ.ಟಿ.ಜಯರಾಮಯ್ಯ ಮಾತನಾಡಿ, ದೇಸಿಯ ತಳಿಗಳ ವಿಶೇಷ ಶ್ವಾನ ಪ್ರದರ್ಶನವನ್ನೂ ಏರ್ಪಡಿಸಿದ್ದು, ದೇಸಿಯ ತಳಿಯಾದ ಮುಧೋಳ್ ಶ್ವಾನಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿವೆ ಎಂದರು. ಬಳಿಕ ಶ್ವಾನ ಪ್ರದರ್ಶನ ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಕೆನ್ನೈನ್ ಕ್ಲಬ್ ಆಫ್ ಮೈಸೂರು ಕಾರ್ಯದರ್ಶಿ ಡಾ.ಸಂಜೀವ್ ಮೂರ್ತಿ, ಪದಾಧಿಕಾರಿಗಳಾದ ಗಿರೀಶ್, ತೇಜಸ್ವಿ, ಅಭಿಷೇಕ್ ಹೆಗ್ಡೆ, ಮನೋಹರ್, ಪೋಷಕ ವಿನಿತ್ ಗೋಷ್ಠಿಯಲ್ಲಿದ್ದರು.

ವೈದ್ಯರ ನೇಮಕಾತಿ ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜ.17–ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಯೋಜನೆಯಡಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪೂರ್ಣಕಾಲಿಕ ವೈದ್ಯರು (ಎಂಬಿಬಿಎಸ್) 3 ಹಾಗೂ 15ನೇ ಹಣಕಾಸಿನ ಯೋಜನೆಯಡಿ ಪ್ರಾರಂಭಿಸಲಾಗಿರುವ ನಮ್ಮ ಕ್ಲಿನಿಕ್‌ಗಳಿಗೆ ವೈದ್ಯರು(ಎಂ.ಬಿ.ಬಿ.ಎಸ್) 3 ಹುದ್ದೆಗಳ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ 2022–23ನೇ ಸಾಲಿಗೆ ನೇಮಕ ಮಾಡಿಕೊಳ್ಳಲು ನೇರ ಸಂದರ್ಶನವನ್ನು ಜನವರಿ 20 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸದರಿ ಸಂದರ್ಶನದಲ್ಲಿ ಹಾಜರಾಗುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಂಪರ್ಕಿಸಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ಸದಸ್ಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಮೈಸೂರಲ್ಲಿ 14ನೇ ಬುಡಕಟ್ಟು ಯುವಜನ ವಿನಿಮಯ ಕಾರ್ಯಕ್ರಮ

ಮೈಸೂರು,ಜ.17(ಪಿಎಂ)– ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯದ ಮೈಸೂರು ಜಿಲ್ಲಾ ನೆಹರು ಯುವ ಕೇಂದ್ರದ ವತಿಯಿಂದ ಭಾರತ ಸರ್ಕಾರದ ಗೃಹ ಮಂತ್ರಾಲಯದ ಸಹಯೋಗದಲ್ಲಿ 14ನೇ ಬುಡಕಟ್ಟು ಯುವಜನ ವಿನಿಮಯ ಕಾರ್ಯಕ್ರಮವು ಜ.18ರಿಂದ 24ರವರೆಗೆ ಮೈಸೂರಿನ ಮಾನಸ ಗಂಗೋತ್ರಿಯ ಲಲಿತ ಕಲಾ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ ಎಂದು ಬೆಂಗಳೂರಿನ ನೆಹರು ಯುವ ಕೇಂದ್ರ ಸಂಘಟನೆಯ ಕ್ಷೇತ್ರೀಯ ನಿರ್ದೇಶಕ ಎಂ.ಎನ್.ನಟರಾಜ್ ತಿಳಿಸಿದರು.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 7 ದಿನಗಳ ಕಾಲ ನಡೆಯುವ ಈ ವಿನಿಮಯ ಕಾರ್ಯಕ್ರಮದಲ್ಲಿ ಛತ್ತೀಸ್‌ಗಡ, ಜಾರ್ಖಂಡ್, ಒಡಿಶಾ, ತೆಲಂಗಾಣ, ಮಹಾರಾಷ್ಟ್ರ ಹಾಗೂ ಬಿಹಾರ ಸೇರಿದಂತೆ 6 ರಾಜ್ಯಗಳಿಂದ 200 ಯುವಜನರು ಹಾಗೂ 20 ಮಂದಿ ಉಸ್ತುವಾರಿ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಇವರಿಗೆ ಸರಸ್ವತಿಪುರಂನ ಯೂತ್ ಹಾಸ್ಟೆಲ್ ಮತ್ತು ಎನ್‌ಎಸ್‌ಎಸ್ ಭವನದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದರು.



ಜ.18ರಂದು ಮಧ್ಯಾಹ್ನ 2.30ಕ್ಕೆ ಶಿಬಿರಾರ್ಥಿಗಳು ನೋಂದಣಿ ಪ್ರಕ್ರಿಯೆ ನಡೆಯಲಿದೆ. ಜ.19ರಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಲಿದ್ದು, ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಕಿರುಹೊತ್ತಿಗೆ ಬಿಡುಗಡೆ ಮಾಡಲಿದ್ದಾರೆ. ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ವಿ.ಶ್ರೀನಿವಾಸಪ್ರಸಾದ್, ಸಮಲತಾ ಅಂಬರೀಶ್ ಸೇರಿದಂತೆ ಮೊದಲಾದ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಅವಕಾಶ ವಂಚಿತ ಬುಡಕಟ್ಟು ಯುವ ಜನತೆಗೆ ಅವಕಾಶ ಕಲ್ಪಿಸಿ ಬೇರೆ ಬೇರೆ ರಾಜ್ಯಗಳ ಸಂಸ್ಕೃತಿ, ಕಲೆ, ಆಹಾರ ಪದ್ಧತಿಗಳು, ಆಚಾರ–ವಿಚಾರ, ಉಡುಗೆ–ತೊಡುಗೆ, ಸ್ಥಳ ಪರಿಚಯ, ಭಾಷಾ ಕಲಿಕೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಪರಿಚಯ ಮಾಡಿಕೊಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಜ.21ರಂದು ಅವರಿಗೆ ಮೈಸೂರಿನ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ಅವಕಾಶ ಕಲ್ಪಿಸಲಾಗುವುದು. ಮೈಸೂರು ಅರಮನೆ, ಚಾಮುಂಡಿಬೆಟ್ಟ, ಕೆಆರ್‌ಎಸ್ ಮೊದಲಾದ ಸ್ಥಳಗಳಿಗೆ ಕರೆದೊಯ್ಯಲಾಗುವುದು. ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮ, ವಿಚಾರ ಸಂಕಿರಣ, ಸಂವಾದ ಸೇರಿದಂತೆ ಹತ್ತು ಹಲವು ವೈವಿಧ್ಯ ಕಾರ್ಯಕ್ರಮಗಳು ಜರುಗಲಿವೆ ಎಂದರು. ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಮೈಸೂರು ನೆಹರು ಯುವ ಕೇಂದ್ರದ ಕಾರ್ಯಕ್ರಮ ಅಧಿಕಾರಿ ಚಿನ್ನಗಿರಿಗೌಡ ಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.1.2023 ಬುಧವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಅನುರಾಧ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿಎಸ್‌ಎಸ್ ಯೋಗದ ಮಾತು, ಪ್ರಸ್ತುತಿ–ಯೋಗಶಿಕ್ಷಕ ಡಿ.ಶ್ರೀಹರಿ, 6.40 ಅರಿವಿನ ಶಿಖರ, ಗಾಯನ–ದೀಪಿಕಾ ಪಾಂಡುರಂಗಿ, ಕೆ.ಬಿ.ಸುನೀತಾ ಆಚಾರ್ಯ ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ.ಜ್ಯೋತಿ ಶಂಕರ್, 9.00 ವೃತ್ತಿ ಮಾರ್ಗದರ್ಶನ–ಸಸ್ಯಶಾಸ್ತ್ರ ಅಂದರೆ ಬಾಟನಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿ ಪರ ಅವಕಾಶಗಳು ಕುರಿತು ಡಾ.ಮಹದೇವಕುಮಾರ್ ಅವರೊಂದಿಗೆ ಮಾತುಕತೆ, 10.00 ಹಿಂದೂಸ್ಥಾನಿ ಸಂಗೀತ–ಗಣಪತಿ ಭಟ್–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ 'ನೂಡಲ್‌ಗೆ ಸಬ್ಸಿಟಿಟ್ಯೂಟ್ ನಮ್ಮಲ್ಲಿಲ್ವಾ', ರಚನೆ–ಇ.ಆರ್.ರಾಮಚಂದ್ರನ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಸಮನ್ವಿತಾ ಶರ್ಮ, 3.00 ಲಯ ಸಂಭ್ರಮ–ಮೃದಂಗ ತರಂಗದಲ್ಲಿ ಲಯ ವಿನ್ಯಾಸ, ಪ್ರಸ್ತುತಿ–ಹೆಚ್.ಎಲ್. ಶಿವಶಂಕರ ಸ್ವಾಮಿ, 4.00 ಮಹಿಳಾರಂಗ–ಲೇಖಕಿ ಹಾಗೂ ವನ್ಯಜೀವಿ ಛಾಯಾಗ್ರಾಹಕ ದೇವಮಣಿ ದಿವ್ಯಾ ಅವರೊಂದಿಗೆ ಆತ್ಮೀಯ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ರೈತರಲ್ಲಿ ಆರ್ಥಿಕ ಸಾಕ್ಷರತೆ ವಿಚಾರವಾಗಿ ಡಿ.ಟಿ.ವಂಕಟೇಶ್ ಅವರೊಂದಿಗೆ ಸಂದರ್ಶನ, 9.30 ಯಶೋಗಾಥೆ–ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳೊಂದಿಗೆ ಸಂದರ್ಶನ, 10.00 ಜನಪದಗೀತೆ, 10.30 ಸವಿನೆನಪು

■ **ಶ್ರೀ ಚಾಮರಾಜೇಂದ್ರ ಮೃಗಾಲಯ :** ಮೃಗಾಲಯ ನಿರ್ದೇಶಕರುಗಳ ರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ: ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಜಾವೇದ್ ಅಕ್ತರ್, ಅಧ್ಯಕ್ಷತೆ: ಕರ್ನಾಟಕ ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಂ.ಶಿವಕುಮಾರ್, ಮುಖ್ಯ ಅತಿಥಿಗಳು: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜ್ ಕಿಶೋರ್ ಸಿಂಗ್, ಕೇಂದ್ರ ಮೃಗಾಲಯ ಪ್ರಾಧಿಕಾರ, ನವದೆಹಲಿ, ಸದಸ್ಯ ಕಾರ್ಯದರ್ಶಿ ಡಾ.ಸಂಜಯ್‌ಕುಮಾರ್ ಶುಕ್ಲ, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಪಿ.ರವಿ, ವಿಶೇಷ ಆಹ್ವಾನಿತರು: ಕರ್ನಾಟಕ ಮೃಗಾಲಯ ಪ್ರಾಧಿಕಾರ ಸದಸ್ಯರಾದ ಗೋಕುಲ್ ಗೋವರ್ಧನ್, ಶ್ರೀಮತಿ ಜ್ಯೋತಿ ರೇಚಣ್ಣ, ಸ್ಥಳ: ರ್‍ಯಾಡಿಸನ್ ಬ್ಲೂ ಹೋಟೆಲ್ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಮಹಾರಾಜ ಕಾಲೇಜು:** ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಪ್ರೊ.ಸಿ.ವಿ.ಶ್ರೀಧರ, ಮುಖ್ಯ ಭಾಷಣಕಾರರು: ಸಹ ಪ್ರಾಧ್ಯಾಪಕರಾದ ಡಾ.ಜೆ.ಸುಧಾ, ವಿಶೇಷ ಆಹ್ವಾನಿತರು: ಸಂಶೋಧಕ ಹೆಚ್.ಜಿ.ದೀಪ ಬುದ್ದೆ, ಸ್ಥಳ: ಜೂನಿಯರ್ ಬಿ.ಎ.ಹಾಲ್, ಬೆಳಗ್ಗೆ 11ಕ್ಕೆ.

■ **ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ :** ಡಾ.ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳವರ 78ನೇ ಜನ್ಮ ದಿನಾಚರಣೆ, ಪುಷ್ಪಾರ್ಚನೆ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸಂಸ್ಕೃತಿ ಚಿಂತಕ ಡಾ.ರಘುರಾಂ ವಾಜಪೇಯಿ, ಸಾಹಿತಿ ಬನ್ನೂರು ರಾಜು, ಸಾಹಿತ್ಯ ಲೋಕದ ಅಧ್ಯಕ್ಷ ಡಾ. ವೈ.ಡಿ.ರಾಜಣ್ಣ, ಒಕ್ಕಲಿಗರ ಮಹಾಸಭಾದ ರಾಜ್ಯಾಧ್ಯಕ್ಷ ಎನ್.ಬೆಟ್ಟೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಈ.ಸಿ.ನಿಂಗರಾಜೇಗೌಡ, ಗೌರವ ಸಲಹೆಗಾರ ಲಯನ್ ಕೆ.ದೇವೇಗೌಡ, ಡಾ.ಬಿ.ಎನ್.ರವೀಶ್, ಕೆ.ಬಿ.ಲಿಂಗರಾಜು, ಎಂ.ಎನ್. ಚಂದ್ರಶೇಖರ್, ವಿಕ್ರಂ ಅಯ್ಯಂಗಾರ್, ಸ್ಥಳ: ಸಂಘದ ಆವರಣ, ಶಿವರಾಂಪೇಟೆ, ಮಧ್ಯಾಹ್ನ 12.30ಕ್ಕೆ.


■ **ಸಕ್ಷಮ ಕರ್ನಾಟಕ, ದಕ್ಷಿಣ ಪ್ರಾಂತ್ಯ :** ಲೂಯಿ ಬ್ರೈಲ್ ದಿನಾಚರಣೆ ಅಂಗವಾಗಿ ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಲಿಪಿ ಓದುವ ಹಾಗೂ ಗೀತ ಗಾಯನ ಸ್ಪರ್ಧೆ, ಸ್ಥಳ: ಗೋಪಾಲಸ್ವಾಮಿ ಪಿಯು ಕಾಲೇಜು, ಮಧ್ಯಾಹ್ನ 3ಕ್ಕೆ.

■ **ಚಿನ್ಮಯ ಮಿಷನ್:** ಜ್ಞಾನ ಯಜ್ಞದ ಅಂಗವಾಗಿ ಸ್ವಾಮೀಜಿಯವರಿಂದ "ನಾರದ ಭಕ್ತಿಸೂತ್ರ" ಕುರಿತು ಸಂಜೆ 6:30ರಿಂದ 8ರವರೆಗೆ ಕನ್ನಡದಲ್ಲಿ ಪ್ರವಚನ, ಸಂಜೆ 6ರಿಂದ 6:30ರವರೆಗೆ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: ಚಿನ್ಮಯ ಮಿಷನ್ ಕೇಂದ್ರ ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ.

■ **ರೋಟರಿ ಮೈಸೂರು ಮಿಡ್‌ಟೌನ್ :** ಪಿರಿಯಾಪಟ್ಟಣ ತಾಲೂಕು ಕೋಗಿಲವಾಡಿಯ ಕೆ.ಎಸ್.ಅವಿನಾಶ್ ಅವರಿಗೆ ಪ್ರಗತಿಪರ ರೈತ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು : ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಸ್ಥಳ: ರೋಟರಿ ಕೇಂದ್ರ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 7ಕ್ಕೆ.

■ **ಅಭಿಯಂತರರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು:** 30ನೇ ವಾರ್ಷಿಕೋತ್ಸವ ಸಂಭ್ರಮದ ಅಂಗವಾಗಿ ರಾಷ್ಟ್ರೀಯ ರಂಗ ಉತ್ಸವ, ಮಂಗಳೂರಿನ ಅಸ್ತಿತ್ವ ಕಲಾತಂಡದಿಂದ ಕೆಂಡೋನಿಯನ್ಸ್ (ಕನ್ನಡ) ನಾಟಕ ಪ್ರದರ್ಶನ, ರಚನೆ : ಎಂ.ಪಿ. ರಾಜೇಶ್, ನಿರ್ದೇಶನ : ಅರುಣ್ ಲಾಲ್, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ.


ಸುತ್ತೂರು ಜಾತ್ರಾ ಮಹೋತ್ಸವ



■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ:** ಸುತ್ತೂರು ಜಾತ್ರಾ ಮಹೋತ್ಸವ, ಬೆಳಗ್ಗೆ 4ಕ್ಕೆ ಮಹಾಸಂಕಲ್ಪಪೂರ್ವಕ ಮಹಾರುದ್ರಾಭಿಷೇಕ, ಬೆಳಗ್ಗೆ 6.30ಕ್ಕೆ ಗ್ರಾಮದ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಬೆಳಗ್ಗೆ 6.30ಕ್ಕೆ ಹೊರಳ ವಾಡಿ ಸ್ನೇಹ ಸೌಹಾರ್ದ ಶಾಂತಿ ಪಥಸಂಲನ, ಷಟ್‌ಸ್ಥಲ ಧ್ವಜಾರೋಹಣ: ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು, ಧರ್ಮ ಸಂದೇಶ: ಶ್ರೀ ಸಾಂಬ ಸದಾಶಿವ ಸ್ವಾಮಿಗಳು, ಸಂಜೆ 4ಕ್ಕೆ ಸಾಂಸ್ಕೃತಿಕ ಮೇಳ, ಕೃಷಿ ಮೇಳ, ಸಿರಿಧಾನ್ಯ ಮೇಳ, ವಸ್ತು ಪ್ರದರ್ಶನ, ಆರೋಗ್ಯ ತಪಾಸಣಾ ಶಿಬಿರ, ರಂಗೋಲಿ ಹಾಗೂ ಸೋಬಾನೆ ಪದ ಸ್ಪರ್ಧೆ, ದೋಣಿ ವಿಹಾರ ಉದ್ಘಾಟನೆಗಳು, ಕೃತಿ ಬಿಡುಗಡೆ, ಸಮ್ಮುಖ: ಶ್ರೀ ಚಿದಾನಂದ ಸ್ವಾಮಿಗಳು, ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳು, ಅಧ್ಯಕ್ಷತೆ: ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ವಸ್ತು ಪ್ರದರ್ಶನ ಉದ್ಘಾಟನೆ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ, ಕೃಷಿ ಮೇಳ: ಕೃಷಿ ಸಚಿವ ಬಿ.ಸಿ.ಪಾಟೀಲ್, ಆರೋಗ್ಯ ತಪಾಸಣಾ ಶಿಬಿರ: ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್, ಸಾಂಸ್ಕೃತಿಕ ಮೇಳ: ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಕೃತಿ: ಭಜನಾಂಜಲಿ ಬಿಡುಗಡೆ: ಮುಜರಾಯಿ ಸಚಿವೆ ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ, ಸಿರಿಧಾನ್ಯ ಮೇಳ: ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಂಗೋಲಿ, ಸೋಬಾನೆ ಪದ ಸ್ಪರ್ಧೆ: ಶಾಸಕಿ ಸೌಮ್ಯರೆಡ್ಡಿ, ದೋಣಿ ವಿಹಾರ: ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಶಾಸಕ ಸಿ.ಎಸ್.ನಿರಂಜನಕುಮಾರ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ವಿ.ಲೋಕೇಶ್.

ಬಿಪಿಎಲ್ ಕುಟುಂಬಗಳಿಗೆ ಮಾಸಿಕ 2000 ನೆರವು

ಕಲಬುರಗಿ: ರಾಜ್ಯದ ಪ್ರತಿ ಬಿಪಿಎಲ್ ಕುಟುಂಬಗಳಿಗೆ ಮಾಸಿಕ 2000 ನೆರವು ನೀಡಲು ನಿರ್ಧರಿಸಲಾಗಿದ್ದು, ಬರುವ ಬಜೆಟ್‌ನಲ್ಲಿ ಈ ಬಗ್ಗೆ ಘೋಷಣೆ ಹೊರಡಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ಘೋಷಿಸಿದರು.



ತಾಲೂಕಿನ ಮಾಚನಾಳ ತಾಂಡಾದಲ್ಲಿ ಮಂಗಳವಾರ ರಾತ್ರಿ ವಾಸ್ತವ್ಯ ಹೂಡಿದ್ದ ಸಂದರ್ಭದಲ್ಲಿ ಸುದ್ದಿಗಾರರೊಂ ದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನವರು ತಾವು ಅಧಿಕಾರಕ್ಕೆ ಬಂದರೆ ಮಾಸಿಕ 2000 ನೀಡುವುದಾಗಿ ಹೇಳಿದ್ದಾರೆ. ಅದು ಜುಲೈನಿಂದ ಅನ್ವಯವಾಗಲಿದೆ. ಆದರೆ ಅವರು ಅಧಿಕಾರಕ್ಕೇ ಬರುವುದಿಲ್ಲ. ಆದರೆ ನಾವು ತಕ್ಷಣವೇ ಶುರು ಮಾಡಲಿದ್ದೇವೆ. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೆಚ್ಚಿನ ಮಾಹಿತಿ ನೀಡಲಿದ್ದಾರೆ ಎಂದರು.

ಪ್ರಿಯಾಂಕಾ ಗಾಂಧಿ ಅವರು ಭಾಗವಹಿಸಿದ್ದ ನಾ ನಾಯಕಿ ಕಾರ್ಯಕ್ರಮವನ್ನು ಲೇವಡಿ ಮಾಡಿದ ಅವರು, ನಾ ನಾಯಕ, ನಾ ನಾಯಕಿ ಎಂದು ನಾವು ಹೇಳುವುದಿಲ್ಲ. ಬದಲಾಗಿ ಪ್ರಧಾನಿ ಮೋದಿ ಅವರೇ ಹೇಳಿದಂತೆ ನಾವೆಲ್ಲ ಸೇವಕರು ಎಂದರು.

ದಯಾಮರಣ: ಮಾರ್ಗಸೂಚಿ ಪರಿಷ್ಕರಣೆಗೆ ಸುಪ್ರೀಂ ಒಪ್ಪಿಗೆ

ನವದೆಹಲಿ: ದಯಾ ಮರಣಕ್ಕೆ ಸಂಬಂಧಿಸಿದಂತೆ 2018ರಲ್ಲಿ ಐತಿಹಾಸಿಕ ತೀರ್ಪು ನೀಡಿದ್ದ ಸುಪ್ರೀಂಕೋರ್ಟ್, ಮರಣ ಇಚ್ಛೆಯ ಉಯಿಲು (ಲಿವಿಂಗ್ ವಿಲ್) ಕುರಿತ ಮಾರ್ಗಸೂಚಿಯನ್ನು ಮಾರ್ಪಡಿಸಲು ಮಂಗಳ ವಾರ ಒಪ್ಪಿಗೆ ನೀಡಿದೆ. ದಿ ಇಂಡಿಯನ್‌ಸೊಸೈಟಿ ಫಾರ್‌ಕ್ರಿಟಿಕಲ್ ಕೇರ್‌ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ನ್ಯಾಯ ಪೀಠವು ವಿಚಾರಣೆಗೆ ಒಳಪಡಿಸಿತು. ಮಾರ್ಗಸೂಚಿ ಪರಿಷ್ಕರಣೆಯ ಮನವಿಯನ್ನು ನಾವು ಪರಿಗಣಿಸಿದ್ದೇವೆ. ಈ ವಿಚಾರದಲ್ಲಿ ನ್ಯಾಯಾಲಯದ ಇತಿಮಿತಿ ಏನು ಎಂಬುದರ ಅರಿವೂ ನಮಗಿದೆ. ವೈದ್ಯಕೀಯ ವಿಚಾರದಲ್ಲಿ ನಾವ್ಯಾರೂ ಪರಿಣ ತರಲ್ಲ ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ, ಅನಿರುದ್ಧ್ ಬೋಸ್, ಹೃಷಿಕೇಶ್ ರಾಯ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠ ತಿಳಿಸಿತು.



ಸದ್ಯ ಅಸ್ತಿತ್ವದಲ್ಲಿರುವ ವ್ಯವಸ್ಥೆ ಪ್ರಕಾರ ಮಾರಣಾಂತಿಕ ರೋಗದಿಂದ ಬಳಲುತ್ತಿರುವ ವ್ಯಕ್ತಿಯು ಗುಣಮುಖನಾಗುವ ಸಾಧ್ಯತೆಯೇ ಇಲ್ಲ ಅಥವಾ ಆತನ ಮಿದುಳು ನಿಷ್ಕ್ರಿಯ ವಾಗಿದೆ ಎಂಬುದನ್ನು ವೈದ್ಯಕೀಯ ಮಂಡಳಿ ಮೊದಲು ಘೋಷಿಸಬೇಕು. ಈ ಸಂಬಂಧ 2ನೇ ಅಭಿಪ್ರಾಯ ಪಡೆಯಲು ಜಿಲ್ಲಾಧಿಕಾರಿಗಳು ಸ್ವತಂತ್ರ ವೈದ್ಯಕೀಯ ಮಂಡಳಿಯನ್ನು ಸ್ಥಾಪಿಸಬೇಕು. ನಂತರ ಈ ವಿಚಾರವನ್ನು ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್‌ಗೆ ವರ್ಗಾ ಯಿಸಬೇಕಾಗುತ್ತದೆ. ಈ ಪದ್ಧತಿಯು ತುಂಬಾ ಜಟಿಲವಾಗಿದೆ ಎಂದು ಅರ್ಜಿದಾರರ ಪರ ವಕೀಲ ಅರವಿಂದ್ ಪಿ.ದಾತರ್ ಸಾಂವಿಧಾನಿಕ ಪೀಠಕ್ಕೆ ತಿಳಿಸಿದರು.

ಭೂಗತ ಪಾತಕಿ ದಾವೂದ್ ಇಬ್ರಾಹಿಂಗೆ 2ನೇ ಮದುವೆ

ಪಾಕಿಸ್ತಾನ: ಭೂಗತ ಪಾತಕಿ ದಾವೂದ್ ಇಬ್ರಾಹಿಂ ಪಾಕಿಸ್ತಾನದಲ್ಲಿ 2ನೇ ಮದುವೆ ಯಾಗಿರುವ ವಿಚಾರ ರಾಷ್ಟ್ರೀಯ ತನಿಖಾ ದಳದ ತನಿಖೆಯಲ್ಲಿ ಬಹಿರಂಗವಾಗಿದೆ.



ದಾವೂದ್‌ನ ಸೋದರಳಿಯ ಈ ಬಗ್ಗೆ ಎನ್‌ಐಎಗೆ ಮಾಹಿತಿ ನೀಡಿದ್ದು, ದಾವೂದ್ ಮರುಮದುವೆಯಾಗಿರುವುದಾಗಿ ತಿಳಿಸಿದ್ದಾನೆ. ಇದರೊಂದಿಗೆ ದಾವೂದ್ ಕರಾಚಿಯಲ್ಲಿ ವಾಸವಿರುವ ಕುರಿತು ಮಾಹಿತಿ ಲಭ್ಯವಾಗಿದೆ. ಆತ ತನ್ನ ಮೊದಲ ಪತ್ನಿ ಮೆಹ ಜಾಬಿನ್‌ಗೆ ವಿಚ್ಛೇದನ ನೀಡಿಲ್ಲ ಎಂಬ ಅಂಶವೂ ಬಹಿರಂಗವಾಗಿದೆ.

ರಾಷ್ಟ್ರೀಯ ತನಿಖಾ ಸಂಸ್ಥೆಯ ತನಿಖೆಯಲ್ಲಿ ದಾವೂದ್ ಇಬ್ರಾಹಿಂನ ಎರಡನೇ ಪತ್ನಿ ಪಾಕಿಸ್ತಾನಿ ಪಠಾಣ್ ಕುಟುಂಬದವರು ಎಂಬುದು ತಿಳಿದುಬಂದಿದೆ.

ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಗಣರಾಜ್ಯೋತ್ಸವದ ಮುಖ್ಯ ಅತಿಥಿ

ನವದೆಹಲಿ: ಈ ಬಾರಿಯ ಜನವರಿ 26ರ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಅಲ್ ಸಿಸಿ ಅವರನ್ನು ಆಹ್ವಾನಿಸಲಾಗಿದೆ. ಈ ಮೂಲಕ ಉಭಯ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ ಸಂಬಂಧ 75 ವರ್ಷಗಳನ್ನು ಪೂರೈಸಿದ 'ಮಹತ್ವದ ಸಂದರ್ಭ'ವನ್ನು ಆಚರಿಸಲು, ಪರಸ್ಪರ ಪ್ರೀತಿ, ಸ್ನೇಹವನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಔಸಫ್ ಸಯೀದ್ ಹೇಳಿದ್ದಾರೆ.



ಭಾರತ ಮತ್ತು ಈಜಿಪ್ಟ್ ನಡುವಿನ ರಾಜತಾಂತ್ರಿಕ ಬಾಂಧವ್ಯ 75 ವರ್ಷ ಪೂರೈಸಿರುವುದನ್ನು 'ಮಹತ್ವದ ಸಂದರ್ಭ' ಎಂದು ಕರೆದ ಸಯೀದ್, 1947 ಆ.15ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆತ 3 ದಿನಗಳ ನಂತರ ಉಭಯ ರಾಷ್ಟ್ರಗಳು ಅಧಿಕೃತವಾಗಿ ರಾಜತಾಂತ್ರಿಕ ಸಂಬಂಧ ಸ್ಥಾಪಿಸಿದವು ಎಂದು ತಿಳಿಸಿದ್ದಾರೆ.


ಅಪ್ರಾಪ್ತರಿಗೆ ಕಾಂಡೋಮ್, ಗರ್ಭ ನಿರೋಧಕ ಮಾತ್ರೆ ಮಾರಾಟ ಮಾಡುವಂತಿಲ್ಲ

ಬೆಂಗಳೂರು: ಇತ್ತೀಚೆಗೆ ಬೆಂಗಳೂರಿನಲ್ಲಿ ಶಾಲಾ ಮಕ್ಕಳ ಬ್ಯಾಗ್‌ನಲ್ಲಿ ಕಾಂಡೋಮ್ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ 18 ವರ್ಷದೊಳಗಿನ ಮಕ್ಕಳಿಗೆ ಸರ್ಕಾರ ಹೊಸ ನಿಯಮ ಜಾರಿಗೆ ತರುತ್ತಿದೆ. ಮಕ್ಕಳಿಗೆ ಕಾಂಡೋಮ್ ಮಾರಾಟ ಮಾಡದಂತೆ ನಿಯಮ ಜಾರಿಗೆ ತಂದಿದ್ದಾರೆ.

ಜೊತೆಗೆ ಗರ್ಭ ನಿರೋಧಕ ಮಾತ್ರೆಯನ್ನೂ ಸಹ ಮಾರಾಟ ಮಾಡುವಂತಿಲ್ಲ ಔಷಧ ನಿಯಂತ್ರಣ ಇಲಾಖೆಯಿಂದ ಖಡಕ್ ಸೂಚನೆ ನೀಡಿದ್ದಾರೆ. ಎಲ್ಲ ಮೆಡಿಕಲ್ ಶಾಪ್ ಮಾಲೀಕರಿಗೆ ಶಾಲಾ ಮಕ್ಕಳು ಹಾಗೂ 18 ವರ್ಷದೊಳಗಿನ ಮಕ್ಕಳಿಗೆ ಕಾಂಡೋಮ್ ಮತ್ತು ಗರ್ಭ ನಿರೋಧಕ ಮಾತ್ರೆ ನೀಡದಂತೆ ಖಡಕ್ ಆಗಿ ತಾಕೀತು ಮಾಡುತ್ತಿದ್ದಾರೆ.

ಶಾಲಾ ಮಕ್ಕಳು ಹಾಗೂ 18 ವರ್ಷ ದೊಳಗಿನ ಮಕ್ಕಳಿಗೆ ಕಾಂಡೋಮ್ ಮತ್ತು ಗರ್ಭ ನಿರೋಧಕ ಮಾತ್ರೆ ಸೇರಿದಂತೆ ಉತ್ತೇಜಕ ಮಾತ್ರೆಗಳನ್ನು ನೀಡಬಾರದು ಎಂದು ಸೂಚನೆ ರವಾನೆ ಆಗಿದೆ. ಕೊರೊನಾದ ನಂತರ ಮಕ್ಕಳು ಕೆಟ್ಟ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಹೀಗಾಗಿ ಮಕ್ಕಳ ಭವಿಷ್ಯದ ಬಗ್ಗೆ ಆರೋಗ್ಯ ಇಲಾಖೆ ಗಮನಹರಿಸುತ್ತಿದೆ. ಇತ್ತೀಚೆಗೆ ಶಾಲೆಗಳಿಗೆ ಸ್ಮಾರ್ಟ್ ಫೋನ್ ತರುವಂತಿಲ್ಲ ಎಂಬ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿತ್ತು. ಹಿನ್ನೆಲೆಯಲ್ಲಿ ಶಾಲೆ ಸಿಬ್ಬಂದಿಗಳು ಮಕ್ಕಳ ಬ್ಯಾಗ್‌ನ್ನು ತಪಾಸಣೆ ಮಾಡಲಾಗಿತ್ತು. ಈ ವೇಳೆ ಮಕ್ಕಳ ಬ್ಯಾಗ್‌ನಲ್ಲಿ ಸೆಲ್ ಫೋನ್‌ಗಳು, ಸ್ಮಾರ್ಟ್‌ಫೋನ್‌ಗಳು, ಜೊತೆಗೆ ಕಾಂಡೋಮ್‌ಗಳು, ಗರ್ಭನಿರೋಧಕ ಮಾತ್ರೆಗಳು ಪತ್ತೆಯಾಗಿತ್ತು. ಇದರಿಂದ ಶಾಲಾ ಸಿಬ್ಬಂದಿಗಳಿಗೆ ಶಾಕ್ ಆಗಿತ್ತು. ಇದೀಗ ಇದೆಲ್ಲಾ ಕಡಿವಾಣ ಹಾಕುವ ಸಲುವಾಗಿ ಮಕ್ಕಳಿಗೆ ಹೊಸ ನಿಯಮ ಜಾರಿ ಮಾಡಿದ್ದಾರೆ.

ಸುಶ್ಮಿತಗೆ ಪಿಹೆಚ್.ಡಿ



ಮೈಸೂರು: ಡಾ.ಪ್ರೀತಿ ಶ್ರೀಮಂಧರ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಆರ್.ಸುಶ್ಮಿತ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ವಿಶ್ವೇಶ್ವರ ಭಟ್ ಅವರ ಅಂಕಣ ಸಾಹಿತ್ಯ' ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರು ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತುಗಳನ್ನು ಅದರ ಮಾಲೀಕರಾದ ಶ್ರೀ ಎಸ್.ಪಿ. ಮೋಹನ ಬಿನ್ ದಿ॥ ಎಸ್. ಎಂ. ಪೊನ್ನಪ್ಪ, ಪಾಲೂರು ಗ್ರಾಮ, ನಾಪೋಕ್ಲು ಹೋಬಳಿ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ, ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅನುಸೂಚಿ ಸ್ವತ್ತಿನ ಸಂಬಂಧವಾಗಿ ಬೇರೆ ಯಾರಿಗಾದರೂ ಯಾವುದೇ ಹಕ್ಕು, ಆಸಕ್ತಿ, ಸ್ವಾಮ್ಯಗಳು ಇದ್ದಲ್ಲಿ, ಈ ತಿಳುವಳಿಕೆ ಪತ್ರವು ಪ್ರಕಟವಾದ ದಿನಾಂಕದಿಂದ ಏಳು ದಿನಗಳ ಒಳಗಾಗಿ ತಮಗಿರುವ ಹಕ್ಕು, ಆಸಕ್ತಿ ಮತ್ತು ಸ್ವಾಮ್ಯಗಳ ಸಂಬಂಧವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ, ದಾಖಲೆ ಸಹಿತ ನನಗೆ ಲಿಖಿತವಾಗಿ ತಿಳಿಸತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದಲ್ಲಿ, ಯಾರಿಂದಲೂ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಕ್ರಯಕ್ಕೆ ಪಡೆಯುವವರಿದ್ದು, ಆ ನಂತರ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ ಸ್ವತ್ತಿನ ವಿವರ

ಐಟಂ ನಂ.1: ಮೈಸೂರು ತಾಲೂಕು, ಇಲವಾಲ ಹೋಬಳಿ, ಕುಮಾರಬೀಡು ಗ್ರಾಮದ ಸರ್ವೆ ನಂಬರ್ 123(ಹಳೇ ನಂಬರ್ 95/ಬ್ಲಾಕ್ 15) ರ ವಿಸ್ತೀರ್ಣ 1 ಎಕರೆ ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಕರೀಸಿದ್ದನಾಯಕರವರ ಜಮೀನು, ಪಶ್ಚಿಮಕ್ಕೆ : ವೆಂಕಟನಾಯಕರವರ ಜಮೀನು, ಉತ್ತರಕ್ಕೆ: ವೆಂಕಟನಾಯಕರವರ ಜಮೀನು, ದಕ್ಷಿಣಕ್ಕೆ: ಶ್ರೀ ಎಸ್.ಪಿ. ಮೋಹನ ರವರ ಜಮೀನು.

ಐಟಂ ನಂ.2: ಮೈಸೂರು ತಾಲೂಕು, ಇಲವಾಲ ಹೋಬಳಿ, ಕುಮಾರಬೀಡು ಗ್ರಾಮದ ಸರ್ವೆ ನಂಬರ್ 126(ಹಳೇ ನಂಬರ್ 95/ಬ್ಲಾಕ್ 21) ರ ವಿಸ್ತೀರ್ಣ 2 ಎಕರೆ ಜಮೀನಿನ ಪೈಕಿ 1 ಎಕರೆ ಅನ್ಯಕ್ರಾಂತ ಜಮೀನು ಮತ್ತು 1 ಎಕರೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸ್ವಾಮೀಗೌಡರವರ ಜಮೀನು, ಪಶ್ಚಿಮಕ್ಕೆ: ಎಳವೇಗೌಡರವರ ಜಮೀನು, ಉತ್ತರಕ್ಕೆ: ಮೈಸೂರು-ಗದ್ದಿಗೆ ರಸ್ತೆ, ದಕ್ಷಿಣಕ್ಕೆ: ಕಾಳನಾಯಕರ ಜಮೀನು.

(ಹೆಚ್.ಎಂ. ಸುಧಾಕರ)
ವಕೀಲರು, ಕೆಎಆರ್ 51/97
ನಂ. 23, ಪೆಟ್ರೋಲ್ ಬಂಕ್ ಹಿಂಭಾಗ,
ನಿವೇದಿತನಗರ, ಮೈಸೂರು Ph: 94485 58136

ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರು ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ಬಿ.ಟಿ. ವಸಂತಕುಮಾರ ಬಿನ್ ಶ್ರಿ ಬಿ. ಆರ್. ಟೋಪಯ್ಯ, ಮನೆ ನಂ.1900, 13ನೇ ಮುಖ್ಯ ರಸ್ತೆ, 2ನೇ ಹಂತ, ವಿಜಯನಗರ, ಮೈಸೂರು, ಇವರುಗಳಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅನುಸೂಚಿ ಸ್ವತ್ತಿನ ಸಂಬಂಧವಾಗಿ ಬೇರೆ ಯಾರಿಗಾದರೂ ಯಾವುದೇ ಹಕ್ಕು, ಆಸಕ್ತಿ, ಸ್ವಾಮ್ಯಗಳು ಇದ್ದಲ್ಲಿ, ಈ ತಿಳುವಳಿಕೆ ಪತ್ರವು ಪ್ರಕಟವಾದ ದಿನಾಂಕದಿಂದ ಏಳು ದಿನಗಳ ಒಳಗಾಗಿ ತಮಗಿರುವ ಹಕ್ಕು, ಆಸಕ್ತಿ ಮತ್ತು ಸ್ವಾಮ್ಯಗಳ ಸಂಬಂಧವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ, ದಾಖಲೆ ಸಹಿತ ನನಗೆ ಲಿಖಿತವಾಗಿ ತಿಳಿಸತಕ್ಕದ್ದು. ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದಲ್ಲಿ, ಯಾರಿಂದಲೂ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಕ್ರಯಕ್ಕೆ ಪಡೆಯುವವರಿದ್ದು, ಆ ನಂತರ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ತಾಲೂಕು, ಇಲವಾಲ ಹೋಬಳಿ, ಕುಮಾರಬೀಡು ಗ್ರಾಮದ ಸರ್ವೆ ನಂಬರ್ 125(ಹಳೇ ನಂಬರ್ 95/ಬ್ಲಾಕ್ 16) ರ ವಿಸ್ತೀರ್ಣ 27 ಗುಂಟೆ ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಕಾಳನಾಯಕರವರ ಜಮೀನು, ಪಶ್ಚಿಮಕ್ಕೆ: ಕರೀನಾಯಕರವರ ಜಮೀನು, ಉತ್ತರಕ್ಕೆ: ಚನ್ನನಾಯಕರವರ ಜಮೀನು, ದಕ್ಷಿಣಕ್ಕೆ: ಸೋಮಣ್ಣರವರ ಜಮೀನು,

(ಹೆಚ್.ಎಂ. ಸುಧಾಕರ)
ವಕೀಲರು, ಕೆಎಆರ್ 51/97
ನಂ. 23, ಪೆಟ್ರೋಲ್ ಬಂಕ್ ಹಿಂಭಾಗ,
ನಿವೇದಿತನಗರ, ಮೈಸೂರು Ph: 94485 58136

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರ ಕಛೇರಿ, ಮೈಸೂರು ಜಿಲ್ಲೆ, ಮೈಸೂರು

ಸಂಖ್ಯೆ: ಸಿಬ್ಬಂದಿ(2)/ಹೊ.ಗು.ಬಾಂ./70/22-23 ದಿನಾಂಕ: 11.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ: SSLR/STR/BJ/43/2022-23, ದಿನಾಂಕ: 28.12.2022ರ ಪ್ರಕಾರ ಮೈಸೂರು ಜಿಲ್ಲಾವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭೂಮಾಪಕರ ಸಂಗಡ ಅಳತೆ ಕೆಲಸಕ್ಕೆ ಸಹಾಯಕರನ್ನಾಗಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸುವ ಅರ್ಹ ನೋಂದಾಯಿತ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳು ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ಮಾಹಿತಿಯು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಭಾಗವಹಿಸಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ ದಿ: 25.01.2023, ಟೆಂಡರ್ ತೆರೆಯುವ ದಿ: 06.02.2023 ರ ನಂತರ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ (ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ) ಭೂದಾಖಲೆಗಳ ಉಪನಿರ್ದೇಶಕರ ಕಚೇರಿ, ಜಿಲ್ಲಾ ಕಚೇರಿಗಳ ಸಂಕೀರ್ಣ, ಸಿದ್ಧಾರ್ಥ ನಗರ, ಮೈಸೂರು ಇಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: 7204132036, 9964307984, 9945994936

ಸಹಿ/- ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು

DIPR/DDMYS/KSMCA/884/2022-23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು

Email:apmcnanjanagud@rediffmail.com Ph:08221-226309

ಹುಲ್ಲಹಳ್ಳಿ ರಸ್ತೆ ನಂಜನಗೂಡು-571301

ಸಂ.ಕೃಉಮಾಸ(ನಂ)/396/2022-23 ದಿನಾಂಕ: 17.01.2023

ಪ್ರಕಟಣೆ (2 ನೇ ಕರೆ)


ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 50 ಮೆ.ಟನ್ ಸಾಮರ್ಥ್ಯದ ವೇಬ್ರಿಡ್ಜ್ (ಎಲೆಕ್ಟ್ರಾನಿಕ್ ತೂಕದ ಯಂತ್ರ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ಪ್ರಕಾರ ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ ಟೆಂಡರ್-ಕಂ-ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಲು ಅರ್ಹ ಪೇಟೆಕಾರ್ಯಕರ್ತರು ಹಾಗೂ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಲೆಕ್ಟ್ರಾನಿಕ್ ತೂಕದ ಯಂತ್ರದ ವಿವರ: ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 50 ಮೆ.ಟನ್ ಸಾಮರ್ಥ್ಯದ ಎಲೆಕ್ಟ್ರಾನಿಕ್ ತೂಕದ ಯಂತ್ರ. **ಎಲೆಕ್ಟ್ರಾನಿಕ್ ತೂಕದಯಂತ್ರ:** 01 **ಮಾಸಿಕ ಲೀವ್ ಆಂಡ್ ಲೈಸನ್ಸ್ ಶುಲ್ಕ:** 15,500-00 **ಪಾವತಿಸಬೇಕಾದ ಮುಂಗಡ ಠೇವಣಿ:** 31,000-00

ಷರತ್ತು ಹಾಗೂ ನಿಬಂಧನೆಗಳು: 1) ದಿ: 03.02.2023ರ ಒಳಗಾಗಿ ರೂ.500-00 ಗಳನ್ನು ಕಛೇರಿಯಲ್ಲಿ ಪಾವತಿಸಿ ಅರ್ಜಿ ಸಲ್ಲಿಸಿ ನೋಂದಾವಣೆ ಮಾಡಿಕೊಳ್ಳತಕ್ಕದ್ದು. 2) ನೋಂದಾವಣೆ ಪಡೆದ ಅರ್ಜಿದಾರರು ನಮೂನೆ 6 ರ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿ: 07.02.2023ರ ಮಧ್ಯಾಹ್ನ 12.00 ಗಂಟೆಯವರೆಗೆ. 3) ಬಹಿರಂಗ ಹರಾಜನ್ನು 07.02.2023 ರಂದು ಮಧ್ಯಾಹ್ನ 3.00 ಗಂಟೆಗೆ ನಂಜನಗೂಡು ಸಮಿತಿಯ ಆಡಳಿತ ಕಛೇರಿಯ ಸಭಾಂಗಣದಲ್ಲಿ ನಡೆಸಲಾಗುವುದು. 4) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು ಇವರ ಹೆಸರಿನಲ್ಲಿ ಮುಂಗಡ ಠೇವಣಿಯ ಡಿ.ಡಿಯನ್ನು ಖರೀದಿಸಿ ನಂಜನಗೂಡಿನಲ್ಲಿ ನಗದಾಗುವಂತೆ ಪ್ರತ್ಯೇಕ ಲಕೋಟೆಯಲ್ಲಿ ಟೆಂಡರ್ ಪೆಟ್ಟಿಗೆಯಲ್ಲಿ ಹಾಕುವುದು. 5) ಟೆಂಡರ್ ಪ್ರಕ್ರಿಯಲ್ಲಿ ಭಾಗವಹಿಸುವವರು ಖಡ್ಡಾಯವಾಗಿ ಟೆಂಡರ್ ಹಾಗು ಬಹಿರಂಗ ಹರಾಜು ಎರಡರಲ್ಲೂ ಭಾಗವಹಿಸತಕ್ಕದ್ದು. ಒಂದರಲ್ಲಿ ಭಾಗವಹಿಸಿದರೆ ಪರಿಗಣಿಸಲಾಗುವುದಿಲ್ಲ. 6) ಹೆಚ್ಚಿನ ಷರತ್ತು ಹಾಗೂ ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-	ಸಹಿ/-
(ಮಹೇಶ.ಬಿ), ಕಾರ್ಯದರ್ಶಿ	(ಎಂ.ಶಿವಮೂರ್ತಿ), ಆಡಳಿತಾಧಿಕಾರಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ನಂಜನಗೂಡು	ನಂಜನಗೂಡು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಪೂಜಾರಿ ಆರ್ ವೀರಭದ್ರಶೆಟ್ಟಿ

ಇವರು ದಿ: 07. 01. 2023 ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 18.01.2023 ಬುಧವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗೃಹ #1093, ರಮಾಬಾಯಿ ನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಪ್ರೇಮ ಎಂ., ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.

ನಕ್ಕರೆ ಅದೇ ಸ್ವರ್ಗ

ಕೆಲಸದಾಕೆ : ಅಮ್ಮಾವ್ರೆ ನಂಗೆ ಹುಚ್ಚಾಸ್ಪತ್ರೆಯಲ್ಲಿ ಕೆಲಸ ಸಿಕ್ಕಿದೆ...!
ಮನೆಯೊಡತಿ : ಅಲ್ಲಿ ಕೆಲಸ ಮಾಡೋಕೆ ನಿಂಗೇನು ಅನುಭವ ಇದೆ?
ಕೆಲಸದಾಕೆ : ಏನ್ರಮ್ಮ, ಹೀಗಂತೀರ...! ನಿಮ್ಮನೇಲಿ ಹತ್ತು ವರ್ಷದಿಂದ ಕೆಲ್ಸ ಮಾಡ್ತಾವ್ನೀ...!

ಮೈಸೂರು ಮಿತ್ರ
ಬುಧವಾರ, 18 ಜನವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........
ಬೇಸರಿಸದ ಎಚ್ಚರದ ದುಡಿಮೆಯಿಂದ ಯಾವುದೇ ವೃತ್ತಿಯಲ್ಲಿ ಖಂಡಿತಾ ಯಶಸ್ಸು ಸಾಧ್ಯ–ವೆಬ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಡೀತಾ ಇದ್ರೆ ನಂಟು, ಬೆಳಗ್ತಾ ಇದ್ರೆ ಕಂಚು

ನಿಮ್ಮ ಪತ್ರಗಳು

ಹದಗೆಟ್ಟಿರುವ ಲಲಿತಾದ್ರಿಪುರ ರಸ್ತೆ

ಮಾನ್ಯರೆ,
ಮೈಸೂರು ನಗರದ ಮಹಾತ್ಮಗಾಂಧಿ ರಸ್ತೆಯಿಂದ ಬೇವಿನ ಮರಗಳ ಸಾಲಿನ ಹತ್ತಿರ ತೂಗುದೀಪ ಶ್ರೀನಿವಾಸ್ ಸರ್ಕಲ್‌ನ ಹಿಂದೆ ಬಲಕ್ಕೆ ತಿರುಗಿ, ಲಲಿತಾದ್ರಿಪುರಕ್ಕೆ ಹೋಗುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಅದರಲ್ಲೂ ಹೆಲಿಪ್ಯಾಡ್‌ನಿಂದ ಜೆಎಸ್‌ಎಸ್ ಆಯುರ್ವೇದಿಕ್ ಆಸ್ಪತ್ರೆಯವರೆಗಿನ ರಸ್ತೆ ತೀರಾ ಹದಗೆಟ್ಟಿದೆ. ಈ ರಸ್ತೆಯ ಮೂಲಕ ಪ್ರತಿದಿನ ಸಾವಿರಾರು ವಾಹನಗಳು ಓಡಾಡುತ್ತವೆ. ರಸ್ತೆ ಗುಂಡಿ ಬಿದ್ದಿರುವುದರಿಂದ ಸಂಚಾರಿ ನಿಯಮವನ್ನು ಪಾಲಿಸುವುದು ಹಾಗೂ ಅಪಘಾತದಿಂದ ಪಾರಾಗುವುದರ ನಡುವೆ ಬ್ಯಾಲೆನ್ಸ್ ನಡೆಸಬೇಕಾಗಿದೆ.
ಲಲಿತಾದ್ರಿಪುರ, ಉತ್ತನಹಳ್ಳಿ, ಯಾಂದಳ್ಳಿ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಐಪಿಎಸ್ ನಗರ, ಜೆಎಸ್‌ಎಸ್ ಆಯುರ್ವೇದಿಕ್ ಆಸ್ಪತ್ರೆ, ಚಾಮುಂಡಿ ಪಾದದ ದೇವಸ್ಥಾನದ ಮೂಲಕ ಬೆಟ್ಟಕ್ಕೆ, ರೆಸಾರ್ಟ್‌ಗೆ, ಜೆ.ಸಿ. ನಗರದ ಪಾರ್ಕ್‌ಗೆ, ಕೆ.ಸಿ. ಲೇಔಟ್‌ಗೆ, ಗಿರಿದರ್ಶಿನಿ ಲೇಔಟ್‌ಗೆ, ಆಲನಹಳ್ಳಿಗೆ, ಸಿದ್ಧಾರ್ಥ ನಗರಕ್ಕೆ, ಮೈಸೂರು ಸಿಟಿಗೆ ಜನರು ವಾಹನಗಳಲ್ಲಿ ಓಡಾಡುತ್ತಾರೆ. ಬೆಳಿಗ್ಗೆ–ಸಂಜೆ ವಾಕಿಂಗ್ ಮಾಡಲು ಬಹಳ ಜನರು ಬರುತ್ತಾರೆ. ರಸ್ತೆಯ ಅಗಲೀಕರಣವೂ ಅನಿವಾರ್ಯವಾಗಿದೆ. ಇಲ್ಲಿ ಅಪಘಾತಗಳು ಸಂಭವಿಸುವ ಮೊದಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಕಡೆ ಗಮನಹರಿಸಿ, ಈ ರಸ್ತೆಯ ದುರಸ್ತಿ ಹಾಗೂ ಅಗಲೀಕರಣವನ್ನು ಮಾಡಬೇಕೆಂದು ಮನವಿ.
–ರುಕೆಂಗೋ ಲಲಿತಾದ್ರಿಪುರ, ಮೈಸೂರು.

ಹುತಾತ್ಮ ಜಸ್ವಂತ್ ಸಿಂಗ್ ರಾವತ್‌ಗೆ ಸೆಲ್ಯೂಟ್

ಮಾನ್ಯರೆ,
ಹುತಾತ್ಮ ಜಸ್ವಂತ್ ಸಿಂಗ್ ರಾವತ್ ಅವರ ಜೀವನ ಚರಿತ್ರೆಯನ್ನು (ಮೈ ಮಿತ್ರ 14.01.23) ಓದುಗರಿಗೆ ಉಣ ಬಡಿಸಿದ ಲೇಖಕ ಕಾರ್ಕಳ ಆನಂದಭಟ್ ಅವರಿಗೂ ಮತ್ತು ಇದನ್ನು ಪ್ರಕಟಿಸಿದ 'ಮೈಸೂರು ಮಿತ್ರ'ಕ್ಕೂ ಧನ್ಯವಾದಗಳು. ನನಗೆ ಇದುವರೆವಿಗೂ ಈ ಮಹಾನ್ ಯೋಧನ ಬಗ್ಗೆ ಗೊತ್ತೇ ಇರಲಿಲ್ಲ. ಇಂತಹ ಧೀರ ಯೋಧನ ಬಗ್ಗೆ ನನ್ನಂತೆಯೇ ಇತರರಿಗೂ ತಿಳಿಯದೇ ಇರಬಹುದು. ಆದುದರಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಈ ಯೋಧನ ಸಾಹಸವನ್ನು ಪ್ರೌಢಶಾಲೆಗೆ ಪಠ್ಯವನ್ನಾಗಿ ಮಾಡಬೇಕು ಮತ್ತು ಇದು ಶಾಶ್ವತವಾಗಿ ಪಠ್ಯವಾಗಿಯೇ ಇರಬೇಕೆಂದು ಆದೇಶ ನೀಡಬೇಕು. ಇದನ್ನು ಓದಿದ ನಮ್ಮ ಮಕ್ಕಳಲ್ಲಿ ದೇಶಾಭಿಮಾನದ ಜೊತೆ, ದೇಶ ಕಾಯುವ ಯೋಧ ಎಂದರೆ ಹೇಗಿರಬೇಕು ಎಂಬ ಅರಿವಾಗುವುದಲ್ಲದೆ, ಧೈರ್ಯದಿಂದ ಶತ್ರುಗಳ ಜೊತೆ ಹೋರಾಡಿದರೆ ಶತ್ರುಗಳೂ ಕೂಡ ಅಂತಹ ಯೋಧನಿಗೆ ಹೇಗೆ ಗೌರವ ಕೊಡುತ್ತಾರೆ ಎಂಬುದಕ್ಕೆ ಸಾಕ್ಷಿಯಾಗಲಿದೆ. ನಮ್ಮ ಶತ್ರು ದೇಶವಾದ ಚೈನಾ, ಆ ಮಹಾನ್ ಯೋಧ (ಜಸ್ವಂತ್ ಸಿಂಗ್ ರಾವತ್) ನಿಂದಾಗಿ ಯುದ್ಧದಲ್ಲಿ ತನ್ನ ಸಾಕಷ್ಟು ಯೋಧರನ್ನು ಕಳೆದುಕೊಂಡರೂ ಆ ಯೋಧನಿಗೆ ಸಲ್ಲಬೇಕಾದ ಗೌರವವನ್ನು ಯಾವ ಸಂಕೋಚವೂ ಇಲ್ಲದೆ ಸಲ್ಲಿಸಿದೆ. ಯುದ್ಧದಲ್ಲಿ ಸೋತ ಕೋಪದಿಂದ ಆತನ ತಲೆ ಕತ್ತರಿಸಿಕೊಂಡು ಹೋಗಿದ್ದ ಶತ್ರುಪಡೆ ಕೆಲ ದಿನಗಳ ನಂತರ ಕತ್ತರಿಸಿದ ಆತನ ತಲೆಯ ಜೊತೆಗೆ ಜಸ್ವಂತ್‌ನ ಕಂಚಿನ ಪ್ರತಿಮೆಯನ್ನು, ಭಾರತೀಯ ಸೇನಾಧಿಕಾರಿಗಳಿಗೆ ಸಕಲ ಮಿಲಿಟರಿ ಗೌರವದೊಂದಿಗೆ ತಂದೊಪ್ಪಿಸಿದ ಕ್ಷಣವನ್ನು ಊಹಿಸಿಕೊಂಡಲ್ಲಿ ಎಂತಹ ನಿರಭಿಮಾನಿಗೂ ದೇಶಭಕ್ತಿ ಉಕ್ಕಿ ಬರುತ್ತದೆ. ನಮ್ಮ ಕೇಂದ್ರ ಸರ್ಕಾರ ಆ ಹುತಾತ್ಮ ಯೋಧನಿಗೆ ಪ್ರತಿ ತಿಂಗಳೂ ಸಂಬಳ ಮತ್ತು ಪದೋನ್ನತಿಯನ್ನು ನೀಡುತ್ತಾ ಇನ್ನೂ ಆತನನ್ನು ಜೀವಂತವಾಗಿಯೇ ಕಾಣುತ್ತಿರುವುದನ್ನು ಕಂಡಾಗ ಒಂದು ರೀತಿಯ ಧನ್ಯತಾಭಾವ ಬರುತ್ತದೆ. ಇಂತಹ ದೇಶಭಕ್ತನನ್ನು ಪಡೆದ ಈ ದೇಶ ಧನ್ಯ ಮತ್ತು ಇದು ಆತನ ದೇಶಭಕ್ತಿಗೆ ಸಂದ ಗೌರವ. ಇಂತಹ ದೇಶಭಕ್ತ ಸೈನಿಕರು ದೇಶ ಕಾಯುತ್ತಿರುವುದರಿಂದಲೇ ನಾವುಗಳು ನೆಮ್ಮದಿಯಿಂದ ನಿದ್ದೆ ಮಾಡುತ್ತಿದ್ದೇವೆ. ಇಂತಹ ದೇಶಭಕ್ತರ ಸಂತತಿ ಹೆಚ್ಚಾಗಲಿ. ಹುತಾತ್ಮ ಯೋಧನಿಗೊಂದು ಗೌರವ ಪೂರ್ವಕ ಸೆಲ್ಯೂಟ್ ಎಂದು ಹೇಳಲಷ್ಟೇ ಸಾಧ್ಯ.
–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಸುಳ್ಳು ಸುದ್ದಿಯ ಯೂಟ್ಯೂಬ್ ಚಾನಲ್‌ಗಳು ಬ್ಯಾನ್ ಆಗಲಿ

ಮಾನ್ಯರೆ,
ದೇಶದಲ್ಲಿ ಆರು ಯೂಟ್ಯೂಬ್ ಚಾನಲ್‌ಗಳು ಚುನಾವಣೆ, ಸುಪ್ರೀಂ ಕೋರ್ಟ್, ಸಂಸತ್ತಿನಲ್ಲಿನ ಕಲಾಪಗಳು ಮತ್ತು ಸರ್ಕಾರದ ಕಾರ್ಯವೈಖರಿಯ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡುತ್ತಿರುವುದು ಕಂಡುಬಂದಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಮಾಧ್ಯಮ ಮಾಹಿತಿ ಬ್ಯೂರೋದ (PIB) 'ಫ್ಯಾಕ್ಟ್ ಚೆಕ್' ಘಟಕ ತಿಳಿಸಿದ್ದು, ಆರು ಯೂಟ್ಯೂಬ್ ಚಾನೆಲ್‌ಗಳ ಮೇಲೆ ಸರ್ಕಾರ ಕಠಿಣ ಕ್ರಮ ಕೈಗೊಂಡಿದೆ.
ಇದೇ ರೀತಿ ಇನ್ನೂ ಕೆಲ ಯೂಟ್ಯೂಬ್ ಚಾನಲ್‌ಗಳು ವೀಡಿಯೊಗಳಿಗೆ ಹೆಚ್ಚು ವೀಕ್ಷಣೆ ಮತ್ತು ವೀಡಿಯೊಗಳಿಂದ ಹೆಚ್ಚು ಹಣಗಳಿಸಲು ಅತ್ಯಾಕರ್ಷಕ ಥಂಬ್‌ನೇಲ್‌ಗಳು ಮಾಡುತ್ತಾ ವೀಕ್ಷಕರಿಗೆ ಮೋಸ ಮಾಡುತ್ತಿವೆ. ಹಾಗೆ ನೋಡುವುದಾದರೆ ಕ್ರೀಡೆ, ಸಿನಿಮಾ, ಧಾರಾವಾಹಿ ರಂಗದ ನಟ, ನಟಿಯರ, ಸೆಲೆಬ್ರಿಟಿಗಳ ಬಗ್ಗೆ ಸುಳ್ಳು ಮಾಹಿತಿ ನೀಡುತ್ತಾ ಜನರ ಭಾವನೆಯ ಜೊತೆ ಆಟವಾಡುವ ಯೂಟ್ಯೂಬ್ ಚಾನಲ್‌ಗಳ ಮೇಲೂ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಬಹಳಷ್ಟು ಕಂಟೆಂಟ್ ಕ್ರಿಯೇಟರ್ಸ್ ತಮ್ಮ ಯೂಟ್ಯೂಬ್ ಚಾನಲ್‌ಗಳ ಮೂಲಕ ಉಪಯುಕ್ತ ಮಾಹಿತಿಗಳು ನೀಡುತ್ತಾರೆ. ಹಾಗಾಗಿ ಸುಳ್ಳು ಸುದ್ದಿಯ ನೀಡುವ ಚಾನಲ್‌ಗಳಿಗೆ ಕಠಿಣ ಕ್ರಮದ ಎಚ್ಚರಿಕೆ ಇದ್ದಾಗ, ಸುಳ್ಳು ಮಾಹಿತಿ ನೀಡುವ ಯೂಟ್ಯೂಬ್ ಚಾನಲ್‌ಗಳ ವೀಡಿಯೋಗಳು ಕ್ರಮೇಣವಾಗಿ ಕಡಿಮೆಯಾಗಬಹುದು.
–ಆನಂದ ಜೇವೂರ್, ಕಲಬುರಗಿ

ಅಡ್ಡಾದಿಡ್ಡಿ ಚಲಾಯಿಸುವ ಸಾರಿಗೆ ಚಾಲಕರ ವಿರುದ್ಧ ಕ್ರಮ ಜರುಗಿಸಲಿ

ಮಾನ್ಯರೆ,
ಮೈಸೂರಿನ ರಸ್ತೆಗಳಲ್ಲಿರುವ ವೃತ್ತಗಳಲ್ಲಿ ಪ್ರಮುಖವಾಗಿರುವ ರಾಮಸ್ವಾಮಿ ವೃತ್ತವು ಕೂಡ ಒಂದು. ಈ ವೃತ್ತದಲ್ಲಿ ಮಹಾರಾಜ ಕಾಲೇಜು, ಯುವರಾಜ ಕಾಲೇಜು ಹಾಗೂ ಇತರ ಕಾಲೇಜಿನ ವಿದ್ಯಾರ್ಥಿಗಳು ಸೇರಿ ಸಾವಿರಾರು ಮಂದಿ ಬಸ್ ಹತ್ತಿ ಇಲ್ಲಿಗೆ ಬರುತ್ತಾರೆ. ಇದರೊಂದಿಗೆ ಸಾರ್ವಜನಿಕರು, ಅಧಿಕಾರಿಗಳು, ವೃದ್ಧರು ಕೂಡ ಇಲ್ಲಿಗೆ ಬಂದು ಬಸ್ ಹತ್ತುವುದುಂಟು. ಇಲ್ಲಿ ಹೆಚ್ಚಿನ ವಾಹನಗಳ ತಿರುಗಾಟವು ಇರುವುದರಿಂದ ರಸ್ತೆಯ ನಾಲ್ಕು ಮಾರ್ಗದ ಮುಂಭಾಗದಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಿದ್ದರೂ ಸಹ ಸಿಗ್ನಲ್ ಬಿಡುವುದಕ್ಕೂ ಮುಂಚೆ ತೆರಳುವುದು ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳು ಸಿಗ್ನಲ್ ಬಿಟ್ಟಾಗ ಸರಿಯಾಗಿ ವೃತ್ತವನ್ನು ಬಳಸದೆ, ವೃತ್ತದ ಮುಂಭಾಗದಲ್ಲಿ ಹೋಗುವುದು ಹೆಚ್ಚಾಗಿ ಕಂಡು ಬರುತ್ತಿದೆ. ಇದರಿಂದ ಕಾಲ್ನಡಿಗೆಯಲ್ಲಿ ತೆರಳುವವರಿಗೆ ತುಂಬಾ ಆತಂಕ ಶುರುವಾಗಿದೆ. ಅಡ್ಡಾದಿಡ್ಡಿ ಚಲಾಯಿಸುವ ಡ್ರೈವರ್‌ಗಳಿಗೆ ಹಾಗೂ ರಾಜ್ಯ ಸಾರಿಗೆ ಇಲಾಖೆಯ ಬಸ್‌ಗಳು ಯಾವ ಡಿಪೋಗೆ ಸೇರಿದೆ ಎಂದು ತಿಳಿದು ಕ್ರಮ ತೆಗೆದುಕೊಳ್ಳಲು ಇದಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಮುಂದಾಗಬೇಕು.
–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಮೇಘದೂತದ ಒಂದು ನೃತ್ಯರೂಪಕ

ಕಳೆದ ಭಾನುವಾರ (8.1.2023) ಸಂಜೆ ರಾಮಕೃಷ್ಣನಗರದ ರಮಾಗೋವಿಂದ ರಂಗ ಮಂದಿರದಲ್ಲಿ ಏರ್ಪಾಡಾಗಿದ್ದ ಮೇಘದೂತ ನೃತ್ಯ ರೂಪವನ್ನು ನೋಡುವ ಸುಂದರ ಅವಕಾಶ ನನಗೆ ಒದಗಿ ಬಂದಿತ್ತು. ಇದನ್ನು ಏರ್ಪಡಿಸಿದ್ದವರು ದೇವಗೀತಂ ಚಾರಿಟಬಲ್ ಟ್ರಸ್ಟ್‌ನವರು. ಪ್ರಾತಃಸ್ಮರಣೀಯರಾದ, ಹಿಂದೆ ಮಹಾರಾಜ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರೂ ವಾಗ್ಗೇಯಕಾರರೂ ಸ್ವಯಂ ಶ್ರೇಷ್ಠ ಸಂಗೀತಜ್ಞರೂ ಆಗಿದ್ದ ಪೂಜ್ಯ ಶ್ರೀ ಹೆಚ್. ಯೋಗ ನರಸಿಂಹಂ ಅವರ ನೂರಿಪ್ಪತ್ತೈದನೆಯ ಜನ್ಮ ವರ್ಷದ ಸವಿನೆನಪಿಗಾಗಿ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶ್ರೀ ಎಚ್. ಯೋಗನರಸಿಂಹಂ ಅವರನ್ನು ನಾನು 1960ರ ದಶಕದಲ್ಲಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಕಂಡಿದ್ದೆನು. ಅವರ ಬಗೆಗೆ ಹೆಚ್ಚು ಗೌರವವನ್ನೂ ನಾನು ಇಟ್ಟುಕೊಂಡಿದ್ದೇನೆ. ಜೊತೆಗೆ ಕಾಳಿದಾಸ ನನ್ನ ಪ್ರಿಯಕವಿ. ಅವನ ಏಳು ಕಾವ್ಯಗಳೂ ನನಗೆ ಇಷ್ಟ. ಮೇಘದೂತವಂತೂ ಅಚ್ಚುಮೆಚ್ಚು. ಅದರ ನೃತ್ಯ ಪ್ರದರ್ಶನವೆಂದ ಮೇಲೆ ಅದನ್ನು ನೋಡಲೇಬೇಕಲ್ಲವೆ?

ಮೇಘದೂತ ಅಥವಾ ಮೇಘಸಂದೇಶ

ಭಾರತದ, ಅಷ್ಟೇಕೆ, ವಿಶ್ವದ ಶ್ರೇಷ್ಠಕವಿಗಳ ಲ್ಲೊಬ್ಬನಾದ ಕಾಳಿದಾಸನು ರಚಿಸಿರುವ ಅನರ್ಘ್ಯ ಕಾವ್ಯ ಮೇಘದೂತ. ಕುಬೇರನ ಶಾಪಕ್ಕೆ ಒಳಗಾದ ಯಕ್ಷನೊಬ್ಬನು ತನ್ನ ಎಲ್ಲ ಮಹಿಮೆಯನ್ನೂ ಶಕ್ತಿಗಳನ್ನೂ ಕಳೆದುಕೊಂಡು ಸಾಮಾನ್ಯ ಮನುಷ್ಯನಂತಾಗಿ, ತನ್ನ ಪ್ರಿಯೆಯಾದ ಯಕ್ಷಿಯಿಂದ ದೂರವಾಗಿ ರಾಮಗಿರಿ ಎಂಬ ಬೆಟ್ಟದ ಬಳಿ ಚಿಂತಾಕ್ರಾಂತನಾಗಿ ಕಾಲವನ್ನು ಕಳೆಯಬೇಕಾಗಿ ಬರುತ್ತದೆ. ಶಾಪದ ಅವಧಿ ಒಂದು ವರ್ಷ. ಒಂದು ಕಡೆ ಆಶ್ರಮವನ್ನು ಕಟ್ಟಿಕೊಂಡು ನಾಲ್ಕು ದಿನ ಇದ್ದರೆ, ಬೆಟ್ಟದಲ್ಲಿ ಅಲೆಯುತ್ತಿದ್ದ ಅವನಿಗೆ ಮರುದಿನ ತಾನು ಕಟ್ಟಿದ್ದ ಆಶ್ರಮದ ಸ್ಥಾನವೇ ಮರೆತು ಹೋಗಿರುತ್ತದೆ. ಮತ್ತೆ ಇನ್ನೊಂದು ಆಶ್ರಮ ಕಟ್ಟಿಕೊಳ್ಳುತ್ತಾನೆ. ಹೀಗೆ ಅಲ್ಲಿ ಎಷ್ಟೋ ಗುಡಿಸಲುಗಳು. ಹೀಗೆ ಎಂಟು ತಿಂಗಳಷ್ಟು ಕಾಲ ಕಳೆಯಿತು. ಆಷಾಢಮಾಸವು ಬಂದಿತು. ಮಳೆಗಾಲದ ಆರಂಭ. ಆಕಾಶದಲ್ಲೊಂದು ಮೋಡ ಯಕ್ಷನಿಗೆ ಕಾಣಿಸಿತು. ಅದು ಗಾಳಿಯಲ್ಲಿ ತೇಲುತ್ತಾ ಉತ್ತರ ದಿಕ್ಕಿನ ಕಡೆಗೆ ಹೋಗುವ ಹಾಗೆ ತೋರುತ್ತಿತ್ತು. ಯಕ್ಷನ ಪ್ರಿಯಪತ್ನಿ ಇರುವುದು ಅಲಕಾವತಿಯಲ್ಲಿ. ಅಲಕಾವತಿ ಕುಬೇರನ ರಾಜಧಾನಿ. ಅದು ಇರುವುದು ಕೈಲಾಸಪರ್ವತದ ಮೇಲೆ. ಉತ್ತರಕ್ಕೆ ತೆರಳುತ್ತಿರುವ ಮೇಘ ಅಲಕಾ ಪಟ್ಟಣಕ್ಕೆ ಹೋಗುವುದೆಂಬ ಭಾವನೆ ಹುಟ್ಟಿತು ಯಕ್ಷನಿಗೆ. ವಿರಹತಪ್ತಳಾದ ಯಕ್ಷಿಗೆ ಮೇಘದ ಮೂಲಕ ಸಂದೇಶವನ್ನು ನಾನು ಕಳುಹಿಸಬೇಕೆಂದುಕೊಂಡ ಯಕ್ಷ. ಮೇಘವನ್ನು ಸಂಬೋಧಿಸಿ ತನ್ನ ಪ್ರಿಯೆಗೆ ಸಂದೇಶವನ್ನು ಒಯ್ಯಬೇಕೆಂದು ಪ್ರಾರ್ಥಿಸಿದ. ಮೇಘವನ್ನು ದೂತನಾಗಿ ಮಾಡಿಕೊಂಡಿದ್ದುದರಿಂದ ಈ ಕಾವ್ಯ ಮೇಘದೂತ. ಮೇಘದಿಂದ ಸಂದೇಶವನ್ನು ಕಳುಹಿಸಿದುದರಿಂದ ಮೇಘ ಸಂದೇಶ. ಎರಡು ಹೆಸರುಗಳೂ ರೂಢಿಯಲ್ಲಿವೆ. ಇದರಲ್ಲಿ ಎರಡು ಭಾಗ–ಪೂರ್ವ, ಮೇಘ, ಉತ್ತರ ಮೇಘ. ಪೂರ್ವ ಮೇಘದಲ್ಲಿ ಯಕ್ಷನು ಮೇಘಕ್ಕೆ ಅಲಕಾವತಿಗೆ ಹೋಗುವ ಮಾರ್ಗವನ್ನು ತಿಳಿಸುತ್ತಾನೆ. ಉತ್ತರ ಮೇಘದಲ್ಲಿ ಅಲಕಾವತಿಯ ಸೌಂದರ್ಯ, ಅಲ್ಲಿ ಯಕ್ಷನ ಮನೆಯನ್ನು ಗುರುತಿಸಲು ಅನುಕೂಲವಾಗುವ ಚಿಹ್ನೆಗಳು, ಅಲ್ಲಿ ಯಕ್ಷಿ ವಿರಹ ತಪ್ತಳಾಗಿ ಯಾವ ಅವಸ್ಥೆಯಲ್ಲಿರುತ್ತಾಳೆ. ಅವಳಿಗೆ ಮೇಘ ತನ್ನನ್ನು ಹೇಗೆ ಪರಿಚಯಿಸಿಕೊಳ್ಳಬೇಕು, ಹೇಗೆ ಆಶ್ವಾಸನೆಯನ್ನು ಕೊಡಬೇಕು, ಯಾವ ಸಂದೇಶದ ಮಾತುಗಳನ್ನು ಹೇಗೆ ಹೇಳಬೇಕು ಎಂಬುದನ್ನು ಯಕ್ಷನು ಹೇಳುತ್ತಾನೆ.



> ಭಾರತದ, ಅಷ್ಟೇಕೆ, ವಿಶ್ವದ ಶ್ರೇಷ್ಠಕವಿಗಳಲ್ಲೊಬ್ಬನಾದ ಕಾಳಿದಾಸನು ರಚಿಸಿರುವ ಅನರ್ಘ್ಯ ಕಾವ್ಯ ಮೇಘದೂತ. ಕುಬೇರನ ಶಾಪಕ್ಕೆ ಒಳಗಾದ ಯಕ್ಷನೊಬ್ಬನು ತನ್ನ ಎಲ್ಲ ಮಹಿಮೆಯನ್ನೂ ಶಕ್ತಿಗಳನ್ನೂ ಕಳೆದುಕೊಂಡು ಸಾಮಾನ್ಯ ಮನುಷ್ಯನಂತಾಗಿ, ತನ್ನ ಪ್ರಿಯೆಯಾದ ಯಕ್ಷಿಯಿಂದ ದೂರವಾಗಿ ರಾಮಗಿರಿ ಎಂಬ ಬೆಟ್ಟದ ಬಳಿ ಚಿಂತಾಕ್ರಾಂತನಾಗಿ ಕಾಲವನ್ನು ಕಳೆಯಬೇಕಾಗಿ ಬರುತ್ತದೆ. ಶಾಪದ ಅವಧಿ ಒಂದು ವರ್ಷ.

ಭಾರತ ದೇಶದ ವರ್ಣನೆ

ರಾಮಗಿರಿ ಎಂದರೆ ಈಗಿನ ನಾಗಪುರದ ಬಳಿ ಇರುವ ರಾಮ್‌ಟೀಕ್. ಅಲ್ಲಿಂದ ಹಿಮಾಲಯ ಪರ್ವತದಲ್ಲಿರುವ ಕೈಲಾಸದವರೆಗೆ ಇರುವ ಮಾರ್ಗವನ್ನು ಯಕ್ಷ (ಎಂದರೆ ಕವಿ ಕಾಳಿದಾಸ) ಅದ್ಭುತವಾಗಿ ಬಣ್ಣಿಸಿದ್ದಾನೆ. ದಾರಿಯಲ್ಲಿ ಸಿಗುವ ಬೆಟ್ಟ, ನದಿ, ನಗರ, ಆ ನಗರಗಳ ಜನರ ವಿಶೇಷ ಎಲ್ಲವನ್ನು ಕಣ್ಣಿಗೆ ಕಟ್ಟುವಂತೆ ಮನಕ್ಕೆ ಮುಟ್ಟುವಂತೆ ಹೇಳಿದ್ದಾನೆ. ಬೆಟ್ಟ ಎಂದರೆ ಮಣ್ಣು ಕಲ್ಲುಗಳ ರಾಶಿ ಅಲ್ಲ, ಮೋಡವೆಂಬ ಸ್ನೇಹಿತನನ್ನು ಸ್ವಾಗತಿಸುವ ಮಿತ್ರ. ನದಿ ಕೇವಲ ನೀರಿನ ಹೊಳೆ ಅಲ್ಲ. ತನ್ನ ವೈಯಾರವನ್ನು ತೋರಿಸಿ ಮೋಡಕ್ಕೆ ಮೋಹದ ಬಲೆಯನ್ನು ಬೀಸುವ ನೀರೆ. ಒಂದೊಂದು ನಗರದಲ್ಲೂ ಒಂದೊಂದು ವಿಶೇಷ. ಗಂಗಾನದಿ ಎಂದರೆ ಸಗರನ ಮಕ್ಕಳನ್ನು ಸ್ವರ್ಗಕ್ಕೆ ಕರೆದೊಯ್ದ ಸೋಪಾನ ಪಂಕ್ತಿ. ಕೈಲಾಸವೆಂದರೆ ದೇವತಾಸ್ತ್ರೀಯರು ಅಲಂಕರಿಸಿಕೊಳ್ಳಲು ಉಪಯೋಗಿಸುವ ಕನ್ನಡಿ. ಕಾಳಿದಾಸನ ಕಲ್ಪನೆ ಇಲ್ಲಿ ಗರಿಗೆದರುತ್ತದೆ. ಅವನಿಗೆ ಉಜ್ಜಯಿನೀ ನಗರಿಯಲ್ಲಿ ಎಲ್ಲಿಲ್ಲದ ಮಮತೆ, ಹೇಳಲಾಗದಷ್ಟು ಪ್ರೀತಿ. ರಾಮಗಿರಿಯಿಂದ ನೇರವಾಗಿ ಅಲಕಾನಗರಿಗೆ ಹೋದರೆ ದಾರಿಯಲ್ಲಿ ಉಜ್ಜಯಿನಿ ಸಿಕ್ಕುವುದಿಲ್ಲ. ಆದರೆ ಯಕ್ಷ ಹೇಳುತ್ತಾನೆ–

ವಕ್ರಃ ಪಂಥಾ ಯದಪಿ ಭವತಃ ಪ್ರಸ್ಥಿತಸ್ಯೋತ್ತರಾಶಾಂ
ಸೌಧೋತ್ಸಂಗ ಪ್ರಣಯವಿಮುಖೋ ಮಾಸ್ಮ ಭೂರುಜ್ಜಯಿನ್ಯಾಃ।
ವಿದ್ಯುದ್ದಾಮಸ್ಫುರಿತಚಕಿತೈಸ್ತತ್ರ ಪೌರಾಂಗನಾನಾಂ
ಲೋಲಾಪಾಂಗೈರ್ಯದಿ ನ ರಮಸೇ ಲೋಚನೈರ್ವಂಚಿತೋಽಸಿ॥

"ಉತ್ತರ ದಿಕ್ಕಿಗೆ ಹೊರಟಿರುವ ನಿನಗೆ ದಾರಿ ಸ್ವಲ್ಪ ಬಳಸಾದರೂ ಚಿಂತೆಯಿಲ್ಲ, ಉಜ್ಜಯಿನಿಯ ಅರಮನೆಗಳಲ್ಲಿ ವಿಶ್ರಮಿಸುವ ನಿನ್ನ ಆಶೆಗೆ ವಿಮುಖನಾಗಬೇಡ. ಆ ನಗರದ ನಾರಿಯರ ಕಣ್ಣುಗಳು ನೀನು ಮಿಂಚನ್ನು ಹೊಳಪಿಸಿದಾಗ ಸ್ಫುರಿಸುತ್ತವೆಯಲ್ಲ, ಅವುಗಳನ್ನು ನೋಡದಿದ್ದರೆ ಮೋಸ ಹೋಗುವೆ" ಇಷ್ಟು ಹೇಳಿ ಯಕ್ಷನು ಉಜ್ಜಯಿನಿಯ ಸೌಭಾಗ್ಯವನ್ನೂ ಅಲ್ಲಿರುವ ಜ್ಯೋತರ್ಲಿಂಗ ಮಹಾಕಾಲನ ಮಹಿಮೆಯನ್ನೂ ವರ್ಣಿಸುತ್ತಾನೆ. ಸರಸ್ವತೀ ನದಿ, ಅದರ ನೀರಿನ ಸ್ವಚ್ಛತೆ ಕಾವ್ಯದಲ್ಲಿ ಮೈದುಂಬಿ ಬಂದಿವೆ. ಮೋಡವು ಎಲ್ಲಿ ಮಳೆ ಸುರಿಸಬೇಕು, ಯಾವ ನದಿಯಲ್ಲಿ ನೀರನ್ನು ಕುಡಿದು ಮೈ ತುಂಬಿಕೊಳ್ಳಬೇಕು, ಯಾವ ಯಾವ ಊರಿನದು ಏನು ವೈಶಿಷ್ಟ್ಯ ಎಂದು ತಿಳಿಸುತ್ತಾನೆ. ಶಬ್ದಮಾಧುರ್ಯಕ್ಕೆ ಹೆಸರಾದ ಮಂದಾಕ್ರಾಂತಾವೃತ್ತ ಸಂದೇಶ ಕಾವ್ಯಕ್ಕೆ ಹೇಳಿ ಮಾಡಿಸಿದಂತಿದೆ. ಅಲಕಾ ಪಟ್ಟಣದವರೆಗೆ ಮೇಘವು ಹೋಗುವುದರಲ್ಲಿ ಭಾರತದ ಸಂಸ್ಕೃತಿಯ ಸುಂದರ ಚಿತ್ರ ಓದುಗರ ಮನಸ್ಸಿನಲ್ಲಿ ಮೂಡುವಂತೆ ಮಾಡುತ್ತಾನೆ ಕಾಳಿದಾಸ.

ಉತ್ತರ ಮೇಘದಲ್ಲಿ ಯಕ್ಷಿಯ ಸೌಂದರ್ಯದ ವರ್ಣನೆ ಅಪೂರ್ವವಾಗಿದೆ. ಮೇಘವು ತನ್ನನ್ನು ಪರಿಚಯಿಸಿ ಕೊಳ್ಳುವಾಗಲೇ –

"ಭರ್ತುರ್ಮಿತ್ರಂ ಪ್ರಿಯಮವಿಧವೇ ವಿದ್ಧಿ ಮಾಮಂಬುವಾಹಂ"

ಎಂದು ಆರಂಭಿಸಬೇಕೆಂದು ಯಕ್ಷನು ಹೇಳುತ್ತಾನೆ. ಅವಿಧವೇ ಎಂದು ಅವಳನ್ನು ಸಂಬೋಧಿಸಬೇಕು. ಮುತ್ತೈದೆ ಎಂದು ಅದರ ಅರ್ಥ. ನಿನ್ನ ಪತಿ ಕ್ಷೇಮದಿಂದ ಇದ್ದಾನೆಂದು ಅವಳಿಗೆ ತಿಳಿಸಿದಂತಾಗುತ್ತದೆ. ಎಂಟು ತಿಂಗಳು ಕಳೆದವು. ಇನ್ನು ನಾಲ್ಕು ತಿಂಗಳು ಕಳೆದರೆ, ವಿಷ್ಣು ಸರ್ಪಶಯನದಿಂದ ಎದ್ದ ದಿನ, ಎಂದರೆ ಉತ್ಥಾನ ದ್ವಾದಶಿಯಂದು ನನಗೆ ಶಾಪವಿಮೋಚನೆ. ಅಲ್ಲಿಯವರೆಗೆ ಸಹಿಸು. ಅನಂತರ ಒಂದು ಕ್ಷಣವೂ ತಡಮಾಡದೆ ಓಡಿಬರುತ್ತೇನೆ. ಆ ಮೇಲೆ ದಾಂಪತ್ಯದ ಎಲ್ಲ ಸುಖಗಳನ್ನೂ ಅನುಭವಿಸೋಣ ಎಂದು ಸಂದೇಶವನ್ನು ನೀಡುತ್ತಾನೆ.

"ಮೇಘವೆ, ನಿನ್ನ ಕರ್ತವ್ಯಗಳು ಏನಿವೆಯೋ ತಿಳಿಯದೆ ನಾನು ಪ್ರಾರ್ಥನೆ ಮಾಡಿದ್ದೇನೆ. ಸ್ನೇಹದಿಂದಲೋ, ಇವನು ಕಷ್ಟದಲ್ಲಿದ್ದಾನೆ ಎಂಬ ಕರುಣೆಯಿಂದಲೋ ನನ್ನಲ್ಲಿ ಮಮತೆಯನ್ನಿಟ್ಟು ನನ್ನ ಪ್ರಿಯೆಗೆ ಸಂದೇಶವನ್ನು ತಲುಪಿಸಿ ಅನಂತರ ನಿನಗೆ ಇಷ್ಟವಾದ ದೇಶಗಳಲ್ಲಿ ಸಂಚರಿಸು. ನನಗೆ ನನ್ನ ಪ್ರಿಯೆ ಯೊಡನೆ ವಿಯೋಗ ಉಂಟಾದಂತೆ ನಿನಗೆ ನಿನ್ನ ಪ್ರಿಯೆ ವಿದ್ಯುತ್ (ಮಿಂಚು) ಎಂಬುವಳಿಂದ ಎಂದೂ ವಿಯೋಗ ಉಂಟಾಗದಿರಲಿ" ಎಂಬ ಯಕ್ಷನ ಮಾತಿನಿಂದ ಈ ಕಾವ್ಯ ಸಮಾಪ್ತವಾಗುತ್ತದೆ.

ಮೇಘದೂತದಲ್ಲಿರುವವು ನೂರಿಪ್ಪತ್ತು ಪದ್ಯಗಳು. ನೃತ್ಯ ಪ್ರದರ್ಶನಕ್ಕೆ ಕಲಾವಿದರು ಆರಿಸಿಕೊಂಡದ್ದು ಹನ್ನೆರಡೋ ಹದಿಮೂರೋ ಪದ್ಯಗಳನ್ನು ಮಾತ್ರ. ಕಶ್ಚಿತ್ ಕಾಂತಾ ಎಂಬ ಮೊದಲನೆಯ ಪದ್ಯದಿಂದ ಆರಂಭಿಸಿ 'ಮಾ ಭೂದೇವಂ ಕ್ಷಚಿದಪಿ ಚ ತೇ ವಿದ್ಯುತಾ ವಿಪ್ರಯೋಗಃ' ಎಂಬ ಕೊನೆಯ ಪದ್ಯದಲ್ಲಿ ಸಮಾಪ್ತಿಗೊಳಿಸಿದರು. ಸಂಗೀತ ಅಮೋಘವಾಗಿತ್ತು. ಡಾ.ರೋಹಿತ್ ಈಶ್ವರ್ ಯಕ್ಷ ನಾಗಿ ನೀಡಿದ ಅಭಿನಯವಂತೂ ಅವಿಸ್ಮರಣೀಯವಾಗಿತ್ತು. ಅವರಿಗೆ ಸಮರ್ಥ ಸಹಕಾರವನ್ನು ನೀಡಿದ ನರ್ತಕಿ ಕುಮಾರಿ ಚಿನ್ಮಯಿ. ನೋಡುಗರಿಗೆ ಹೃದಯಸ್ಪರ್ಶಿ ಅನು ಭವವನ್ನು ನೀಡಿದ ಈ ಕಾರ್ಯಕ್ರಮಕ್ಕೆ ನೃತ್ಯ ಸಂಯೋಜನೆಯನ್ನು ಮಾಡಿದ ಗುರು ನಂದಿನಿ ಈಶ್ವರ್ ಅವರು ವಂದ ನೀಯರು. ಅಂತೆಯೇ ಕಾರ್ಯಕ್ರಮವನ್ನು ತಮ್ಮ ತಂದೆಯವರ ಸ್ಮರಣಾರ್ಥವಾಗಿ ಆಯೋಜಿಸಿದ ಶ್ರೀಮತಿ ನೀರಜಾ ಅವರಿಗೂ ಸಹೃದಯ ಪ್ರೇಕ್ಷಕರ ಪ್ರಣಾಮಗಳು ಸಲ್ಲುತ್ತವೆ.

ನಮಃ ಶ್ರೀ ಯೋಗನರಸಿಂಹ ಮಹೋದಯಾಯ

ಬನ್ನಿ...ಸುತ್ತೂರು ಜಾತ್ರೆಗೆ... ಶ್ರೀ ಶಿವರಾತ್ರೀಶ್ವರರ ಸನ್ನಿಧಿಗೆ

■ ಬನ್ನೂರು ಕೆ.ರಾಜು ಮೊ.9481533167



> ಇದೇ ಜನವರಿ 18ರಿಂದ 6 ದಿನಗಳ ಕಾಲ ಸುಪ್ರಸಿದ್ಧ ಸುತ್ತೂರು ಜಾತ್ರೆ ಜರುಗುತ್ತಿದೆ. ತನ್ನಿಮಿತ್ತ ಈ ಲೇಖನ.

ದೇಶದಲ್ಲಿ ಬೇಕಾದಷ್ಟು ಧಾರ್ಮಿಕ ಕ್ಷೇತ್ರಗಳಿವೆ. ಗುರು ಪರಂಪರೆಯ ಶ್ರೀಮಠಗಳಿವೆ. ಹಾಗೆಯೇ ಬಹಳಷ್ಟು ಜಾತ್ರೆಗಳಿವೆ. ಆದರೆ ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸವಿರುವ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಶ್ರೀ ಕ್ಷೇತ್ರ ಮತ್ತು ಇಲ್ಲಿನ ಗುರು ಪರಂಪರೆ ಹಾಗೂ ಶ್ರೀ ಮಠದ ವಿಶಿಷ್ಟತೆಯೇ ಬೇರೆ. ಅದರಲ್ಲೂ ಇಲ್ಲಿ ಪ್ರತಿ ವರ್ಷ ಸಾಮಾನ್ಯವಾಗಿ ಜನವರಿ ತಿಂಗಳಲ್ಲಿ ಜರುಗುವ "ಸುತ್ತೂರು ಜಾತ್ರೆ" ಎಂದೇ ವಿಶ್ವ ವಿಖ್ಯಾತಿ ಹೊಂದಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವಂತೂ ಬಹು ವೈಶಿಷ್ಟ್ಯವಾಗಿದ್ದು, ಜಗತ್ತಿನ ಎಲ್ಲಾ ಜಾತ್ರೆಗಳಿಗೂ ಮಾದರಿ. ಈ ಜಾತ್ರೆಯಲ್ಲಿ ಏನಿಲ್ಲ ಹೇಳಿ!? ಎಲ್ಲಾ ರೀತಿಯ ಪಾರಂಪರಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ತಾಂತ್ರಿಕ, ಜನಪದೀಯ, ಸಾಂಸ್ಕೃತಿಕ ಮಹೋತ್ಸವಗಳ ಮಹಾಸಂಗಮವಿದು.

ಒಟ್ಟು ಆರು ದಿನಗಳು ಬಹು ವೈವಿಧ್ಯಮಯವಾಗಿ ನಡೆಯುವ ಸುತ್ತೂರು ಜಾತ್ರೆಯಲ್ಲಿ ಮೊದಲ ದಿನ ಶ್ರೀಮಠದಿಂದ ಆದಿ ಜಗದ್ಗುರು ಶಿವಯೋಗಿಗಳ ಉತ್ಸವ ಮೂರ್ತಿಯನ್ನು ಕರ್ತೃಗದ್ದುಗೆಗೆ ಬಿಜಯಂಗೈಸಿಕೊಳ್ಳಲಾಗುವುದು. ಎರಡನೇ ದಿನ ಸಹಸ್ರ ಕುಂಭೋತ್ಸವ, ಮೂರನೇ ದಿನ ಬೆಳಿಗ್ಗೆ ರಥೋತ್ಸವ, ನಾಲ್ಕನೇ ದಿನ ಸಂಜೆ ಶ್ರೀ ಮಹದೇಶ್ವರ ಕೊಂಡೋತ್ಸವ ಮತ್ತು ಮುತ್ತಿನ ಪಲ್ಲಕ್ಕಿ ಉತ್ಸವ, ಐದನೇ ದಿನ ರಾತ್ರಿ ಲಕ್ಷ ದೀಪೋತ್ಸವದ ಮಹಾಬೆಳಕಿನಲ್ಲಿ ತೆಪ್ಪೋತ್ಸವ, ಆರನೇ ದಿನ ಅನ್ನ ಬ್ರಹ್ಮೋತ್ಸವ ಹಾಗೂ ಶ್ರೀ ವೀರಭದ್ರೇಶ್ವರ ಕೊಂಡೋತ್ಸವಗಳು ಲಕ್ಷಾಂತರ ಭಕ್ತ ಸಮೂಹದ ನಡುವೆ ಜರುಗುತ್ತವೆ. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರದಲ್ಲಿರುವ ಕರ್ತೃಗದ್ದುಗೆ ಮತ್ತು ಪುರಾಣ ಪ್ರಸಿದ್ಧ ಶ್ರೀಸೋಮೇಶ್ವರ, ಶ್ರೀಮಹದೇಶ್ವರ, ಶ್ರೀಶಂಕರ ನಾರಾಯಣ, ಶ್ರೀವೀರಭದ್ರೇಶ್ವರ, ಶ್ರೀನಾರಾಯಣ ಸ್ವಾಮಿ ದೇವಾಲಯಗಳಲ್ಲಿ ತ್ರಿಕಾಲ ಪೂಜೆ, ಮಹಾ ರುದ್ರಾಭಿಷೇಕ, ನವನೀತಾಲಂಕಾರ, ಹಸಿರುವಾಣಿ ಅಲಂಕಾರ ಹಾಗೂ ಗುರು ಪರಂಪರೆಯ ಸಂಸ್ಮರಣೋತ್ಸವಗಳು ಭಕ್ತಿಯ ದ್ಯೋತಕವಾಗಿ ನಡೆಯುತ್ತವೆ. ಶ್ರೀಮಠದ ಸಕಲ ಬಿರುದಾವಳಿಗಳ ಸಮೇತ, ಛತ್ರಿ, ಚಾಮರ, ಸೂರಾಪಾನಿ, ಗಾರುಡಿ ಗೊಂಬೆ, ಮರಗಾಲು ಕುಣಿತ, ನೃತ್ಯ, ವೀರಗಾಸೆ, ಡೊಳ್ಳು ಹಾಗೂ ಪೂಜಾ ಕುಣಿತ, ಕರಡಿ ಮೇಳ, ನಾದಸ್ವರಗಳೊಂದಿಗೆ ಬೇರೆ ಬೇರೆ ರಾಜ್ಯಗಳ ವಿವಿಧ ಜನಪದ ಕಲಾತಂಡಗಳು ಮೇಳೈಸಿ ಜರುಗುವ ಈ ನಮ್ಮ ಸುತ್ತೂರು ಜಾತ್ರೆಯ ವೈಭವವನ್ನು ನೋಡಿಯೇ ಸವಿಯಬೇಕು.

ಧಾರ್ಮಿಕ ಉತ್ಸವಗಳ ಜೊತೆಗೆ ವಾರ ಪೂರ್ತಿ ಆರೋಗ್ಯ ಮೇಳ, ಕೃಷಿ ಮೇಳ, ಉತ್ಪಾದಕ ಮತ್ತು ಗ್ರಾಹಕ ಮೇಳ, ಕ್ರೀಡಾ ಮೇಳ, ಸಾಂಸ್ಕೃತಿಕ ಮೇಳ, ಶೈಕ್ಷಣಿಕ ಮೇಳ, ಸಾಹಿತ್ಯ ಮತ್ತು ಪುಸ್ತಕ ಮೇಳ, ಸರ್ವ ಧರ್ಮ ಸಮ್ಮಿಲನ, ಸಾಮೂಹಿಕ ವಿವಾಹ, ವಿವಿಧ ವಸ್ತು ಪ್ರದರ್ಶನಗಳು, ದನಗಳ ಜಾತ್ರೆ, (ದನಗಳಿಗೆ ಹರಡುತ್ತಿರುವ ಗಂಟು ರೋಗದ ಹಿನ್ನೆಲೆಯಲ್ಲಿ ಈ ಬಾರಿ ದನಗಳ ಜಾತ್ರೆಯನ್ನು ರದ್ದುಪಡಿಸಲಾಗಿದೆ) ಜಾನಪದ ಜಾತ್ರೆ, ಕುಸ್ತಿ ಪಂದ್ಯಾವಳಿ, ನಗೆ ಉತ್ಸವ, ನಾಟಕ, ನೃತ್ಯ, ವಚನಗಾಯನ, ಸುಗಮ ಸಂಗೀತ, ಯಕ್ಷಗಾನ... ಹೀಗೆ ನಾನಾ ವೈವಿಧ್ಯಮಯ ಕಾರ್ಯಕ್ರಮಗಳು, ಉತ್ಸವಗಳು ಇಲ್ಲಿ ಸಾರ್ಥಕ ರೀತಿಯಲ್ಲಿ ನಡೆಯುತ್ತವೆ. ಅಲ್ಲದೆ ಸಾಮಾಜಿಕ ಜಾಗೃತಿ ಉಂಟು ಮಾಡುವಲ್ಲಿ "ಸುತ್ತೂರು ಜಾತ್ರೆ" ಸಂಪೂರ್ಣವಾಗಿ ತನ್ನನ್ನು ತೆರೆದುಕೊಳ್ಳುತ್ತದೆ ಎಂಬುದೇ ಇಲ್ಲಿನ ವಿಶೇಷ.

ಶ್ರೀ ಕ್ಷೇತ್ರದ ಇತಿಹಾಸ: ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ಕಥೆ. ಕಂಚಿಯ ರಾಜೇಂದ್ರ ಚೋಳನಿಗೂ ತಲಕಾಡಿನ ಗಂಗರಾಜ ರಾಚಮಲ್ಲನಿಗೂ ಬಹಳ ಕಾಲದಿಂದಲೂ ಇದ್ದ ರಾಜಕೀಯ ದ್ವೇಷಾಗ್ನಿಯಿಂದ ಇವರಿಬ್ಬರೂ ಯುದ್ಧೋನ್ಮಾದದಲ್ಲಿ ಮುಳುಗಿ ಒಬ್ಬರನ್ನೊಬ್ಬರು ಕೊಲ್ಲಲು ಭಾರೀ ಸೈನ್ಯದೊಡನೆ ಕಾದಾಟಕ್ಕೆ ನುಗ್ಗುತ್ತಾರೆ. ಆಗ ರಾಜೇಂದ್ರ ಚೋಳನ ಕುದುರೆ ಏನು ಮಾಡಿದರೂ ಹಿಡಿತಕ್ಕೆ ಸಿಗದೆ ಶರವೇಗದಲ್ಲಿ ಮಿಂಚಿನಂತೆ ಓಡುತ್ತದೆ. ಹೀಗೆ ಓಡಿ ಬಂದ ಕುದುರೆ ದಕ್ಷಿಣಕಾಶಿ ಎಂದೇ ಹೆಸರಾದ ಕಪಿಲಾ ನದಿ ತೀರದಲ್ಲಿ ತಪಸ್ಸಿನಲ್ಲಿ ನಿರತರಾಗಿದ್ದ **ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ** ಸುತ್ತ ಪ್ರದಕ್ಷಿಣೆ ಹಾಕಿ ಅವರ ಬಳಿ ಶಾಂತವಾಗಿ ನಿಲ್ಲುತ್ತದೆ. ತನ್ನ ಮೆಚ್ಚಿನ ಕುದುರೆಯ ವರ್ತನೆ ಕಂಡು ಅಚ್ಚರಿಗೊಂಡ ರಾಜೇಂದ್ರ ಚೋಳ ಅಲ್ಲಿ ಧ್ಯಾನಮಗ್ನರಾಗಿದ್ದ ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಮುನಿಗಳನ್ನು ಕಂಡು ಮತ್ತಷ್ಟು ಮಹದಾಶ್ಚರ್ಯದಿಂದ ಕೂಡಲೇ ಕುದುರೆಯಿಂದಿಳಿದು ಭಕ್ತಿಯಿಂದ ಅವರ ಪಾದಕಮಲಗಳಿಗೆರಗಿ ಪೂಜಿಸುತ್ತಾನೆ. ಅಷ್ಟರಲ್ಲಿ ಇವನನ್ನು ಹಿಂಬಾಲಿಸಿಕೊಂಡು ಬಂದ ರಾಚಮಲ್ಲನೂ ಅಲ್ಲಿನ ಚಿತ್ರಣ ನೋಡಿ, ತಾನು ಸಹ ಅತ್ಯಂತ ಭಕ್ತಿಯಿಂದ ಶ್ರೀಶಿವರಾತ್ರೀಶ್ವರರಿಗೆ ಶಿರಬಾಗಿ ನಮಿಸುತ್ತಾನೆ. ಆಗ ಧ್ಯಾನದಿಂದ ಕಣ್ತೆರೆದ ತೇಜೋಮೂರ್ತಿ ಶ್ರೀಶಿವರಾತ್ರೀಶ್ವರ ಮಹಾಮುನಿಗಳು ಯುದ್ಧದಿಂದಾಗುವ ಅನಾಹುತ ಮತ್ತು ದುರಂತಗಳನ್ನು ವಿವರಿಸಿ ಶಾಂತಿ, ಸಂಯಮ, ಸಹಬಾಳ್ವೆಯಲ್ಲಿ ಬದುಕಬೇಕೆಂದು ಉಪದೇಶಿಸಿ, ಇಬ್ಬರಿಗೂ ಆಶೀರ್ವದಿಸುತ್ತಾರೆ. ಆ ಕ್ಷಣ ಅವರಿಬ್ಬರಲ್ಲಿದ್ದ ದ್ವೇಷದ ಅಗ್ನಿ ತಣ್ಣಗಾಗಿ ಯುದ್ಧೋನ್ಮಾದ ಇಳಿಯುತ್ತದೆ. ಮಾನವತೆಯ ಮಹಾಬೆಳಕು ಪ್ರಜ್ವಲಿಸಿ ಅವರಲ್ಲಿ ಪರಿವರ್ತನೆಯ ಹೂವು ಅರಳಿ ರಾಜರೀರ್ವರೂ ಯುದ್ಧಕ್ಕೆ ತಿಲಾಂಜಲಿ ಹೇಳುತ್ತಾರೆ. ಮತ್ತು ತಮಗೆ ದರ್ಶನ ನೀಡಿದ ಈ ಪುಣ್ಯ ಸ್ಥಳದಲ್ಲಿಯೇ ತಾವು ನೆಲೆಗೊಳ್ಳಬೇಕೆಂದು ಶ್ರೀಶಿವರಾತ್ರೀಶ್ವರ ಮುನಿಗಳಲ್ಲಿ ಕೋರಿಕೊಂಡು ಅವರು ಅಲ್ಲೇ ನೆಲೆಸುವಂತೆ ಮಾಡುತ್ತಾರೆ.

ಆ ಪುಣ್ಯ ಸ್ಥಳವೇ ಈ ಸುತ್ತೂರು ಶ್ರೀ ಕ್ಷೇತ್ರ. ಮಾನವತೆಯ ನೆಲೆಯಲ್ಲಿ ಆದಿಗುರು ಶ್ರೀಶಿವರಾತ್ರೀಶ್ವರರಿಂದ ಉದಯವಾದ ಇಲ್ಲಿನ ಸುತ್ತೂರು ವೀರಸಿಂಹಾಸನ ಮಠವು ಹತ್ತು ಶತಮಾನಗಳಿಗೂ ಮೀರಿದ ಸುದೀರ್ಘ ಪರಂಪರೆಯನ್ನು ಹೊಂದಿದ್ದು, ಆದಿಗುರು ಶ್ರೀ ಶಿವರಾತ್ರಿಶ್ವರ ಭಗವತ್ಪಾದರ (ಕ್ರಿ.ಶ. 950–1030) ಆದಿಯಾಗಿ ಶ್ರೀ ಈಶಾನೇಶ್ವರ ಒಡೆಯರು (1030–1090), ಶ್ರೀನಿಜಲಿಂಗ ಶಿವಾಚಾರ್ಯರು (1090–1170), ಶ್ರೀಸಿದ್ಧನಂಜದೇಶಿಕೇಂದ್ರರು (1170–1240), ಶ್ರೀ ಕಪನಿ ನಂಜುಂಡ ದೇಶಿಕೇಂದ್ರರು (1240–1310), ಶ್ರೀ ಚೆನ್ನವೀರ ದೇಶಿಕೇಂದ್ರರು (1310–1380), ಶ್ರೀ ಸಿದ್ಧಮಲ್ಲ ಶಿವಾಚಾರ್ಯರು (1380–1470), ಶ್ರೀ ಪರ್ವತೇಂದ್ರ ಶಿವಾಚಾರ್ಯರು (1470–1490), ಶ್ರೀ ಭಂಡಾರಿ ಬಸಪ್ಪ ಒಡೆಯರು (1490–1515), ಶ್ರೀ ಕೂಗಲೂರು ಶ್ರೀ ನಂಜುಂಡ ದೇಶೀಕೇಂದ್ರರು (1515–1530), ಶ್ರೀ ಘನಲಿಂಗದೇವರು (1530–1550), ಶ್ರೀ ಇಮ್ಮಡಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು (1550–1590), ಶ್ರೀ ಚೆನ್ನಬಸವ ದೇಶೀಕೇಂದ್ರರು (1590–1608), ಶ್ರೀ ಗುರುನಂಜ ದೇಶೀಕೇಂದ್ರರು (1608–1641), ಶ್ರೀ ಚೆನ್ನಬಸವ ದೇವಾಚಾರ್ಯರು (1641–1713), ಶ್ರೀ ಪಂಚಾಕ್ಷರ ದೇಶೀಕೇಂದ್ರರು (1713–1730), ಶ್ರೀ ಚಿದ್ಘನಶಿವಾಚಾರ್ಯರು (1730–1750), ಶ್ರೀ ಚೆನ್ನವೀರ ದೇಶಿಕೇಂದ್ರರು (1750–1801), ಶ್ರೀ ಮಹಾಂತ ದೇಶೀಕೇಂದ್ರರು (1801–1842), ಶ್ರೀ ಸಿದ್ಧಮಲ್ಲ ಶಿವಾಚಾರ್ಯರು (1842–1884), ಶ್ರೀ ಶಿವರಾತ್ರಿ ದೇಶೀಕೇಂದ್ರರು (1884–1902), ಶ್ರೀ ಮಂತ್ರಮಹರ್ಷಿ ಪಟ್ಟದ ಶ್ರೀ ಶಿವರಾತ್ರಿ ಮಹಾಸ್ವಾಮಿಗಳು (1902–1926), ರಾಜಗುರುತಿಲಕ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು (1926–1986) ಸೇರಿದಂತೆ ಇಪ್ಪತ್ತೂರು ಸಾರ್ಥಕ ಜಗದ್ಗುರುಗಳ ಸೇವಾ ಕೈಂಕರ್ಯಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿದೆ. ಮಾನವ ಕುಲದ ಉದ್ಧಾರಕ್ಕಾಗಿ ಈ ಮಹಾತ್ಮರೆಲ್ಲರೂ ಕಂಡ ಮಹಾಕನಸುಗಳನ್ನೆಲ್ಲಾ ಸಾಕಾರಗೊಳಿಸುವತ್ತ ಟೊಂಕಕಟ್ಟಿ ನಿಂತಿರುವ ಪ್ರಸ್ತುತ 1986 ರಿಂದ 24ನೇ ಪೀಠಾಧ್ಯಕ್ಷರೂ–ಪೀಠಾಧೀಶರು ಕಾಯಕ ನಿರತರಾಗಿರುವ ಕಾಯಕ ಯೋಗಿ ಶ್ರೀ ಶಿವರಾತ್ರಿದೇಶೀಕೇಂದ್ರ ಮಹಾಸ್ವಾಮಿಗಳು ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಎಲ್ಲಕ್ಕಿಂತ ಮಿಗಿಲಾಗಿ "ಶಿಕ್ಷಣ ಯಜ್ಞ" ವನ್ನು ನಡೆಸಿ ಇಡೀ ಜಗತ್ತೇ ಸುತ್ತೂರಿನತ್ತ ಸುಳಿಯುವಂತೆ ಮಾಡಿದ್ದಾರೆ.

ಶೈಕ್ಷಣಿಕ ಸಾಧನೆ : ಶಿಕ್ಷಣದ ವಿಷಯಕ್ಕೆ ಬಂದರೆ ಸುತ್ತೂರು ಶ್ರೀ ಮಠದ ಶೈಕ್ಷಣಿಕ ಸಾಧನೆಗೆ ಸರಿಗಟ್ಟುವ ಮಠವೇ ಆಗಲಿ, ಸಂಸ್ಥೆಯೇ ಆಗಲಿ ಬಹುಶಃ ಇಡೀ ವಿಶ್ವದಲ್ಲೇ ಮತ್ತೊಂದಿರಲಾರದು. ಹಾಗೆಯೇ ಇದರ ಹಿಂದಿನ ಧೀಶಕ್ತಿಯಾಗಿ ಶಿಕ್ಷಣ ಯಜ್ಞವನ್ನು ಒಂದು ತಪಸ್ಸು ಮಾಡಿಕೊಂಡಿರುವ ದೂರದೃಷ್ಟಿಯುಳ್ಳ ಇಂಥ ಪವಾಡ ಸದೃಶರಾದ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳಂಥವರೂ ಕೂಡ ಪ್ರಪಂಚದಲ್ಲಿ ಅಪರೂಪವೇ! ಊಟ ಮತ್ತು ವಸತಿಗಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಅನುಭವಿಸುತ್ತಿದ್ದ ಕಷ್ಟವನ್ನು ಕಂಡು ಹಿಂದಿನ ಜಗದ್ಗುರುಗಳಾಗಿದ್ದ ರಾಜಗುರು ತಿಲಕ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಬಾಡಿಗೆ ಮನೆಯೊಂದರಲ್ಲಿ 1941ರಲ್ಲಿ ಕೇವಲ ಹನ್ನೆರಡು ಮಂದಿ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯ ಆರಂಭಿಸಿ ಅನ್ನ ಮತ್ತು ಶಿಕ್ಷಣ ದಾಸೋಹದ ಬೀಜ ಬಿತ್ತಿದ್ದರು. ಹಲವಾರು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಉದಯದೊಡನೆ ಗಿಡವಾಗಿ ಬೆಳೆಯತೊಡಗಿ ಇದೀಗ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳ ಕಾಲದಲ್ಲಿ "ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ" ಎಂಬ ನಾಮಾಂಕಿತದಲ್ಲಿ ಹೆಮ್ಮರವಾಗಿ ಬೆಳೆದಿದೆ. ಒಂದು ರೀತಿಯಲ್ಲಿ ಸುತ್ತೂರು ಶ್ರೀ ಕ್ಷೇತ್ರ ಜೆ.ಎಸ್.ಎಸ್. ಮಹಾವಿದ್ಯಾ ಪೀಠದಿಂದಾಗಿ "ಶಿಕ್ಷಣ ಕಾಶಿ"ಯಾಗಿ ರೂಪುಗೊಂಡಿದೆ.

ಶಿಶುವಿಹಾರದ ವಿದ್ಯಾರ್ಥಿಯಾಗಿ ಇಲ್ಲಿಗೆ ಪ್ರವೇಶಿಸಿದರೆ ಸಾಕು,ಉನ್ನತ ಪದವಿಯೊಡನೆ ಶಿಕ್ಷಕನೋ, ವೈದ್ಯನೋ, ವಿಜ್ಞಾನಿಯೋ, ಇಂಜಿನಿಯರೋ, ಆಡಳಿತಗಾರನೋ ಆಗಿ ಇಲ್ಲಿಂದ ಹೊರಹೊಮ್ಮಿ ಬರಬಹುದು. ಅಕ್ಷರಮಟ್ಟಿಗೆ ಶಿಶುವಿಹಾರದಿಂದ ಹಿಡಿದು ವೈದ್ಯಕೀಯ, ತಾಂತ್ರಿಕ ಕಾಲೇಜುಗಳ ತನಕ ಎಲ್ಲಾ ಬಗೆಯ ಉನ್ನತ ಶಿಕ್ಷಣಗಳೂ ಇಲ್ಲಿ ಲಭ್ಯ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಇಲ್ಲಿ ಯಾವುದೂ ಇಲ್ಲ ಎನ್ನುವಂತಿಲ್ಲ. ಹತ್ತಾರು ಪ್ರಾಥಮಿಕ ಶಿಕ್ಷಕರ ಮತ್ತು ಪ್ರೌಢಶಿಕ್ಷರ ತರಬೇತಿಯ ಡಿ.ಎಡ್, ಬಿ.ಎಡ್, ಸಿ.ಪಿ.ಎಡ್, ಬಿ.ಪಿ.ಎಡ್, ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು, ಪದವಿ ಪೂರ್ವ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಆಯುರ್ವೇದ ಕಾಲೇಜುಗಳು, ಕಾನೂನು ಕಾಲೇಜುಗಳು, ಹಿಂದಿ ವಿದ್ಯಾಲಯ, ಸಂಸ್ಕೃತ ಪಾಠಶಾಲೆ, ನರ್ಸಿಂಗ್ ಕಾಲೇಜುಗಳು, ಫಾರ್ಮಸಿ ಕಾಲೇಜುಗಳು, ಕೇಂದ್ರೀಯ ಶಾಲೆಗಳು, ವೃತ್ತಿಪರ ಶಿಕ್ಷಣ ಸಂಸ್ಥೆಗಳು, ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಐನೂರಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳು ಇಲ್ಲಿ ಜ್ಞಾನದೀಪಗಳಾಗಿ ಬೆಳಗುತ್ತಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಏಪ್ರಿಲ್ ಅಂತ್ಯಕ್ಕೆ ಮೈಸೂರಿನ ಯುದ್ಧ ಸ್ಮಾರಕ ಅನಾವರಣ

● ಭರದಿಂದ ಸಾಗುತ್ತಿದೆ ಬೇಸ್ಮೆಂಟ್ ಕೆಲಸ ● ವಾರದಲ್ಲಿ ಯುದ್ಧ ಸ್ಮಾರಕದ ಕಲ್ಲಿಗೆ ಪಾಲಿಶ್ ಕಾರ್ಯ ಆರಂಭ ● ಭಾರತೀಯ ಸೈನ್ಯದ ಶೌರ್ಯದ ಪ್ರತೀಕ ಈ ಸ್ಮಾರಕ



ಮೈಸೂರು ಡಿಸಿ ಕಚೇರಿ ಸಮೀಪದ ಎನ್‌ಸಿಸಿ ಮೈದಾನದಲ್ಲಿ ನಿರ್ಮಿಸುತ್ತಿರುವ ಯುದ್ಧ ಸ್ಮಾರಕ ಕಾಮಗಾರಿಯನ್ನು ನಿವೃತ್ತ ಯೋಧರೂ ಆದ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್.ಆನಂದ್, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಪರಿಶೀಲಿಸುತ್ತಿರುವುದು.

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಜ.17– ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಎನ್‌ಸಿಸಿ ಮೈದಾನದಲ್ಲಿ ನಿರ್ಮಿಸುತ್ತಿರುವ 'ಯುದ್ಧ ಸ್ಮಾರಕ' ಕಾಮಗಾರಿ ಭರದಿಂದ ಸಾಗಿದ್ದು, ಏಪ್ರಿಲ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ. ಸ್ಮಾರಕಕ್ಕೆ ಬಳಸುವ ಸ್ಲಾಬ್‌ಗಳಿಗೆ ಪಾಲಿಶ್ ಮಾಡುವ ಕಾರ್ಯವನ್ನು ಈ ವಾರ ಆರಂಭಿಸಲು ಉದ್ದೇಶಿಸಲಾಗಿದೆ.

ಮೈಸೂರಲ್ಲಿ ಯುದ್ಧ ಸ್ಮಾರಕ ನಿರ್ಮಾಣ 23 ವರ್ಷದ ಮಹಾ ಕನಸು. ಈಗ ಇದು ನನಸಾಗುವ ಕಾಲ ಸನ್ನಿಹಿತವಾಗಿದೆ. ಭಾರತೀಯ ಸೇನೆಯ ಮೂರು ವಿಭಾಗಕ್ಕೂ ಗೌರವ ಸಲ್ಲಿಸುವ ಮಹದುದ್ದೇಶ ಯುದ್ಧ ಸ್ಮಾರಕದಿಂದ ಸಾರ್ಥಕವಾಗಲಿದೆ. ಜಿಲ್ಲಾಧಿಕಾರಿ ಕಚೇರಿ ಸಮೀಪದ 4.27 ಎಕರೆಯ ಎನ್‌ಸಿಸಿ ಪರೇಡ್ ಮೈದಾನದಲ್ಲಿ 4 ಚದರ ಅಡಿ ಅಳತೆಯಲ್ಲಿ ಯುದ್ಧ ಸ್ಮಾರಕ ನಿರ್ಮಿಸಲಾಗುತ್ತಿದ್ದು, ಸ್ಮಾರಕದ ಬೇಸ್ಮೆಂಟ್ ಕಾರ್ಯ ಪೂರ್ಣಗೊಳ್ಳುವ ಹಂತ ತಲುಪಿದೆ. ಕ್ಯೂರಿಂಗ್ ಆದ ಬಳಿಕ ಅದರ ಮೇಲೆ ಭಾರೀ ಗಾತ್ರದ ಉತ್ಕೃಷ್ಟ ಕಲ್ಲುಗಳ ಸ್ಲಾಬ್ ಜೋಡಣೆ ಮಾಡಲಾಗುತ್ತದೆ. ಕೆಲವೇ ದಿನಗಳಲ್ಲಿ ಅಂತಿಮ ರೂಪ ಪಡೆಯುವ ಯುದ್ಧ ಸ್ಮಾರಕ ಏಪ್ರಿಲ್ ಅಂತ್ಯದ ವೇಳೆಗೆ ಉದ್ಘಾಟನೆಗೆ ಸಜ್ಜಾಗಲಿದೆ.

ಕಲ್ಲಿನ ಸ್ಲ್ಯಾಬ್‌ಗೆ ಪಾಲಿಶ್: ಯುದ್ಧ ಸ್ಮಾರಕ ಕಾರ್ಯ ಕಾಂಕ್ರೀಟೀಕರಣಕ್ಕೆ ಸೀಮಿತಗೊಳಿಸದೆ ಸುಂದರವಾಗಿಸಲು ಕರಿಕಲ್ಲಿನ ಸ್ಲ್ಯಾಬ್ ಬಳಸಲು ನಿರ್ಧರಿಸಲಾಗಿತ್ತು. ಇದಕ್ಕಾಗಿ ಈ ಹಿಂದೆ ಚಾಮರಾಜನಗರದ ಎಡಿಸಿಯಾಗಿದ್ದ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್.ಆನಂದ್ ಕೋರಿಕೆ ಮೇರೆಗೆ ಚಾಮರಾಜನಗರ ಜಿಲ್ಲೆಯ ಕ್ವಾರಿ ಮಾಲೀಕರಾದ ಹೆಚ್.ಎಂ.ಪುಟ್ಟಮಾದಯ್ಯ ಬಿನ್ ಪಟೇಲ್ ಮಾದಪ್ಪ (82), 33 ಕ್ಯೂಬಿಕ್ ಮೀಟರ್ ಕಪ್ಪು ಶಿಲೆ(ಉತ್ಕೃಷ್ಟ ಕಲ್ಲು)ಯನ್ನು ಸರ್ಕಾರಕ್ಕೆ ರಾಜಧನ ಹಾಗೂ ವಿವಿಧ ಶುಲ್ಕ ತಾವೇ ಪಾವತಿಸಿ, ಸ್ಮಾರಕ ನಿರ್ಮಾಣಕ್ಕೆ ಕೊಡುಗೆ ನೀಡಿದ್ದರು. ಅಲ್ಲದೆ ಕ್ವಾರಿಯಿಂದ 300 ಟನ್ ತೂಕದ ಕಚ್ಚಾ ಶಿಲೆಯನ್ನು ಚಾಮರಾಜನಗರದ ಎಸ್‌ವಿಜಿ ಗ್ರ್ಯಾನೈಟ್ಸ್ ಮಾಲೀಕ ಎ.ಶ್ರೀನಾಥ್ ಬಿನ್ ಶಿವಶಂಕರ್‌ರೆಡ್ಡಿ ಯಾವುದೇ ಶುಲ್ಕ ಪಡೆಯದೇ ಸ್ಮಾರಕ ನಿರ್ಮಾಣಕ್ಕೆ ಅನುಗುಣವಾಗಿ ಕತ್ತರಿಸಿಕೊಟ್ಟಿದ್ದರು. ಭಾರೀ ಗಾತ್ರದ 6 ಕಲ್ಲಿನ ಸ್ಲಾಬ್‌ಗಳ ವರ್ಷದ ಹಿಂದೆಯೇ ಉದ್ದೇಶಿತ ಸ್ಮಾರಕ ನಿರ್ಮಾಣದ ಸ್ಥಳಕ್ಕೆ ತಂದು ಸುರಕ್ಷಿತವಾಗಿಡಲಾಗಿತ್ತು. ಇದೀಗ ಸ್ಮಾರಕ ಕಾಮಗಾರಿ ಪೂರ್ಣಗೊಳ್ಳುವ ಹಂತಕ್ಕೆ ಬಂದಿರುವುದರಿಂದ ಕಲ್ಲಿನ ಸ್ಲಾಬ್‌ಗಳಿಗೆ ಪಾಲಿಶ್ ಮಾಡಬೇಕಾಗಿದೆ. ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಈ ಕಾರ್ಯ ವಹಿಸಲಾಗಿದ್ದು, ಈ ವಾರದಲ್ಲಿ ಪಾಲಿಶ್ ಮಾಡುವ ಕಾಮಗಾರಿ ಆರಂಭವಾಗುವ ನಿರೀಕ್ಷೆಯಿದೆ.


ಚೌಕಾಕಾರ: ಸ್ಮಾರಕ ಚೌಕಾಕಾರವಿದ್ದು, ಸ್ಲ್ಯಾಬ್‌ಗಳು 4 ಮುಖ ಹೊಂದಿದ್ದು, ಎಲ್ಲಾ ಕಡೆಯೂ ಭಾರತೀಯ ಭೂಸೇನೆ, ವಾಯುಸೇನೆ, ನೌಕಾಸೇನೆ ಅತ್ಯಮೂಲ್ಯ ಮಾಹಿತಿ ಕೆತ್ತಲಾಗುತ್ತದೆ. ಅಲ್ಲದೆ, ಮತ್ತೊಂದು ಭಾಗದಲ್ಲಿ ಭಾರತೀಯ ಸೇನೆಯ ಲಾಂಛನ ರೂಪಿಸಲಾಗುತ್ತದೆ. ಸ್ಮಾರಕದ 4 ಭಾಗಗಳಲ್ಲಿ ಭಾರತೀಯ ಸೇನೆಯ ಮಾಹಿತಿ ಲಭ್ಯವಾಗಲಿದೆ. ಸ್ಮಾರಕದ ಮೇಲೆ ಕೆತ್ತನೆ ಮಾಡಿದ ನಂತರ ಅಮೇರಿಕನ್ ವೈಟ್ ಪೇಂಟ್‌ನಿಂದ ಮಾಹಿತಿ ನಮೂದಿಸಲಾಗುತ್ತದೆ. ಇದರಿಂದ ಕೆತ್ತನೆ ಮಾಡಿದ ಅಕ್ಷರಗಳು ಶಾಶ್ವತವಾಗಿರುವ ವ್ಯವಸ್ಥೆ ಮಾಡಲಾಗುತ್ತಿದೆ.

ಅಶೋಕ ಸ್ತಂಭ: ಸ್ಮಾರಕದ ಮೇಲ್ಭಾಗದಲ್ಲಿ 7 ಅಡಿ ಎತ್ತರದ ಅಶೋಕ ಸ್ತಂಭವನ್ನು ಪ್ರತಿಷ್ಠಾಪಿಸಲಾಗುತ್ತಿದೆ. ಸಿಂಹದ 4 ತಲೆ ಇರುವ ಅಶೋಕ ಸ್ತಂಭವನ್ನು ದಾನಿಯೊಬ್ಬರು ಈಗಾಗಲೇ ಕೊಡುಗೆ ನೀಡಿದ್ದಾರೆ. ಈ ಅಶೋಕ ಸ್ತಂಭವೂ ಸಿದ್ಧಗೊಂಡಿದೆ. ಇದರಿಂದ ಯುದ್ಧ ಸ್ಮಾರಕದ ಎತ್ತರ 43 ಅಡಿಗೆ ತಲುಪಲಿದೆ.

ಸ್ಮಾರಕದಲ್ಲಿ ಯುದ್ಧ ಪರಿಕರ: ಪಾರಂಪರಿಕ ಶೈಲಿಯಲ್ಲಿಯೇ ಸ್ಮಾರಕ ನಿರ್ಮಾಣವಾಗಲಿದ್ದು, ಭೂ ಸೇನೆ, ವಾಯುಸೇನೆ, ನೌಕಾದಳದ ಮಹತ್ವ ಸಾರುವ ಯುದ್ಧ ಟ್ಯಾಂಕರ್‌ಗಳು, ಯುದ್ಧ ವಿಮಾನಗಳು, ನೌಕೆ, ಗನ್ ಸೇರಿದಂತೆ ಯುದ್ಧದಲ್ಲಿ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕಿಡಲು ನಿರ್ಧರಿಸಿದ್ದು, ಇದಕ್ಕಾಗಿ ಬಳಸಲ್ಪಟ್ಟ ಯುದ್ಧ ಪರಿಕರ ನೀಡಲು ಸೇನೆ ಸಮ್ಮತಿಸಿದೆ.

> "ಯುದ್ಧ ಸ್ಮಾರಕ ನಿರ್ಮಾಣ ಕಾಮಗಾರಿ ತ್ವರಿತಗತಿಯಲ್ಲಿ ಸಾಗಿದೆ. ಬೇಸ್ಮೆಂಟ್ ಕಾರ್ಯ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ಬಳಿಕ ಕಲ್ಲಿನ ಸ್ಲ್ಯಾಬ್‌ಗಳಿಗೆ ಪಾಲಿಶ್ ಮಾಡಿ ಭಾರತೀಯ ಸೇನೆಯ ಮೂರು ವಿಭಾಗದ ಮಾಹಿತಿ ಹಾಗೂ ಲಾಂಛನವನ್ನು ಕೆತ್ತಲಾಗುತ್ತದೆ. ಸ್ಮಾರಕದ ಮೇಲೆ ಕೆತ್ತಿರುವ ಅಕ್ಷರ ಹಾಗೂ ಸೇನೆಯ ಮಾಹಿತಿ ಮಾಸದಂತೆ ಅಮೇರಿಕನ್ ವೈಟ್ ಪೇಂಟ್ ಬಳಸಲಾಗುತ್ತಿದೆ. ಸ್ಮಾರಕ ನಿರ್ಮಾಣ ಕಾಮಗಾರಿ ಏಪ್ರಿಲ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದೆ. ಸದ್ಯವೇ ಮೈಸೂರಿನ ಜನತೆಗೆ ಯುದ್ಧ ಸ್ಮಾರಕ ಕೊಡುಗೆಯಾಗಿ ದೊರೆಯಲಿದೆ. ಸಂಸದ ಪ್ರತಾಪ ಸಿಂಹ ಸೇರಿದಂತೆ ಬಹುತೇಕ ಎಲ್ಲಾ ಜನಪ್ರತಿನಿಧಿಗಳು ಈ ಸ್ಮಾರಕ ನಿರ್ಮಾಣಕ್ಕೆ ಶ್ರಮಿಸುತ್ತಿದ್ದಾರೆ.
> **–ಸಿ.ಎಲ್.ಆನಂದ್, ನಿವೃತ್ತ ಯೋಧರು ಹಾಗೂ ಹಿರಿಯ ಕೆಎಎಸ್ ಅಧಿಕಾರಿ**

ಸಂದರ್ಶಕರ ಆಕರ್ಷಿಸಲಿವೆ ನಿಷ್ಕ್ರಿಯ ಯುದ್ಧ ಟ್ಯಾಂಕರ್, ಆರ್‌ಸಿಎಲ್ ಗನ್‌ಗಳು!



ರಾಜನಾಥ್ ಸಿಂಗ್



ಅಣ್ಣಾಸಾಹೇಬ

ಮೈಸೂರು, ಜ.17– ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ನಿರ್ಮಿಸಲಾಗುತ್ತಿರುವ ಯುದ್ಧ ಸ್ಮಾರಕದಲ್ಲಿ ಪ್ರದರ್ಶಿಸಲು ಬಳಕೆಯಾದ ಯುದ್ಧ ಟ್ಯಾಂಕರ್, ಆರ್‌ಸಿಎಲ್ ಗನ್ ನೀಡಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಮ್ಮತಿಸಿದ್ದು, ಅದಕ್ಕಾಗಿ ಮೈಸೂರು ಜಿಲ್ಲಾಡಳಿತದ ವತಿಯಿಂದ ನಿರ್ವಹಣೆ ದೃಢೀಕರಿಸುವ ಪತ್ರ ನೀಡುವಂತೆ ಸೂಚನೆ ನೀಡಲಾಗಿದೆ.

ಭಾರತೀಯ ಸೇನೆಯ ಬಗ್ಗೆ ವಿದ್ಯಾರ್ಥಿಗಳು, ಸಾಹಸಿ ಯುವ ಪೀಳಿಗೆ ಹಾಗೂ ಮೈಸೂರಿನ ಜನತೆಗೆ ಮಾಹಿತಿ ನೀಡುವ ಈ ಯುದ್ಧ ಸ್ಮಾರಕದಲ್ಲಿ ಭಾರತೀಯ ಸೇನೆಯಲ್ಲಿ ಬಳಸಲಾದ ಯುದ್ಧ ಟ್ಯಾಂಕರ್‌ಗಳು, ವಿವಿಧ ಗನ್ ಸೇರಿದಂತೆ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ರಕ್ಷಣಾ ಸಚಿವಾಲಯದ ಸಮಾಲೋಚನಾ ಸಮಿತಿಯ ಸದಸ್ಯರಾಗಿರುವ ಚಿಕ್ಕೋಡಿ ಸಂಸದ ಅಣ್ಣಾಸಾಹೇಬ ಶಂಕರ ಜೊಲ್ಲೆ ಅವರ ಮೂಲಕ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಮಾಡಲಾಗಿದೆ. ಯುದ್ಧ ಸ್ಮಾರಕಕ್ಕಾಗಿ ನಿಷ್ಕ್ರಿಯಗೊಂಡಿರುವಂತಹ ಟ್ಯಾಂಕ್‌ಗಳು ಮತ್ತು ಆರ್‌ಸಿಎಲ್ ಗನ್‌ಗಳನ್ನು (ರಿಕಾಯ್ಲೆಸ್ ಲಾಂಚರ್ ಅಥವಾ ರಿಕಾಯ್ಲೆಸ್ ಗನ್) ಕಲ್ಪಿಸುವಂತೆ ಕೋರಿದ್ದರು. ಕಳೆದ ನವೆಂಬರ್‌ನಲ್ಲಿ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್.ಆನಂದ್ ನೇತೃತ್ವದಲ್ಲಿ ನಿಯೋಗವೊಂದು ಚಿಕ್ಕೋಡಿ ಸಂಸದರೂ ಆಗಿರುವ ರಕ್ಷಣಾ ಸಚಿವಾಲಯದ ಸಮಾಲೋಚನಾ ಸಮಿತಿಯ ಸದಸ್ಯ ಅಣ್ಣಾಸಾಹೇಬ ಶಂಕರ ಜೊಲ್ಲೆ ಅವರನ್ನು ಭೇಟಿ ಮಾಡಿ ಯುದ್ಧ ಸ್ಮಾರಕಕ್ಕೆ ಟ್ಯಾಂಕರ್ ಹಾಗೂ ಗನ್ ಕೊಡುಗೆಯಾಗಿ ಕೊಡಿಸಲು ಮನವಿ ಸಲ್ಲಿಸಿದ್ದರು.

ರಕ್ಷಣಾ ಸಚಿವಾಲಯವು 2022ರ ಡಿ.8ರಂದು ಪ್ರತಿಕ್ರಿಯೆ ನೀಡಿ, ಯುದ್ಧ ಸ್ಮಾರಕಕ್ಕೆ ಟ್ಯಾಂಕರ್‌ಗಳು ಮತ್ತು ಆರ್‌ಸಿಎಲ್ ಗನ್‌ಗಳನ್ನು ಮಂಜೂರು ಮಾಡುವ ಮೊದಲು, ಮೈಸೂರು ಜಿಲ್ಲಾಡಳಿತದಿಂದ ಸ್ಮಾರಕ ನಿರ್ಮಾಣ, ಟ್ಯಾಂಕರ್ ಹಾಗೂ ಗನ್‌ಗಳನ್ನು ರಕ್ಷಣೆ ಮಾಡಲು ಬದ್ಧವಾಗಿರುವ ದೃಢೀಕರಣ ಪತ್ರದೊಂದಿಗೆ ಅಗತ್ಯ ದಾಖಲೆ ನೀಡುವಂತೆ ಸೂಚಿಸಲಾಗಿದೆ. ಈ ವಿಷಯವನ್ನು ಚಿಕ್ಕೋಡಿ ಸಂಸದ ಅಣ್ಣಾಸಾಹೇಬ ಶಂಕರ ಜೊಲ್ಲೆ ಅವರಿಗೂ ತಿಳಿಸಲಾಗಿದೆ. ಮೈಸೂರು ಜಿಲ್ಲಾಡಳಿತದಿಂದ ಪತ್ರ ರವಾನೆಯಾದರೆ ಕೇಂದ್ರದ ರಕ್ಷಣಾ ಸಚಿವಾಲಯವು ಟ್ಯಾಂಕರ್ ಹಾಗೂ ಆರ್‌ಸಿಎಲ್ ಗನ್ ನೀಡಲಿದೆ.

ಈ ಮಧ್ಯೆ ಆರ್ಡಿನೆನ್ಸ್ ಡಿಪೋದಿಂದ ಟ್ಯಾಂಕರ್ ಇನ್ನಿತರೆ ಯುದ್ಧ ಪ್ರಕರಣಗಳ ಸ್ಮಾರಕ ಸ್ಥಳಕ್ಕೆ ಸಾಗಣೆಯ ವೆಚ್ಚವನ್ನು ಭರಿಸಲು ಸಮ್ಮತಿಸಲಾಗಿದೆ. ರಕ್ಷಣಾ ಇಲಾಖೆಯ ಪೂರ್ವಾನುಮತಿ ಇಲ್ಲದೆ ಉಡುಗೊರೆ ನೀಡಿದ ವಸ್ತುಗಳನ್ನು ವಿಲೇವಾರಿ ಮಾಡದಂತೆ ಷರತ್ತು ವಿಧಿಸಲಾಗಿದೆ.

ಯುದ್ಧ ಸ್ಮಾರಕಕ್ಕೆ ಭೇಟಿ ನೀಡುವ ಪ್ರವಾಸಿಗರು, ಸಂದರ್ಶಕರಿಗೆ ಮಾಹಿತಿಯೊಂದಿಗೆ ಅವರ ಆಸಕ್ತಿ ತಣಿಸುವ ಸಲುವಾಗಿ ನಿಷ್ಕ್ರಿಯಗೊಂಡ ಟ್ಯಾಂಕರ್ಸ್ ಮತ್ತು ಗನ್‌ಗಳನ್ನು ವಸ್ತುಸಂಗ್ರಹಾಲಯ ಹಾಗೂ ಸ್ಮಾರಕಗಳಲ್ಲಿ ಪ್ರದರ್ಶಿಸುವ ಪರಿಪಾಠವಿದೆ. ಈ ಎಲ್ಲಾ ಷರತ್ತುಗಳಿಗೆ ಪೂರಕವಾದ ದಾಖಲೆಯೊಂದಿಗೆ ದೃಢೀಕರಣ ಪತ್ರ ರವಾನಿಸಿದರೆ, ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳ್ಳುವ ಯುದ್ಧ ಸ್ಮಾರಕದಲ್ಲಿ ಶೀಘ್ರವೇ ರಕ್ಷಣಾ ಸಾಮಗ್ರಿಗಳು ಪ್ರದರ್ಶನಗೊಳ್ಳಲಿವೆ. ಅಲ್ಲದೆ, ಪೂರ್ಣ ಪ್ರಮಾಣದ ಯುದ್ಧ ಸ್ಮಾರಕ ಮೈಸೂರಿನ ಜನತೆಗೆ ಲಭ್ಯವಾಗಲಿದೆ. ಪಾಳು ಬಿದ್ದ ಸ್ಥಿತಿಯಲ್ಲಿದ್ದ ಡಿಸಿ ಕಚೇರಿ ಸಮೀಪದ ಎನ್‌ಸಿಸಿ ಮೈದಾನ ಇನ್ನು ಮುಂದೆ ದೇಶಭಕ್ತಿ ಸಾರುವ ಶಕ್ತಿ ಕೇಂದ್ರವಾಗಿ ಮಾರ್ಪಡಲಿದೆ.

ಜೂನ್ 2024ರವರೆಗೆ ಬಿಜೆಪಿ ರಾಷ್ಟ್ರಾಧ್ಯಕ್ಷರಾಗಿ ಜೆಪಿ ನಡ್ಡಾ

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಘೋಷಣೆ



ನವದೆಹಲಿ: ಬಿಜೆಪಿ ರಾಷ್ಟ್ರಾಧ್ಯಕ್ಷರಾಗಿ ಜೆಪಿ ನಡ್ಡಾ 2024ರ ಜೂನ್‌ವರೆಗೆ ಮುಂದುವರೆಯಲಿದ್ದಾರೆ ಎಂದು ಪಕ್ಷದ ಹಿರಿಯ ನಾಯಕ ಅಮಿತ್ ಶಾ ಘೋಷಿಸಿದ್ದಾರೆ. ದೆಹಲಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಅಮಿತ್ ಶಾ ಈ ಘೋಷಣೆ ಮಾಡಿದ್ದು, ನಿರೀಕ್ಷೆಯಂತೆಯೇ ನಡ್ಡಾ ಪಕ್ಷದ ಅಧ್ಯಕ್ಷರಾಗಿ ಮುಂದುವರೆಯಲಿದ್ದಾರೆ.

2024ರಲ್ಲಿ ಲೋಕಸಭಾ ಚುನಾವಣೆಯನ್ನು ನಡ್ಡಾ ಅವರ ನೇತೃತ್ವದಲ್ಲಿಯೇ ಮುಂದುವರೆಸುತ್ತೇವೆ ಎಂದು ಅಮಿತ್ ಶಾ ಹೇಳಿದ್ದಾರೆ. 9 ರಾಜ್ಯಗಳ ಚುನಾವಣೆ ಹಾಗೂ ಲೋಕಸಭಾ ಚುನಾವಣೆ ದೃಷ್ಟಿಯಿಂದ ನಡ್ಡಾ ಅವರೇ ಅಧ್ಯಕ್ಷರಾಗಿ ಮುಂದುವರೆಯುವ ಸಾಧ್ಯತೆಗಳಿವೆ ಎಂದು ವಿಶ್ಲೇಷಿಸಲಾಗಿತ್ತು. ನಡ್ಡಾ ಅವರನ್ನು ಮುಂದುವರೆಸಲು ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿದೆ ಅವರ ಹಾಗೂ ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ನಾವು 2019ಕ್ಕಿಂತಲೂ ಹೆಚ್ಚಿನ ಬಹುಮತದೊಂದಿಗೆ ಅಧಿಕಾರಕ್ಕೆ ಬರುತ್ತೇವೆ ಎಂದು ಅಮಿತ್ ಶಾ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರೈಲ್ವೆ ಸಪ್ತಾಹ: ಸೇವಾ ಶ್ರೇಷ್ಠತೆ ಮೆರೆದವರಿಗೆ ಪ್ರಶಸ್ತಿ, ಪ್ರಶಂಸನಾ ಫಲಕ



ಮೈಸೂರು, ಜ.17 (ಎಂಕೆ)– ನಗರದ ಮಾನಂದವಾಡಿ ರಸ್ತೆಯಲ್ಲಿರುವ ಎನ್‌ಐಇ ಡೈಮಂಡ್ ಜುಬಿಲಿ ಸಭಾಂಗಣದಲ್ಲಿ ನೈರುತ್ಯ ರೈಲ್ವೆ ಕೇಂದ್ರಿಯ ಕಾರ್ಯಾಗಾರ, ಮೈಸೂರು ದಕ್ಷಿಣ ವಿಭಾಗದ ವತಿಯಿಂದ '66 ಮತ್ತು 67ನೇ ರೈಲ್ವೆ ಸಪ್ತಾಹ' ಸಮಾರಂಭ ನಡೆಯಿತು.

ಈ ವೇಳೆ ನೈರುತ್ಯ ರೈಲ್ವೆ ಮೈಸೂರು ವಿಭಾಗದಲ್ಲಿ ಗಣನೀಯ ಸೇವೆ ಸಲ್ಲಿಸಿದ ದಾಖಲೆಗಳ ನಿರ್ವಹಣೆ, ಸ್ವಚ್ಛತೆ ಹಾಗೂ ಸುರಕ್ಷತಾ ವಿಭಾಗಕ್ಕೆ ಪ್ರಶಸ್ತಿ ಫಲಕ ನೀಡಿ, ಅಭಿನಂದಿಸಲಾಯಿತು. ಅಲ್ಲದೆ ಅತ್ಯುತ್ತಮ ಸೇವೆ ಸಲ್ಲಿಸಿದ ರೈಲ್ವೆ ಅಧಿಕಾರಿ, ಸಿಬ್ಬಂದಿಗಳನ್ನು ಪ್ರಶಂಸನಾ ಪತ್ರ ನೀಡಿ, ಗೌರವಿಸಲಾಯಿತು.

ಬಳಿಕ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನೈರುತ್ಯ ರೈಲ್ವೆ ಮೈಸೂರು ಕೇಂದ್ರಿಯ ಕಾರ್ಯಾಗಾರದ ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕ ಓಂ ಪ್ರಕಾಶ್ ಶಾ(ಓಪಿಶಾ), ಕೊರೊನಾ ಸಂದರ್ಭದಲ್ಲಿ ಎದುರಾದ ನಿರ್ಬಂಧಗಳ ನಡುವೆಯೂ ತಂಡವಾಗಿ ಉತ್ತಮ ಕೆಲಸ ಮಾಡಿರುವುದಲ್ಲದೆ, ಕಳೆದ ಎರಡು ವರ್ಷಗಳಲ್ಲಿ ರೈಲ್ವೆ ಮಂಡಳಿಯು ನಿಗದಿಪಡಿಸಿದ ಗುರಿಯನ್ನು ಸಾಧಿಸಿದ್ದಕ್ಕಾಗಿ ಎಲ್ಲಾ ಸಿಬ್ಬಂದಿ, ಮೇಲ್ವಿಚಾರಕರು ಮತ್ತು ಅಧಿಕಾರಿಗಳನ್ನು ಅಭಿನಂದಿಸುತ್ತೇನೆ ಎಂದರು.

ನಾವು ಸವಾಲುಗಳನ್ನು ಅವಕಾಶಗಳೆಂದು ಪರಿಗಣಿಸಿ ಎದುರಿಸುವ ಪ್ರಯತ್ನ ಮಾಡಬೇಕು. ಮೈಸೂರು ಕಾರ್ಯಾಗಾರವು ತನ್ನ ಕಾರ್ಯಕ್ಷೇತ್ರದಲ್ಲಿ ಇತರ ರೈಲ್ವೆ ಕಾರ್ಯಾಗಾರಗಳಿಗೆ ಮಾದರಿಯಾಗಿದೆ. ಮೈಸೂರು ಕಾರ್ಯಾಗಾರವು ಪ್ರಧಾನ ಕಚೇರಿಯಿಂದ ನಿಯೋಜಿಸಲಾದ ಯಾವುದೇ ಸವಾಲಿನ ಕೆಲಸವನ್ನು ತೆಗೆದುಕೊಳ್ಳಲು ಸಿದ್ಧವಾಗಿದೆ. ನಿರೀಕ್ಷೆಗಳನ್ನು ಪೂರೈಸುವಲ್ಲಿ, ಸಮಂಜಸವಾದ ಗುಣಮಟ್ಟದೊಂದಿಗೆ ಗುರಿಗಳನ್ನು ಸಾಧಿಸುವಲ್ಲಿ ನಾವು ಎಂದಿಗೂ ಸಫಲರಾಗಿದ್ದೇವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಕೆಲಸದ ಸ್ಥಳದಲ್ಲಿ ಸುರಕ್ಷತೆಯ ಕಡೆಗೆ ನಮ್ಮ ಪ್ರಾಥಮಿಕ ಗಮನವಿರಬೇಕು. ಮಾರುಕಟ್ಟೆಗಳಲ್ಲಿ ಸನ್ನಿವೇಶ ಮತ್ತು ಅವಶ್ಯಕತೆಗಳು ಬಹಳ ವೇಗವಾಗಿ ಬದಲಾಗುತ್ತವೆ. ಆದ್ದರಿಂದ ಸಂಪನ್ಮೂಲಗಳ ಸದ್ಬಳಕೆಯೊಂದಿಗೆ ಉತ್ಪಾದನೆ ಹೆಚ್ಚಿಸಲು ನವ–ನವೀನ ವಿಧಾನಗಳನ್ನು ಕಂಡುಹಿಡಿಯಬೇಕು ಮತ್ತು ಅಳವಡಿಸಿಕೊಳ್ಳಬೇಕು ಎಂದರು. ನೈರುತ್ಯ ರೈಲ್ವೆ ಕೇಂದ್ರಿಯ ಕಾರ್ಯಾಗಾರದ ಮುಖ್ಯ ಸಿಪಿಓ ಜಿ.ಎಫ್.ರಾಜು, ಸಿಡಬ್ಲ್ಯೂಎಂ ಕೃಷ್ಣರಾಜ್, ಡಿಇಇ ರವಿಶಂಕರ್, ಎಡಬ್ಲ್ಯೂಎಂ ಬಿ.ಶಶಿಕುಮಾರನ್ ನಾಯರ್, ಎಫ್‌ಎಂ ಸುಬ್ರಮಣಿಯನ್, ಸಿನಿಯರ್ ಸೆಕ್ಷನ್ ಇಂಜಿನಿಯರ್ ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಸರ್ಕಾರ 'ಬಿ' ರಿಪೋರ್ಟ್ ಹಾಕಿದ ಎಲ್ಲಾ ಕೇಸ್ ಮರು ತನಿಖೆ




ಹೊಸಪೇಟೆ (ವಿಜಯನಗರ): ರಾಜ್ಯ ಸರ್ಕಾರ ಪ್ರತಿಯೊಂದು ಪ್ರಕರಣಕ್ಕೂ 'ಬಿ' ರಿಪೋರ್ಟ್ ಹಾಕುತ್ತಿದೆ. ಇದು 'ಬಿ' ರಿಪೋರ್ಟ್ ಸರ್ಕಾರ. ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ 'ರಿಪೋರ್ಟ್' ಹಾಕಿದ ಎಲ್ಲಾ ಕೇಸ್‌ಗಳ ಮರು ತನಿಖೆ ನಡೆಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ನಗರದ ಡಾ. ಪುನೀತ್ ರಾಜಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ 'ಪ್ರಜಾ ಧ್ವನಿ' ಯಾತ್ರೆ ಉದ್ಘಾಟಿಸಿ ಮಾತನಾಡಿದ ಅವರು, ಗುತ್ತಿಗೆದಾರರ ಸಾವು, ನೇಮಕಾತಿ ಸೇರಿದಂತೆ ಇತರೆ ಅಕ್ರಮಗಳನ್ನು ರಾಜ್ಯಪಾಲರ ಅಧಿಕಾರ ದುರ್ಬಳಕೆ ಮಾಡಿಕೊಂಡು ರಾಜ್ಯ ಸರ್ಕಾರ ಎಲ್ಲಾ ಕೇಸ್‌ಗಳಿಗೂ 'ಬಿ' ರಿಪೋರ್ಟ್ ಹಾಕಿದೆ. ಆದರೆ, ನಮ್ಮ ಸರ್ಕಾರ ಬಂದ ನಂತರ ಮರು ತನಿಖೆ ನಡೆಸುತ್ತೇವೆ. ಜನ ಸಾಕಷ್ಟು ನೋವು ಅನುಭವಿಸುತ್ತಿದ್ದಾರೆ. ಆ ನೋವಿಗೆ ಕಾಂಗ್ರೆಸ್ ಪಕ್ಷ ಸ್ಪಂದಿಸಲಿದೆ ಎಂದರು.

ಪಿಎಸ್‌ಐ, ಇಂಜಿನಿಯರ್, ಪ್ರಾಧ್ಯಾಪಕರು, ಶಿಕ್ಷಕರು ಸೇರಿದಂತೆ ಯಾವುದೇ ಹುದ್ದೆಗೆ ಅರ್ಜಿ ಹಾಕಿದರು ಲಂಚ ಪಡೆಯಲಾಗುತ್ತಿದೆ. ಲಂಚ ಪಡೆದು ಅಧಿಕಾರಿಗಳು ಸಿಕ್ಕಿಕೊಂಡಿದ್ದಾರೆ. ದುಡ್ಡು ಪಡೆದವರು, ಕೊಟ್ಟವರು ಜೈಲಿನಲ್ಲಿದ್ದಾರೆ. ಆದರೆ, ಅದಕ್ಕಾಗಿ ಬ್ರೋಕರ್ ಕೆಲಸ ಮಾಡಿದ ಮಂತ್ರಿಗಳು ಹೊರಗಿದ್ದಾರೆ. ಅವರ ಎಲ್ಲ ಟೇಪ್, ವಿಡಿಯೊ ಹೊರಗೆ ಬಂದಿದೆ ಎಂದರು. ಕಾಂಗ್ರೆಸ್ ಪಕ್ಷ ಈ ದೇಶದಲ್ಲಿ ರಾಷ್ಟ್ರೀಕರಣ ಕೆಲಸ ಮಾಡಿದರೆ ಪ್ರತಿಯೊಂದರಲ್ಲೂ ಬಿಜೆಪಿ ಖಾಸಗೀಕರಣ ಮಾಡುತ್ತಿದೆ. 'ಆಪರೇಷನ್ ಕಮಲ'ದ ಮೂಲಕ ಅಧಿಕಾರಕ್ಕೆ ಬಂದಿರುವ ಬಿಜೆಪಿ ಜನರಿಗಾಗಿ ಏನು ಮಾಡಿದೆ. ಅವರು ಕೊಟ್ಟ 600 ಭರವಸೆಗಳಲ್ಲಿ ಶೇ.10ರಷ್ಟು ಈಡೇರಿಸಲು ಸಾಧ್ಯವಾಗಿಲ್ಲ. ಬಿಜೆಪಿಯ ಪಾಪದ ಪುರಾಣದ ಪಟ್ಟಿ ಕಾಂಗ್ರೆಸ್‌ನಿಂದ ಬಿಡುಗಡೆಗೊಳಿಸಲಾಗಿದೆ. ನಿತ್ಯ ಒಂದೊಂದು ಪ್ರಶ್ನೆ ಕೇಳಲಾಗುತ್ತಿದೆ. ಆದರೆ, ಮುಖ್ಯಮಂತ್ರಿಯಾಗಲಿ, ಬಿಜೆಪಿ ಮುಖಂಡರಾಗಲಿ ಉತ್ತರ ಕೊಡುತ್ತಿಲ್ಲ ಎಂದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಸೇರಿದ ನಾಯಕ ಸಮುದಾಯದ ಮುಖಂಡರು

ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ ಸಮ್ಮುಖದಲ್ಲಿ ಸೇರ್ಪಡೆ



ಮೈಸೂರು,ಜ.17(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದ ಕುಮಾರಬೀಡು ಗ್ರಾಮದಲ್ಲಿ ಬಿಜೆಪಿ ತತ್ವ ಸಿದ್ಧಾಂತ ಒಪ್ಪಿ ನಾಯಕ ಜನಾಂಗದ ಹಲವು ಮುಖಂಡರು ಮಂಗಳವಾರ ಬಿಜೆಪಿ ಸೇರ್ಪಡೆಯಾದರು.

ಗ್ರಾಮದ ದೇವನಾಯಕ, ಆನಂದ, ವಿಜಯ್‌ಕುಮಾರ್, ಬೆಟ್ಟನಾಯ್ಕ, ಮೋಹನ್, ಮನು, ಚಂದ್ರ, ಪುಟ್ಟರಾಜು, ಸುರೇಶ್, ರಾಜು, ಗೋವಿಂದನಾಯ್ಕ, ರಾಮಸ್ವಾಮಿ ನಾಯ್ಕ, ಬೋರನಾಯಕ, ನವೀನ ಸೇರಿದಂತೆ ಹಲವು ಮುಖಂಡರು ಬಿಜೆಪಿ ಮುಖಂಡ, ಎಪಿಎಂಸಿ ಸದಸ್ಯ ಮರಿಸ್ವಾಮಿ ನಾಯಕ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದರು.

ಬಿಜೆಪಿಗೆ ಸೇರ್ಪಡೆಯಾದ ಮುಖಂಡರನ್ನು ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಹಾಗೂ ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್ ಕುಮಾರ್‌ಗೌಡ ಪಕ್ಷದ ಬಾವುಟ ನೀಡುವ ಮೂಲಕ ಸ್ವಾಗತಿಸಿದರು.

ಈ ವೇಳೆ ಮಾತನಾಡಿದ ಎನ್. ಅರುಣ್‌ಕುಮಾರ್ ಗೌಡ, ನಾಯಕ ಜನಾಂಗದ ಶ್ರೇಯೋಭಿವೃದ್ಧಿಗೆ ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳು ಅಪಾರ ಕೊಡುಗೆ ನೀಡಿವೆ ಎಂದರು. ತಳವಾರ ಮತ್ತು ಪರಿವಾರ ವಿಚಾರದಲ್ಲಿದ್ದ ಸಮಸ್ಯೆಗೆ ಪರಿಹಾರ, ಮೀಸಲಾತಿ ಹೆಚ್ಚಳದ ಮೂಲಕ ಮೂಲಕ ನಾಯಕ ಜನಾಂಗದ ಶ್ರೇಯೋವೃದ್ಧಿಗೆ ಕಳಕಳಿ ಹೊಂದಿರುವ ಏಕೈಕ ಪಕ್ಷ ಬಿಜೆಪಿ. ಮುಂದಿನ ಚುನಾವಣೆಗಳ ನಿಟ್ಟಿನಲ್ಲಿ ಬಿಜೆಪಿ ಸದೃಢಗೊಳಿಸಲು ಪಕ್ಷದ ಮುಖಂಡರು, ಯುವ ಕಾರ್ಯಕರ್ತರು ಮುಂದಾಗಬೇಕು ಎಂದರು.

ಗೆಜ್ಜಗಳ್ಳಿ ಮಹೇಶ್ ಮಾತನಾಡಿ, ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಪಕ್ಷ ಬಲಿಷ್ಠವಾಗುತ್ತಿದ್ದು, ಹಲವಾರು ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷ ಸೇರ್ಪಡೆಯಾಗುತ್ತಿದ್ದಾರೆ. ಆ ಮೂಲಕ ಕ್ಷೇತ್ರದಲ್ಲಿ ಪಕ್ಷದ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಾಣವಾಗಿದ್ದು, ಮುಖಂಡರು, ಕಾರ್ಯಕರ್ತರು ಪ್ರತಿ ಬೂತ್ ಮಟ್ಟದಲ್ಲಿ ಸರ್ಕಾರದ ಸಾಧನೆಯನ್ನು ಮನೆ ಮನೆಗೆ ತಲುಪಿಸಬೇಕು ಎಂದರು. ಮುಖಂಡರಾದ ಹಿನಕಲ್ ಶ್ರೀನಿವಾಸ್, ಜಗದೀಶ್‌ಗೌಡ, ಬೋಗಾದಿ ನಂದೀಶ್, ಗೋಪಾಲ್‌ಗೌಡ, ಬೀರಿಹುಂಡಿ ಸೋಮಶೇಖರ್, ಕೃಷ್ಣಮಹದೇವು, ಮಂಜು ಮತ್ತಿತರರು ಹಾಜರಿದ್ದರು.

ದಕ್ಷಿಣ ವಲಯದ 23 ಎಸ್‌ಐಗಳ ವರ್ಗಾವರ್ಗಿ

ಮೈಸೂರು, ಜ.17(ಎಸ್‌ಬಿಡಿ)– ದಕ್ಷಿಣ ವಲಯ ವ್ಯಾಪ್ತಿಯಲ್ಲಿ 23 ಪೊಲೀಸ್ ಸಬ್‌ಇನ್‌ಸ್ಪೆಕ್ಟರ್(ಎಸ್‌ಐ)ಗಳ ವರ್ಗಾವರ್ಗಿಯಾಗಿದೆ. ಮೈಸೂರು ಜಿಲ್ಲೆ ಸೆನ್ ಠಾಣೆ ಎಸ್‌ಐ ಕೃಷ್ಣಕಾಂತ ಕೋಳಿ ಕವಲಂದೆ ಠಾಣೆಗೆ, ವರುಣಾ ಠಾಣೆಯ ಸುಷ್ಮ ಲಮಾಣಿ ಮೈಸೂರು ಜಿಲ್ಲೆ ಸೆನ್ ಠಾಣೆಗೆ, ಬಿಳಿಗೆರೆ ಠಾಣೆಯ ಟಿ.ಆರತಿ ನಂಜನಗೂಡು ಸಂಚಾರ ಠಾಣೆ(1)ಗೆ, ಕೆ.ಆರ್.ನಗರ ಠಾಣೆಯ ಎಲ್.ಚಂದ್ರಹಾಸ ನಾಯಕ ಯಳಂದೂರು ಠಾಣೆಗೆ, ಅಂತರಸಂತೆ ಠಾಣೆಯ ಡಿ.ಬಿ.ಜಯಪ್ರಕಾಶ್ ಹುಲ್ಲಹಳ್ಳಿ ಠಾಣೆಗೆ, ಯಳಂದೂರು ಠಾಣೆಯ ಕರಿಬಸಪ್ಪ ಬಿಳಿಗೆರೆ ಠಾಣೆಗೆ, ಹುಲ್ಲಹಳ್ಳಿ ಪೊಲೀಸ್ ಠಾಣೆಯ ಬಿ.ಕೆ.ಮಹೇಶ್‌ಕುಮಾರ್ ಕೊಳ್ಳೇಗಾಲ ಪಟ್ಟಣ ಠಾಣೆಗೆ, ಕವಲಂದೆ ಠಾಣೆಯ ಬಿ.ಮಹೇಂದ್ರ ಮಂಡ್ಯದ ಹಲಗೂರು ಠಾಣೆಗೆ ವರ್ಗಾವಣೆಗೊಂಡಿದ್ದಾರೆ.

ಮಂಡ್ಯ ಸೆನ್ ಠಾಣೆಯ ವೈ.ಎನ್.ರವಿಕುಮಾರ್ ನಾಗಮಂಗಲ ಗ್ರಾಮಾಂತರ ಠಾಣೆಗೆ, ಆ ಠಾಣೆಯಲ್ಲಿದ್ದ ಸತೀಶ್ ಮಂಡ್ಯದ ಕಿರುಗಾವಲು ಠಾಣೆಗೆ, ಕಿರುಗಾವಲು ಠಾಣೆಯ ಎಸ್.ಜಿ.ಶೇಷಾದ್ರಿ ಬಸರಾಳು ಠಾಣೆಗೆ, ನಾಗಮಂಗಲ ಪಟ್ಟಣ ಠಾಣೆಯ ಸಿ.ರವಿಶಂಕರ್ ಮೈಸೂರಿನ ಅಂತರಸಂತೆ ಠಾಣೆಗೆ, ಹಲಗೂರು ಠಾಣೆಯ ಡಿ.ರವಿಕುಮಾರ್ ಮಂಡ್ಯದ ಶಿವಳ್ಳಿ ಠಾಣೆಗೆ, ಬಸರಾಳು ಠಾಣೆಯ ಮಲ್ಲಪ್ಪ ಮಂಡ್ಯದ ಸೆನ್ ಠಾಣೆಗೆ, ಶಿವಳ್ಳಿ ಠಾಣೆಯ ಎಂ.ಎಸ್.ಜಯಲಕ್ಷ್ಮಮ್ಮ ಮಳವಳ್ಳಿ ಪಟ್ಟಣ ಠಾಣೆಗೆ, ಮಂಡ್ಯದ ಬಿಂಡಿಗನವಿಲೆ ಠಾಣೆಯ ಎಂ.ಸಿ.ಶ್ರೀಧರ್ ಕೊಡಗಿನ ಸುಂಟಿಕೊಪ್ಪ ಠಾಣೆಗೆ, ಸುಂಟಿಕೊಪ್ಪದ ಹೆಚ್.ಡಿ.ಮಂಜು ಪೊನ್ನಂಪೇಟೆ ಠಾಣೆಗೆ, ಹಾಸನ ಜಿಲ್ಲೆ ಬೇಲೂರು ಠಾಣೆಯ ಶಿವಣ್ಣ ಗೌಡ ಜಿ.ಪಾಟೀಲ್ ಹಳೇಬೀಡು ಠಾಣೆಗೆ, ಕೊಳ್ಳೆಗಾಲ ಪಟ್ಟಣ ಠಾಣೆಯ ವಿ.ಚೇತನ್ ವರುಣ ಠಾಣೆಗೆ, ಚಾಮರಾಜನಗರ ಪೂರ್ವ ಠಾಣೆಯ ಜೆ.ರಾಜೇಂದ್ರ ಬಿಂಡಿಗನವಿಲೆ ಠಾಣೆಗೆ, ಕುದೇರು ಠಾಣೆಯ ಹನುಮಂತ್ ಉಪ್ಪಾರ್ ಸಂತೇಮರಳ್ಳಿ ಠಾಣೆಗೆ ಹಾಗೂ ಸಂತೇಮರಳ್ಳಿ ಠಾಣೆಯ ಟಿ.ಎಂ.ತಾಜುದ್ದೀನ್ ಅವರನ್ನು ಕುದೇರು ಠಾಣೆಗೆ ವರ್ಗಾವಣೆ ಮಾಡಿ ದಕ್ಷಿಣ ವಲಯ ಪೊಲೀಸ್ ಮಹಾನಿರೀಕ್ಷಕ(ಐಜಿಪಿ) ಪ್ರವೀಣ್ ಮಧುಕರ್ ಪವಾರ್ ಆದೇಶ ಹೊರಡಿಸಿದ್ದಾರೆ.

ಕೆಲ ಶಾಸಕರು ವೇಶ್ಯೆಯರಂತೆ ಮಾರಿಕೊಂಡಿದ್ದರಿಂದ ಬಿಜೆಪಿಗೆ ಅಧಿಕಾರ

ಕಾಂಗ್ರೆಸ್ ಮುಖಂಡ ಹರಿಪ್ರಸಾದ್ ವಿವಾದಿತ ಹೇಳಿಕೆ



ಹೊಸಪೇಟೆ, ಜ.17– ಕಾಂಗ್ರೆಸ್‌ನ ಪ್ರಜಾಧ್ವನಿ ಸಮಾವೇಶದಲ್ಲಿ ವಿಧಾನಪರಿಷತ್ ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್ ವಿವಾದಿತ ಹೇಳಿಕೆ ನೀಡಿದ್ದು, ಕಾಂಗ್ರೆಸ್‌ನಿಂದ ಗೆದ್ದು ಪಕ್ಷಾಂತರ ಮಾಡಿ ಬಿಜೆಪಿ ಸರ್ಕಾರ ರಚನೆಗೆ ಕೈ ಜೋಡಿಸಿದ ಶಾಸಕರನ್ನು ವೇಶ್ಯೆಯರಿಗೆ ಹೋಲಿಸಿದ್ದಾರೆ.

ಸಮಾವೇಶದಲ್ಲಿ ಮಾತನಾಡಿದ ಅವರು, 2018ರಲ್ಲಿ ರಾಜ್ಯದ ಜನ ಬಿಜೆಪಿಯನ್ನು ತಿರಸ್ಕಾರ ಮಾಡಿದ್ದರು. ಆದರೆ ಕೆಲವರು ವೇಶ್ಯೆಯರ ಮಾದರಿಯಲ್ಲಿ ತಮ್ಮ ಸ್ಥಾನಗಳನ್ನು ಮಾರಾಟ ಮಾಡಿಕೊಂಡು ಬಿಜೆಪಿ ಸರ್ಕಾರ ರಚನೆಗೆ ಕಾರಣರಾದರು.

ನಾವು, ಜೆಡಿಎಸ್ ಜತೆ ಹೊಂದಾಣಿಕೆ ಮಾಡಿಕೊಂಡು ಸಮ್ಮಿಶ್ರ ಸರ್ಕಾರ ರಚನೆ ಮಾಡಿಕೊಂಡಿದ್ದೆವು. ವೇಶ್ಯೆಯರು ತಮ್ಮ ಹೊಟ್ಟೆಪಾಡಿಗಾಗಿ ತಮ್ಮನ್ನು ಮಾರಿಕೊಂಡಂತೆ ಕೆಲ ಶಾಸಕರು ತಮ್ಮ ಸ್ಥಾನಗಳನ್ನು ಮಾರಾಟ ಮಾಡಿಕೊಂಡರು. ಇದರಿಂದಾಗಿ ಬಿಜೆಪಿ ಅಧಿಕಾರಕ್ಕೆ ಬಂತು. ಇಂತಹ ಕಾರ್ಯ ಮಾಡಿದ ಇವರಿಗೆ ರಾಜ್ಯದ ಜನ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕು ಎಂದರು. ಇನ್ನು ಹರಿಪ್ರಸಾದ್ ಹೇಳಿಕೆಯಿಂದ ಕೆರಳಿ ಕೆಂಡವಾಗಿರುವ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಕೆ.ಗೋಪಾಲಯ್ಯ, ಬಿ.ಸಿ.ಪಾಟೀಲ್, ಮುನಿರತ್ನ ಇನ್ನಿತರರು ವಾಗ್ದಾಳಿ ನಡೆಸಿದ್ದಾರೆ.

ನೆಕ್ಸಸ್ ಸೆಂಟರ್ ಸಿಟಿ ಮಾಲ್ ಸಹಯೋಗದಲ್ಲಿ ಸಂಚಾರಿ ಪೊಲೀಸರಿಂದ ರಸ್ತೆ ಸುರಕ್ಷತಾ ಸಪ್ತಾಹ

ನಾನಾ ಚಿತ್ತಿ ಫಲಕಗಳ ಮೂಲಕ ಎಚ್ಚರಿಕಾ ಸಂದೇಶ



ಮೈಸೂರು, ಜ.17(ಎಂಕೆ)– ನಗರದ ನೆಕ್ಸಸ್ ಸೆಂಟರ್ ಸಿಟಿ ಮಾಲ್ ಸಹಯೋಗದೊಂದಿಗೆ ದೇವರಾಜ ಸಂಚಾರ ಪೊಲೀಸ್ ಠಾಣೆ ವತಿಯಿಂದ 'ರಸ್ತೆ ಸುರಕ್ಷತಾ ಸಪ್ತಾಹ'ದ ಅಂಗವಾಗಿ ವಾಹನ ಸವಾರರು ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸುವಂತೆ ಜಾಗೃತಿ ಮೂಡಿಸಲಾಯಿತು.

ಹಾರ್ಡಿಂಜ್ ವೃತ್ತ ಹಾಗೂ ಕೆ.ಆರ್. ವೃತ್ತದಲ್ಲಿ ಯಮಧರ್ಮ ಮತ್ತು ಚಿತ್ರಗುಪ್ತನ ವೇಷಧಾರಿಗಳ ಜೊತೆಗೆ ಹಲವರು ಹೆಲ್ಮೆಟ್ ಹಾಕಿಕೊಂಡೇ 'ಹೆಲ್ಮೆಟ್ ಧರಿಸಿ ಜೀವ ಉಳಿಸಿ', 'ಅವಸರವೇ ಅಪಘಾತಕ್ಕೆ ಕಾರಣ', 'ನಿಧಾನವಾದ ಚಾಲನೆ ಅಮ್ಮನ ಬಳಿಗೆ ವೇಗದ ಚಾಲನೆ ಯಮನ ಬಳಿಗೆ', 'ರಸ್ತೆ ಸುರಕ್ಷತಾ ನಿಯಮ ಪಾಲನೆಯಲ್ಲಿ ನಿರ್ಲಕ್ಷ್ಯ ಬೇಡ' ಎಂಬಿತ್ಯಾದಿ ನಾಮಫಲಕಗಳನ್ನು ಹಿಡಿದು ಸಂಚಾರ ನಿಯಮಗಳ ಕುರಿತು ಜಾಗೃತಿ ಮೂಡಿಸಿದರು.

ಈ ವೇಳೆ ಹೆಲ್ಮೆಟ್ ಹಾಗೂ ಸೀಟ್ ಬೆಲ್ಟ್ ಧರಿಸದೆ ವಾಹನ ಚಲಾಯಿಸಿಕೊಂಡು ಬಂದ ಸವಾರರಿಗೆ ಗುಲಾಬಿ ಹೂ ನೀಡಿ, ಎಚ್ಚರಿಸಲಾಯಿತು. ಇದಕ್ಕೂ ಮುನ್ನ ಹಾರ್ಡಿಂಜ್ ವೃತ್ತದಿಂದ ಕೆ.ಆರ್. ವೃತ್ತದವರೆಗೆ ಬೈಕ್ ರ್‍ಯಾಲಿ ನಡೆಸಲಾಯಿತು. ಬಳಿಕ ಮಾತನಾಡಿದ ನಗರ ಸಂಚಾರ ವಿಭಾಗದ ಎಸಿಪಿ ಹೆಚ್.ಪರಶುರಾಮಪ್ಪ, ರಸ್ತೆ ಅಪಘಾತಗಳ ನಿಯಂತ್ರಣ ದೃಷ್ಟಿಯಿಂದ ಸರ್ಕಾರದ ಸೂಚನೆ ಮೇರೆಗೆ ಒಂದು ವಾರ 'ರಸ್ತೆ ಸುರಕ್ಷತಾ ಸಪ್ತಾಹ' ಹಮ್ಮಿಕೊಳ್ಳಲಾಗಿದೆ. ಸಪ್ತಾಯದ ಅಂಗವಾಗಿ ವಾಹನ ಸವಾರರಲ್ಲಿ ಸಂಚಾರಿ ನಿಯಮಗಳನ್ನು ಪಾಲಿಸುವಂತೆ ಅರಿವು ಮೂಡಿಸಲಾಗುತ್ತಿದೆ ಎಂದರು.

ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದಷ್ಟೇ ಅಲ್ಲದೆ ಹೆಲ್ಮೆಟ್ ಅನ್ನು ಲಾಕ್ ಮಾಡಿಕೊಳ್ಳಬೇಕು. ಇದರಿಂದ ಕೆಳಗೆ ಬಿದ್ದರೂ ಹೆಲ್ಮೆಟ್ ತಲೆಯಿಂದ ಬೇರ್ಪಡದೆ ಇರುವುದರಿಂದ ತಲೆ ಭಾಗಕ್ಕೆ ಉಂಟಾಗುವ ತೊಂದರೆ ಕಡಿಮೆ. ಹಾಗೆಯೇ ಕಾರು ಚಾಲನೆ ಮಾಡುವವರು ತಪ್ಪದೆ ಸೀಟ್ ಬೆಲ್ಟ್ ಹಾಕಿಕೊಳ್ಳಬೇಕು ಎಂದರು. ದೇವರಾಜ ಸಂಚಾರ ಪೊಲೀಸ್ ಇನ್ಸ್‌ಪೆಕ್ಟರ್ ಎನ್.ಮುನಿಯಪ್ಪ ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್, ಪಿಎಸ್‌ಐ ಮಲ್ಲವ್ವ ಬಂಡಿ, ಪೊಲೀಸ್ ಸಿಬ್ಬಂದಿ, ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನ ಮೋಹನ್ ಕುಮಾರ್ ಮತ್ತಿತರರಿದ್ದರು.

ಮಹಿಳೆಯರು ಪ್ರೀತಿ, ವಿಶ್ವಾಸದ ಪ್ರತಿಬಿಂಬ

ರೈತ ಕಲ್ಯಾಣ ಸಚಿವೆ ಶೋಭಾ ಕರಂದ್ಲಾಜೆ ಅಭಿಮತ



ಆದಿಚುಂಚನಗಿರಿ, ಜ.17– ಮಹಿಳೆಯರು ಪ್ರೀತಿ, ವಿಶ್ವಾಸದ ಪ್ರತಿಬಿಂಬದ ಪ್ರತೀಕ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವೆ ಶೋಭಾ ಕರಂದ್ಲಾಜೆ ಅಭಿಪ್ರಾಯಪಟ್ಟರು.

ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯಲ್ಲಿ ಭೈರವೈಕ್ಯಶ್ರೀ ಡಾ.ಬಾಲಗಂಗಾಧರನಾಥಸ್ವಾಮೀಜಿ ಅವರ 78ನೇ ಜಯಂತ್ಯುತ್ಸವ ಹಾಗೂ 10ನೇ ವರ್ಷದ ಸಂಸ್ಮರಣೋತ್ಸವ ಅಂಗವಾಗಿ ಮಂಗಳವಾರ ನಡೆದ ಚುಂಚಾದ್ರಿ ಮಹಿಳಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಕುಟುಂಬದ ಕಣ್ಣು ಇದ್ದಂತೆ. ಮಹಿಳೆ ತಾಯಿಯಷ್ಟೇ ಅಲ್ಲ ಪ್ರೀತಿ, ಸಹನೆ ಎಲ್ಲವೂ ಅವಳೇ. ಮಹಿಳಾ ದಿನಾಚರಣೆ ನಡೆಯುತ್ತಿರುವುದು ಸಂತಸದ ವಿಚಾರ. ಆದರೆ, ಮಹಿಳೆಯರಿಗಿಂತ ಪುರುಷರ ದಿನಾಚರಣೆ ಆಗಬೇಕಿದೆ. ಮಹಿಳೆಯರ ಸಮಸ್ಯೆಗಳನ್ನು ಮಹಿಳೆಯರ ಬಳಿ ಹೇಳಿಕೊಳ್ಳದೆ, ಪುರುಷರಿಗೆ ತಿಳಿಸುವ ಕೆಲಸವಾಗಬೇಕು ಎಂದರು. ಮಹಿಳೆಯರ ಮೇಲಿನ ಬಹುತೇಕ ದೌರ್ಜನ್ಯ ಪುರುಷರಿಂದಲೇ ಆಗುತ್ತಿರುವುದು ವಿಷಾದನೀಯ. ಶಿಕ್ಷಣ ಪಡೆದ ಮಹಿಳೆಯರು ಸ್ವತಂತ್ರರಾಗಿ ಸದೃಢರಾಗುತ್ತಾರೆ ಎಂದು ಹೇಳಲಾಗುತ್ತಿತ್ತು. ಆದರೂ ಸಹ ಮಹಿಳೆಯರ ಮೇಲೆ ದೌರ್ಜನ್ಯ ನಿಂತಿಲ್ಲ. ಶಿಕ್ಷಣ ಸಿಕ್ಕ ತಕ್ಷಣ ದೌರ್ಜನ್ಯ ನಿಲ್ಲುತ್ತದೆ ಎಂದು ನನಗನಿಸಿಲ್ಲ. ಪುರುಷರಲ್ಲಿನ ಮನಸ್ಥಿತಿ ಬದಲಾಗದ ಹೊರತು ಇಂತಹ ಅನಿಷ್ಟಗಳು ನಡೆಯುತ್ತಲೇ ಇರುತ್ತವೆ ಎಂದು ಬೇಸರ ವ್ಯಕ್ತಪಡಿಸಿದರು.

ರೈತರು ಅವೈಜ್ಞಾನಿಕ ಬೇಸಾಯ ಕ್ರಮದ ಬದಲು ಮಿಶ್ರ ಸೇರಿದಂತೆ ಪೂರಕ ಬೆಳೆ ಬೇಸಾಯ ಮಾಡುವ ಮೂಲಕ ಕೃಷಿಯಲ್ಲಿ ಲಾಭ ಗಳಿಸಬಹುದು. ಮಿಶ್ರ ಬೆಳೆ ಎಲ್ಲಾ ಸಮಯದಲ್ಲೂ ರೈತರಿಗೂ ಪೂರಕವಾಗಲಿದೆ ಎಂದರು.

ಸಮೂಹ ಜನಪದಗೀತೆ ಸ್ಪರ್ಧೆಯಲ್ಲಿ 30ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 15 ಮಹಿಳಾ ಸಾಧಕಿಯರನ್ನು ಸನ್ಮಾನಿಸಲಾಯಿತು. ಜಿಲ್ಲಾ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಕೃಷಿ, ರಾಗಿ ಉತ್ಪನ್ನಗಳ ಉತ್ಪಾದನೆ, ರಾಗಿ ಉತ್ಪನ್ನಗಳಿಗಿರುವ ಬೇಡಿಕೆ, ಮಾರುಕಟ್ಟೆ ಕುರಿತ ಹಲವು ಮಾಹಿತಿ ತಿಳಿಸಿದರು. ಜಿಲ್ಲಾ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಲೋಕೇಶ್ ಮೀನುಗಾರಿಕೆ ಇಲಾಖೆ ಯೋಜನೆ ಕುರಿತು ಮಾಹಿತಿ ನೀಡಿದರು.

ಸಮಾವೇಶದಲ್ಲಿ ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಎಸ್ಪಿ ಯತೀಶ್, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮು, ಸಮಾಜ ಸೇವಕಿ ರೂಪ, ಡಾ.ವಿದ್ಯಾ ಕೆ.ಮೂರ್ತಿ, ಡಾ.ಪದ್ಮಾಕ್ಷಿ, ಡಾ.ರಮ್ಯ, ಕ್ರೀಡಾ ಸೇವೆಯಲ್ಲಿರುವ ಭಾಂದವ್ಯ, ಶೃತಿ, ವಿಶಾಲಾಕ್ಷಿ, ರೈತ ಮಹಿಳೆ ಗೌರಮ್ಮ, ಸೀಮಾ, ಶೈಕ್ಷಣಿಕ ಸೇವೆಯಲ್ಲಿರುವ ಶೋಭಾ, ಸಾಂಸ್ಕೃತಿಕ ಹಾಗೂ ಸಂಸ್ಕೃತ ಸೇವೆಯಲ್ಲಿರುವ ಸುಮೇದಿನಿ, ಅರ್ಚನಾಗೌಡ, ಸ್ವಯಂ ಉದ್ಯೋಗಿ ಸರಸ್ವತಿ ಸೇರಿದಂತೆ ಭಕ್ತರು ಉಪಸ್ಥಿತರಿದ್ದರು.

> ಗಂಡು ಹೆಣ್ಣು ಭೇದ ಮೀರಿ ಒಳಿತು ಮಾಡುವವರು ಮಾತ್ರ ತಾಯಿ ಹೃದಯಿಯಾಗಲು ಸಾಧ್ಯ. ಆದಿಚುಂಚನಗಿರಿ ಮಠವು ಮಹಿಳೆಯರಿಗೆ ತವರು ಮನೆಯಂತೆ ಶಕ್ತಿ ತುಂಬುವ ಮತ್ತು ಆತ್ಮವಿಶ್ವಾಸ ಹೆಚ್ಚಿಸುವ ಕೆಲಸ ಮಾಡುತ್ತದೆ. ತಾಯಿಯಂದಿರು ಕೊಟ್ಟ ಶ್ರೇಷ್ಠ ಸಂಸ್ಕಾರದಿಂದ ಮಾತ್ರವೇ ಮಕ್ಕಳು ಸಂಸ್ಕಾರವಂತರಾಗಿ ಬೆಳೆಯಲು ಸಾಧ್ಯ. ತಾಯಿಯಿಂದ ಸಂಸ್ಕಾರ ಕಲಿತ ಶಿವಾಜಿ ಧರ್ಮ ರಕ್ಷಕನಾಗಿ ಬೆಳೆದು ನಿಂತ. ಅಂತಹ ಶಕ್ತಿ ತಾಯಿಗೆ ಮಾತ್ರವೇ ಇರಲು ಸಾಧ್ಯ. ಸೃಷ್ಟಿ ಮೂಲವೇ ತಾಯಿ ಎಂಬುದು ನಾವೆಲ್ಲರೂ ತಿಳಿಯಬೇಕಿದೆ. ಆ ನಿಟ್ಟಿನಲ್ಲಿ ನೀವೆಲ್ಲರೂ ನಿಮ್ಮ ಮುಂದಿನ ತಲೆಮಾರನ್ನು ಸಂಸ್ಕಾರವಂತರಾಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿ.
> - ಡಾ.ನಿರ್ಮಲಾನಂದನಾಥ ಸ್ವಾಮೀಜಿ,
> ಆದಿಚುಂಚನಗಿರಿ ಮಠ ಪೀಠಾಧ್ಯಕ್ಷ.

ಕಾಂಗ್ರೆಸ್‌ನಿಂದ ಮಾತ್ರ ದಕ್ಷ ಆಡಳಿತ ಸಾಧ್ಯ



ಮದ್ದೂರು, ಜ.17– ಕಾಂಗ್ರೆಸ್‌ನಿಂದ ಮಾತ್ರ ರಾಜ್ಯದಲ್ಲಿ ದಕ್ಷ ಆಡಳಿತ ಸಾಧ್ಯ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ತಾಲೂಕಿನ ಮರಳಿಗ ಗ್ರಾಮದ ಬಸವೇಶ್ವರ ಸ್ವಾಮಿ ದೇಗುಲದ ಆವರಣದಲ್ಲಿ ಸಂಕ್ರಾಂತಿ ಹಬ್ಬದ ಅಂಗವಾಗಿ ಆಯೋಜಿಸಿದ್ದ ಕಾಂಗ್ರೆಸ್ ಸಂಭ್ರಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸುಳ್ಳು ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದು ಅಭಿವೃದ್ಧಿ ಮಾಡದೇ ಕಾಲಹರಣ ಮಾಡಿವೆ. ಈ ಹಿನ್ನೆಲೆಯಲ್ಲಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತವನ್ನು ರಾಜ್ಯದ ಜನರು ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಶೇ.40 ಪರ್ಸೆಂಟ್ ಕಮಿಷನ್ ಸರ್ಕಾರ ನಡೆಯುತ್ತಿದೆ. ನಾಗಮಂಗಲ ಅದಕ್ಕೆ ಹೊರತಾಗಿಲ್ಲ. ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನಾಗಮಂಗಲದಲ್ಲಿ ಕಳೆದ 5 ವರ್ಷಗಳಿಂದ ಯಾವುದೇ ಅಭಿವೃದ್ಧಿ ಕಂಡಿಲ್ಲ. ಶಾಸಕನಾಗಿದ್ದ ವೇಳೆ ನಾನು ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಬಿಟ್ಟರೆ ಯಾವುದೇ ಅಭಿವೃದ್ಧಿಯಾಗಿಲ್ಲ ಎಂದರು.

ಎಂಎಲ್‌ಸಿ ದಿನೇಶ್ ಗೂಳಿಗೌಡ ಮಾತನಾಡಿ, ಎನ್.ಚೆಲುವರಾಯಸ್ವಾಮಿಯವರು ಜಿಲ್ಲೆಯ ಪ್ರೇರಕ ಶಕ್ತಿಯಾಗಿದ್ದು, ಜಿಲ್ಲೆ ಸಮಗ್ರ ಅಭಿವೃದ್ಧಿಯಾಗಬೇಕಾದರೆ ಮುಂದಿನ ಚುನಾವಣೆಯಲ್ಲಿ ಚೆಲುವರಾಯಸ್ವಾಮಿ ಅವರು ಗೆಲ್ಲಲೇಬೇಕು. ಮುಂದಿನ ಚುನಾವಣೆ ನಾಗಮಂಗಲದ ಸ್ವಾಭಿಮಾನದ ಪ್ರತೀಕವಾಗ ಬೇಕು ಎಂದರು. ಎಂಎಲ್ಸಿ ಮಧು ಜಿ.ಮಾದೇಗೌಡ ಮಾತನಾಡಿ, ಜಿಲ್ಲೆ ಮತ್ತು ರಾಜ್ಯದಲ್ಲಿ ಬದಲಾವಣೆ ಗಾಳಿ ಬೀಸಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಯವಾಗಿದ್ದು, ಅಧಿಕಾರಕ್ಕೆ ಬಂದರೆ ಉಚಿತವಾಗಿ 200 ಯೂನಿಟ್ ವಿದ್ಯುತ್ ಮತ್ತು ಪ್ರತಿ ಕುಟುಂಬದ ಓರ್ವ ಮಹಿಳೆಗೆ ತಿಂಗಳಿಗೆ 2 ಸಾವಿರ ರೂ. ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಗುಡಿದೊಡ್ಡಿ ಗ್ರಾಮದಿಂದ ಚಲುವರಾಯಸ್ವಾಮಿ, ದಿನೇಶ್ ಗೂಳಿಗೌಡ ಹಾಗೂ ಮಧು ಜಿ.ಮಾದೇಗೌಡರನ್ನು ತೆರೆದ ವಾಹನದಲ್ಲಿ ಕಾಂಗ್ರೆಸ್ ಮುಖಂಡರು ಬೈಕ್ ರ‍್ಯಾಲಿ ಮೂಲಕ ಕರೆತಂದರು. ಮರಳಿಗ ಗ್ರಾಮದಲ್ಲಿ ಭಾರೀ ಗಾತ್ರದ ಸೇಬಿನ ಹಾರ ಹಾಕಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಚಿತ್ರನಟ ಸಚಿನ್ ಚೆಲುವರಾಯಸ್ವಾಮಿ, ನಾಗಮಂಗಲ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎನ್.ದಿವಾಕರ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಸಿ.ಜೋಗಿಗೌಡ, ಯುವ ಮುಖಂಡ ಹರೀಶ್, ಮುಖಂಡರಾದ ಸ್ವಾಮಿ, ಎಂ.ಬಿ.ವೆಂಕಟೇಶ್ ಇದ್ದರು.

> ಜೆಡಿಎಸ್ ಪಕ್ಷ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ನಾನು ಮೋಸ ಮಾಡಿಲ್ಲ. ಕೆಲವರು ತಪ್ಪು ತಿಳಿದುಕೊಂಡಿದ್ದಾರೆ. ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷ ಕಟ್ಟಿ ಬೆಳೆಸಿದ್ದು ನಾನು. ಅಂದು ಜಿ.ಮಾದೇಗೌಡರು ಕಾಂಗ್ರೆಸ್‌ಗೆ ಬನ್ನಿ ಎಂದಿದ್ದರು. ಆಗ ಕಾಂಗ್ರೆಸ್‌ಗೆ ಹೋಗಿದ್ದರೆ ನಾನು ಇಂದು ರಾಜಕೀಯವಾಗಿ ಎಲ್ಲೋ ಇರುತ್ತಿದ್ದೆ.
> - ಎನ್.ಚಲುವರಾಯಸ್ವಾಮಿ,
> ಮಾಜಿ ಸಚಿವ

ಶ್ರೀರಂಗಪಟ್ಟಣದಲ್ಲಿ ಬೃಹತ್ ರಕ್ತದಾನ ಶಿಬಿರ



ಶ್ರೀರಂಗಪಟ್ಟಣ, ಜ.17– ಇಂದು ವಿಜ್ಞಾನ ಎಷ್ಟೇ ಮುಂದುವರೆದರೂ ರಕ್ತಕ್ಕೆ ಪರ್ಯಾಯ ವಸ್ತು ಕಂಡು ಹಿಡಿದಿಲ್ಲ. ರಕ್ತದಾನದಿಂದ ಮಾತ್ರ ಮನುಷ್ಯರ ಜೀವ ಉಳಿಸಲು ಸಾಧ್ಯ ಎಂದು ಓಂ ಶ್ರೀನಿಕೇತನ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟೇಗೌಡ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲೂಕು ಆರೋಗ್ಯಾಧಿಕಾರಿ ಕಚೇರಿ, ಓಂ ಶ್ರೀನಿಕೇತನ ಟ್ರಸ್ಟ್ ಮತ್ತು ಎಂ.ಪುಟ್ಟೇಗೌಡ ಫೌಂಡೇಶನ್, ಪರಿವರ್ತನಾ ಶಾಲಾ ಸಮೂಹ, ಉದ್ಯೋಗದಾತ ಸಂಸ್ಥೆ, ಶೇಷಾದ್ರಿಪುರಂ ಪದವಿ ಕಾಲೇಜು, ಅಚೀವರ್ಸ್ ಅಕಾಡೆಮಿ, ಭಾವಸಾರ ವಿಜನ್ ಇಂಡಿಯಾ, ರಕ್ತನಿಧಿ ಕೇಂದ್ರ ಮಂಡ್ಯ, ಇತರೆ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಶ್ರೀಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ಡಾ.ಬಾಲಗಂಗಾಧರನಾಥಸ್ವಾಮೀಜಿ ಅವರ 78ನೇ ಜಯಂತಿ ಅಂಗವಾಗಿ ನಡೆದ ಸ್ವಯಂ ಬೃಹತ್ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಗಾಯಾಳುಗಳಿಗೆ, ಗರ್ಭಿಣಿಯರಿಗೆ, ರಕ್ತಹೀನತೆ ಹಾಗೂ ಇತರೆ ರೋಗ ಗಳಿಂದ ಬಳಲುತ್ತಿರುವವರಿಗೆ ತುರ್ತಾಗಿ ರಕ್ತದ ಅಗತ್ಯವಿರುತ್ತದೆ. 18 ರಿಂದ 65 ವರ್ಷದ 45 ಕೆಜಿಗಿಂತ ಹೆಚ್ಚು ತೂಕ ಇರುವ ಎಲ್ಲಾ ಆರೋಗ್ಯವಂತರು ರಕ್ತದಾನ ಮಾಡಬೇಕು ಮತ್ತು ಬೇರೆಯವರಿಗೂ ರಕ್ತದಾನ ಮಾಡಲು ಪ್ರೇರಣೆ ನೀಡಬೇಕು ಎಂದು ಮನವಿ ಮಾಡಿದರು. ಡಿವೈಎಸ್‌ಪಿ ಸಂದೇಶ ಕುಮಾರ್ ಮಾತನಾಡಿ, ರಕ್ತದಾನ ಒಗ್ಗಟ್ಟಿನ ಪ್ರಕ್ರಿಯೆಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ರಕ್ತದಾನ ಮಾಡುವ ಮೂಲಕ ಇನ್ನೊಬ್ಬರ ಜೀವ ಉಳಿಸುವ ಕೆಲಸ ಮಾಡಬೇಕು ಎಂದರು.

ಶಿಬಿರದಲ್ಲಿ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಪಿ.ಮಾರುತಿ, ಪುರಸಭೆ ಸದಸ್ಯ ಪ್ರಕಾಶ್, ಯುವ ಮುಖಂಡ ರುಕ್ಮಾಂಗದ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಬೆನ್ನೂರ, ಅಚೀವರ್ಸ್ ಅಕಾಡೆಮಿ ಅಧ್ಯಕ್ಷ ಡಾ.ರಾಘವೇಂದ್ರ ಭಾವಸಾರ ವಿಷನ್ ಇಂಡಿಯಾ ಸಂಸ್ಥೆ ಸುರೇಶ್, ಪ್ರಯೋಗ ಶಾಲಾ ತಂತ್ರಜ್ಞಾಧಿಕಾರಿ ಹಾಗೂ ರಕ್ತನಿಧಿ ಕೇಂದ್ರದ ತಾಲೂಕು ಮೇಲ್ವಿಚಾರಕಿ ಭಾನುಮತಿ, ಆರೋಗ್ಯ ನಿರೀಕ್ಷಣಾಧಿಕಾರಿ ಚಂದನ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶಿಬಿರದಲ್ಲಿ 106 ಮಂದಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.


ಜಾನುವಾರು ಜಾತ್ರೆ ನಿಷೇಧ

ಮಂಡ್ಯ, ಜ.17– ರಾಜ್ಯದಲ್ಲಿ ಚರ್ಮಗಂಟು ರೋಗ ವೇಗವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಪಶುಪಾಲನಾ ಇಲಾಖೆ ಆದೇಶದಂತೆ ಜಿಲ್ಲೆಯಲ್ಲಿ ಜಾನುವಾರು ಜಾತ್ರೆ, ಹಾಲು ಕರೆಯುವ ಸ್ಪರ್ಧೆ, ಮಿಶ್ರತಳಿ ಕರುಗಳ ಪ್ರದರ್ಶನ ಹಾಗೂ ಶಿಬಿರ ಆಯೋಜನೆ ಮಾಡದಂತೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯಲ್ಲಿ ನಿತ್ಯ 7 ರಿಂದ 10 ರಾಸುಗಳು ಮರಣ ಹೊಂದುತ್ತಿದ್ದು, ಒಟ್ಟು 4,79,429 ಜಾನುವಾರುಗಳಿವೆ. 7727 ಜಾನುವಾರುಗಳು ಚರ್ಮಗಂಟು ರೋಗಕ್ಕೆ ತುತ್ತಾಗಿದ್ದು, 5582 ಜಾನುವಾರು ಗುಣಮುಖವಾಗಿವೆ. ಪ್ರಸ್ತುತ 1711 ಜಾನುವಾರು ಚಿಕಿತ್ಸೆಯಲ್ಲಿವೆ. ಜಾನುವಾರುಗಳ ಆರೋಗ್ಯದ ಹಿತದೃಷ್ಟಿಯಿಂದ ಜಿಲ್ಲಾದ್ಯಂತ ಜಾನುವಾರು ಸಾಗಾಣಿಕೆ, ಸಂತೆ ಹಾಗೂ ನೆರೆ ರಾಜ್ಯಗಳಿಂದ ಒಳಗೆ/ಹೊರಗೆ ಜಾನುವಾರುಗಳ ಸಾಗಾಣಿಕೆಯನ್ನು ಮುಂದಿನ ಆದೇಶದವರೆಗೆ ನಿಷೇಧಿಸಲಾಗಿದ್ದು, ರೈತ ಬಂಧುಗಳು ಸಹಕರಿಸಬೇಕಾಗಿ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಸಂಕ್ರಾಂತಿ ಸಂವಾದಕ್ಕೆ ಉತ್ತಮ ಪ್ರತಿಕ್ರಿಯೆ

ಹೆಚ್‌ಡಿಕೆ ಬಳಿ ಸಮಸ್ಯೆ ಹೇಳಿಕೊಂಡ ರೈತರು



ಕೆ.ಆರ್.ಪೇಟೆ, ಜ.17– ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ತಾಲೂಕಿನ ರೈತರೊಂದಿಗೆ ಆನ್‌ಲೈನ್ ಮೂಲಕ ನಡೆಸಿದ ಸಂಕ್ರಾಂತಿ ಸಂವಾದಕ್ಕೆ ಪಟ್ಟಣದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಪಟ್ಟಣದ ಸುಲೋಚನಮ್ಮ ರಾಮದಾಸ್ ಹೋಟೆಲ್ ಸಭಾಂಗಣದಲ್ಲಿ ತಾಲೂಕು ಜೆಡಿಎಸ್ ವತಿಯಿಂದ ನಡೆದ ಆನ್‌ಲೈನ್ ಸಂವಾದದಲ್ಲಿ ತಾಲೂಕಿನ ರೈತರು ತಮ್ಮ ಸಮಸ್ಯೆಗಳನ್ನು ಮಾಜಿ ಸಿಎಂ ಕುಮಾರಸ್ವಾಮಿ ಅವರ ಗಮನಕ್ಕೆ ತಂದರು.


ಅನ್ನದಾತನಿಗೆ ಯಾವುದೇ ಸೌಲಭ್ಯವಿಲ್ಲ. ಬೆಂಬಲ ಬೆಲೆ ನೀತಿಯಿಂದ ರೈತರಿಗೆ ಯಾವುದೇ ಅನುಕೂಲವಾಗುತ್ತಿಲ್ಲ. ಪ್ರತಿ ತಾಲೂಕಿಗೊಂದು ಗೋ ಶಾಲೆ ತೆರೆದು ರೈತರನ್ನು ಕಾಪಾಡುವಂತೆ ರೈತರು ಮನವಿ ಮಾಡಿದರು. ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ರೈತರಿಂದ ಕೃಷಿ ಉತ್ಪನ್ನಗಳನ್ನು ಖರೀದಿಸದಂತೆ ಕಾಯ್ದೆ ರೂಪಿಸಿ ದಲ್ಲಾಳಿಗಳ ಕಪಿಮುಷ್ಠಿಯಿಂದ ರೈತ ಸಮುದಾಯವನ್ನು ಬಿಡುಗಡೆ ಮಾಡುವಂತೆ ಕೋರಿದರು. ಸಂವಾದದಲ್ಲಿ ಜೆಡಿಎಸ್ ರೈತ ವಿಭಾಗದ ಮುಖಂಡರಾದ ಡಿ.ಎಸ್.ನಾಗೇಂದ್ರ ನಾಗೇಶ್, ಪುಟ್ಟೇಗೌಡ, ಸಿದ್ದೇಶ್, ಮಲ್ಲೇಶ್, ಉದಯ್, ಧನಂಜಯ್, ಕುಮಾರ್ ಮುಂತಾದವರು ಸಮಸ್ಯೆಗಳನ್ನು ಹೇಳಿಕೊಂಡರು.

ಈ ವೇಳೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು, ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕೀರಾಂ, ರಾಜ್ಯ ಸಹಕಾರ ಮಾರಾಟ ಮಂಡಳಿ ನಿರ್ದೇಶಕ ಮೋಹನ್, ಶ್ರೀನಿವಾಸ್, ಮಹದೇವೇಗೌಡ, ಬಿ.ವಿ.ನಾಗೇಶ್ ಸೇರಿದಂತೆ ಹಲವರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಜ.17– ಜಿ.ಮಲ್ಲಿಗೆರೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ಹಿನ್ನೆಲೆ ಜ.19 ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಜಿ.ಮಲ್ಲಿಗೆರೆ, ಹೊನ್ನೇಮಡು, ಹುನಗನಹಳ್ಳಿ, ನಂಜೇನಹಳ್ಳಿ, ಮುತ್ತೆಗೆರೆ, ತಿಪ್ಪಾಪುರ, ಬುಂಡಾರೆಕೊಪ್ಪಲು, ಎಂ.ಹಟ್ನ, ಸಂಗಾಪುರ ಜವನಹಳ್ಳಿ, ಮಲ್ಲೇನಹಳ್ಳಿ, ಛತ್ರನಹಳ್ಳಿ, ಬಿಲ್ಲೇನಹಳ್ಳಿ, ಬಂಕನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವ



ಜಾತ್ರಾ ಮಹೋತ್ಸವದ ಮಹಾದಾಸೋಹಕ್ಕೆ ಸುತ್ತೂರು ಶ್ರೀಗಳು ಚಾಲನೆ ನೀಡಿದರು.

ಒಂದನೇ ಪುಟದಿಂದ

ಮಹೋತ್ಸವದಲ್ಲಿ ರಥೋತ್ಸವ, ತೆಪ್ಪೋತ್ಸವ, ಕೊಂಡೋತ್ಸವ ಮುಂತಾದ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ರೈತರಿಗೆ, ಆಧುನಿಕ ವೈಜ್ಞಾನಿಕ ಕೃಷಿಯ ಪರಿಚಯ, ಕ್ಷೇತ್ರಾನುಭವ ಮತ್ತು ಪ್ರವಾಸಿಗರಿಗೆ ಮುದ ನೀಡುವಂತಹ ವಸ್ತುಪ್ರದರ್ಶನ, ಜ್ಞಾನಾರ್ಜನೆಯ ಸಾಂಸ್ಕೃತಿಕ ಕಾರ್ಯ ಕ್ರಮಗಳು, ಗ್ರಾಮೀಣ ಯುವಕರಿಗೆ ದೇಸಿ ಆಟಗಳು, ಚಿಣ್ಣರಿಗೆ ಗಾಳಿಪಟ ಸ್ಪರ್ಧೆ, ಮಕ್ಕಳ ಚಿತ್ರಕಲಾ ಸ್ಪರ್ಧೆ, ನೋಡಿ ಖುಷಿ ಪಡುವಂತಹ ರಸದೌತಣ ಕಾರ್ಯ ಕ್ರಮಗಳು ನಡೆಯಲಿದ್ದು 6 ದಿನಗಳ ಕಾಲ ಸುತ್ತೂರನ್ನು ನೋಡಿ ಖುಷಿಯಿಂದ ಸುತ್ತಬಹುದು.

ಮಹಾ ದಾಸೋಹಕ್ಕೆ ಸಿದ್ಧತೆ

6 ದಿನಗಳ ಕಾಲ ನಡೆ ಯುವ ಜಾತ್ರಾ ಮಹೋತ್ಸವದಲ್ಲಿ ಪ್ರತಿನಿತ್ಯ ಸುಮಾರು 2.5 ಲಕ್ಷ ಭಕ್ತಾಧಿಗಳಿಗೆ ತ್ರಿಕಾಲ ದಾಸೋಹ ನಡೆಯಲಿದ್ದು ಮಹಾ ದಾಸೋಹಕ್ಕೆ ಸಕಲ ಸಿದ್ಧತೆ ನಡೆದಿದೆ. ಇದಕ್ಕಾಗಿ ಉಗ್ರಾಣದಲ್ಲಿ 1 ಸಾವಿರ ಕ್ವಿಂಟಾಲ್ ಅಕ್ಕಿ, 200 ಕ್ವಿಂಟಾಲ್ ಬೇಳೆ, 500 ಕೆಜಿ ಹಸಿರು, ಹಲಸಂದೆ ಕಾಳು, ಹುರಿಗಡಲೆ 50 ಟನ್, 25 ಟನ್ ಬೆಲ್ಲ, 1500 ಟಿನ್ ಎಣ್ಣೆ 250 ಕ್ವಿಂಟಾಲ್ ಸಕ್ಕರೆ, 1 ಸಾವಿರ ಕೆಜಿ ಗೋಡಂಬಿ ದ್ರಾಕ್ಷಿ, ಈರುಳ್ಳಿ 200 ಕ್ವಿಂಟಾಲ್, 500 ಕೆಜಿ ಕಡ್ಲೆಹಿಟ್ಟು, ಮತ್ತು ಪ್ರತಿನಿತ್ಯ ನಂಜನಗೂಡು, ಮೈಸೂರು, ಗುಂಡ್ಲುಪೇಟೆ, ಪಾಂಡವಪುರ ಮಾರುಕಟ್ಟೆಗಳಿಂದ ಪ್ರತಿದಿನ 2 ಲಾರಿ ತರಕಾರಿ ಬರಲಿವೆ. ಸುಮಾರು 500 ಜನ ಬಾಣಸಿಗರು, ಸಹಾಯಕರಾಗಿ ಸುತ್ತ ಮುತ್ತಲ ಗ್ರಾಮದ 5000 ಜನ ಸ್ವಯಂ ಸೇವಕರು ಸೇವೆ ಸಲ್ಲಿಸಲಿದ್ದು ಪುರುಷರಿಗೆ, ಮಹಿಳೆಯರಿಗೆ ಪತ್ಯೇಕ ಕೌಂಟರ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮಂತ್ರ ಮಹರ್ಷಿ ಅತಿಥಿ ಗೃಹದಲ್ಲಿ ರಾಜ್ಯದ ಎಲ್ಲಾ ಸ್ವಾಮಿಜೀಗಳಿಗೆ ತಂಗಲು ಹಾಗೂ ಪ್ರಸಾದದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಅಲ್ಲದೆ ಮುಖ್ಯ ಅತಿಥಿಗಳಿಗಾಗಿ ಎಸ್‌ಜಿವಿಕೆ ಕೇಂದ್ರ ಹಾಗೂ ಬಸವ ವಿದ್ಯಾರ್ಥಿ ನಿಲಯಗಳಲ್ಲಿ ಪ್ರತ್ಯೇಕ ಕೌಂಟರ್ ತೆರೆಯಲಾಗಿದೆ.

ಜಾತ್ರಾ ವಿಶೇಷತೆಗಳು

ಸಾಮೂಹಿಕ ವಿವಾಹ: ಪ್ರತಿ ಭಾರಿಯಂತೆ ಉಚಿತ ಸಾಮೂ ಹಿಕ ವಿವಾಹವನ್ನು ಜ.19ರಂದು ಏರ್ಪಡಿಸಲಾಗಿದ್ದು ಇದರಲ್ಲಿ ಎಲ್ಲಾ ಧರ್ಮ ಜಾತಿಯವರಿಗೂ ಭಾಗವಹಿಸಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಇಲ್ಲಿಯವರೆಗೆ 2900ಕ್ಕೂ ಹೆಚ್ಚು ಜೋಡಿ ಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದಾರೆ. ವಧುವಿಗೆ ಉಚಿತವಾಗಿ ಸೀರೆ, ಕುಪ್ಪಸ, ಮಾಂಗಲ್ಯ, ಹಾಗೂ ಕಾಲುಂಗುರ, ವರನಿಗೆ ಪಂಚೆ, ವಲ್ಲಿ, ಷರ್ಟ್ ನೀಡಲಾಗುತ್ತದೆ.

ಕೃಷಿ ಮೇಳ

ವಸ್ತು ಪ್ರದರ್ಶನದ ಆವರಣದಲ್ಲಿ ಸುಮಾರು 3 ಎಕರೆ ಪ್ರದೇಶದಲ್ಲಿ ರೈತರಿಗೆ ಕೃಷಿಗೆ ಸಂಬಂಧಿಸಿದಂತೆ ಆಧುನಿಕ ತಂತ್ರಜ್ಞಾನಾಧಾರಿತ ಕೃಷಿಮೇಳವನ್ನು ಆಯೋಜಿಸಲಾಗಿದ್ದು. ರೈತರಿಗೆ ತಂತ್ರಜ್ಞಾನದ ಬಗ್ಗೆ ಮಾಹಿತಿ ಮತ್ತು ಹೊಸ ಕೃಷಿ ಪದ್ಧತಿ, ಹೊಸ ಬೆಳೆಗಳನ್ನು ಬೆಳೆಯುವ ವಿಧಾನ ಪರಿಚಯಿಸುವುದರ ಜೊತೆಗೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿ ಸಮಗ್ರ ಮಾಹಿತಿ ನೀಡುವ ವ್ಯವಸ್ಥೆ ಇರುತ್ತದೆ. ಅಲ್ಲದೆ ಈ ಬಾರಿ ಸಿರಿಧಾನ್ಯ, ಮಣ್ಣಿನ ಸವಕಳಿ ತಪ್ಪಿಸಲು ವಾಯುಕೃಷಿ, ಜಲಕೃಷಿ, ಔಷಧಿ ಬೆಳೆಯಾಗಿ ಲಾವಂಚ, ವಿದೇಶಿ ಬೆಳೆಗಳು, ತರಕಾರಿಗಳಾದ ಹೈಡ್ರೋಪೋನಿಕ್ಸ್, ಏರೋಪೊಲಿಕ್ಸ್, ಲೋಲೋರಸ, ಲೊಲೊಬಿಯಂಡ, ಪೊಕ್‌ಚಾರ್ಯ, ಬೆಳೆಗಳನ್ನು ಪರಿಚಯಿಸಲಾಗಿದೆ. ಎರೆಹುಳು ಘಟಕ, ಡೈರಿ ಫಾರಂ, ನಿರ್ಮಿಸುವ ಬಗ್ಗೆ ಮಾಹಿತಿ ದೊರಕಲಿದೆ. ಸಿರಿಧಾನ್ಯಮೇಳ, ಕೃಷಿ ವಿಚಾರ ಸಂಕೀರ್ಣ, ನಡೆಯಲಿದೆ.

1 ಎಕರೆ ಪ್ರದೇಶದಲ್ಲಿ ಕೃಷಿ ಬ್ರಹ್ಮಾಂಡ

1 ಎಕರೆ ಪ್ರದೇಶದಲ್ಲಿ ಹೇಗೆ, ಯಾವ ಬೆಳೆಗಳನ್ನು ಬೆಳೆದು ಸಮೃದ್ಧಿ ಜೀವನ ನಡೆಸಬಹುದು ಎಂಬುದರ ಬಗ್ಗೆ ಮಾಹಿತಿ ಲಭ್ಯವಾಗಲಿದೆ.

ವಸ್ತುಪ್ರದರ್ಶನ

ಕರಕುಶಲ, ಕೈಮಗ್ಗ, ಗೃಹಪಯೋಗಿ ಪದಾರ್ಥಗಳ ಪ್ರದರ್ಶನ ಗ್ರಾಮೀಣ ಉತ್ಪನ್ನಗಳು, ಹಾಗೂ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಶಿಕ್ಷಣ ಮತ್ತು ವಿಜ್ಞಾನಕ್ಕೆ, ತಂತ್ರಜ್ಞಾನ, ಆರೋಗ್ಯಕ್ಕೆ ಸಂಬಂಧಿಸದಂತೆ ತಯಾರಿಸಲ್ಪಟ್ಟ ಮಾದರಿಗಳ ಪ್ರದರ್ಶನ ಇರಲಿದೆ. ಜೊತೆಗೆ ವೈದ್ಯಕೀಯ, ತಾಂತ್ರಿಕ ವಸ್ತುಪ್ರದರ್ಶನ ಇರಲಿದೆ.

ಚಿತ್ರ ಸಂತೆ

ರಾಜ್ಯದ ಕಲಾವಿದರನ್ನು ಒಂದೇ ಸೂರಿನಡಿ ಯಲ್ಲಿ ಸಮಾವೇಶಗೊಳಿಸಿ ಅವರ ಕಲಾಕೃತಿಗಳನ್ನು ಪ್ರದರ್ಶನ ಮಾರಾಟ ಮಾಡುವ ಚಿತ್ರ ಸಂತೆಯನ್ನು ಏರ್ಪಡಿಸಲಾಗಿದೆ

ಗಾಳಿಪಟ ಸ್ಪರ್ಧೆ

ಗ್ರಾಮೀಣ ಕಲೆಗಳದ ರಂಗೋಲಿ, ಸೋಬಾನೆಪದ ಸ್ಪರ್ಧೆಗಳನ್ನು 18 ರಂದು, ಗಾಳಿಪಟ ಸ್ಪರ್ಧೆಯನ್ನು 21ರ ಶನಿವಾರದಂದು ಏರ್ಪಡಿಸಲಾಗಿದೆ.

ಕುಸ್ತಿ ಪಂದ್ಯಾವಳಿ

ದೇಶೀಯ ಕ್ರೀಡೆಗಳನ್ನು ಪ್ರೋತ್ಸಾಹಿಸುವ ಮೂಲಕ ಅವುಗಳ ಸಂರಕ್ಷಣೆಯ ಸಲುವಾಗಿ ಜ 21 ರಂದು ಕುಸ್ತಿ ಪಂದ್ಯಾವಳಿ ನಡೆಯಲಿದ್ದು ಕುಸ್ತಿ ಪ್ರಿಯರಿಗೆ ಪೈಲ್ವಾನರ ಪಟ್ಟುಗಳನ್ನು ನೋಡಿ ಖುಷಿ ಪಡುವಂತಹ ವ್ಯವಸ್ಥೆಯಿದೆ.

ಸಾಂಸ್ಕೃತಿಕ ಮೇಳ

ಜೆಎಸ್‌ಎಸ್ ಅಂತರಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ 3 ಸಾವಿರದ 500ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮಗಳು

ಗದ್ದುಗೆ ಆವರಣದಲ್ಲಿ ನಗರದ ಪ್ರದೇಶಗಳ ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರಿಂದ ಗಾಯನ, ನೃತ್ಯ ಹಾಗೂ ನಾಟಕಗಳಿರುತ್ತವೆ. ಗ್ರಾಮಾಂತರ ನಾಟಕ ತಂಡಗಳಿಂದ 20ಕ್ಕೂ ಹೆಚ್ಚು ಪೌರಾಣಿಕ, ನಾಟಕಗಳು ಏಕಕಾಲದಲ್ಲಿ ನಾಲ್ಕು ವೇದಿಕೆಗಳಲ್ಲಿ ಪ್ರದರ್ಶನಗೊಳ್ಳಲಿವೆ.

ಕಲಾತಂಡಗಳ ಪ್ರದರ್ಶನ

ಕರ್ನಾಟಕ, ಮಹಾರಾಷ್ಟ್ರ, ಮತ್ತು ತಮಿಳುನಾಡು ರಾಜ್ಯಗಳ ಕಲಾ ತಂಡಗಳಿಂದ ವರ್ಣರಂಜಿತ ಕಲಾಪ್ರದರ್ಶನಗಳನ್ನು ನಡೆಸಲಿದ್ದಾರೆ. ಈಬಾರಿಯ ಜಾತ್ರಾ ಮಹೋತ್ಸವದಲ್ಲಿ ಮನರಂಜನೆಯ ಜೊತೆಗೆ ಜ್ಞಾನಾರ್ಜನೆ ವಿಷಯ ಹಾಗೂ ಧಾರ್ಮಿಕತೆಯ ಭವ್ಯ ಸೊಬಗನ್ನು ಕಣ್ತುಂಬಿಕೊಳ್ಳಲು 6 ದಿನಗಳ ಕಾಲ ಸುತ್ತೂರನ್ನು ಸುತ್ತೋಣ ಬನ್ನಿ.

ಮೈಸೂರು ಜಿಲ್ಲೆಯಲ್ಲಿ 'ನಮ್ಮ ಕ್ಲಿನಿಕ್'ಗಳಿಗೆ ಭಾರೀ ಬೇಡಿಕೆ

ಮೈಸೂರು, ಜ.17(ಜಿಎ)–'ನಮ್ಮ ಕ್ಲಿನಿಕ್' ಮೆಚ್ಚಿಕೊಂಡ ನಮ್ಮ ಮೈಸೂರಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಒಂದು ತಿಂಗಳ ಅವಧಿಯಲ್ಲಿ ಬರೋಬ್ಬರಿ 2900ಕ್ಕೂ ಅಧಿಕ ಮಂದಿ ಇದರ ಪ್ರಯೋಜನ ಪಡೆದುಕೊಂಡಿದ್ದಾರೆ.

ನಗರ ಮತ್ತು ಪಟ್ಟಣ ಪ್ರದೇಶದಲ್ಲಿ ವಾಸಿಸುವ ಬಡ ಸಮುದಾಯಕ್ಕೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆ ನೀಡಬೇಕೆಂಬ ಉದ್ದೇಶದಿಂದ ಜಾರಿಗೆ ತಂದ ಕರ್ನಾಟಕ ಸರ್ಕಾರದ ಮಹಾತ್ವಕಾಂಕ್ಷಿಯ ಯೋಜನೆಗಳಲ್ಲಿ ಒಂದಾದ 'ನಮ್ಮ ಕ್ಲಿನಿಕ್'ಗೆ ರಾಜ್ಯದೆಲ್ಲೆಡೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಮೈಸೂರಿನಲ್ಲಿಯೂ ಬಾರೀ ಮನ್ನಣೆ ಗಳಿಸಿವೆ.

ನಗರದ ಪಿಎಚ್‌ಸಿ (ಪ್ರಾಥಮಿಕ ಆರೋಗ್ಯ ಕೇಂದ್ರ)ಗಳಲ್ಲಿ ಅತೀ ಹೆಚ್ಚು ಒತ್ತಡವಿರುವಲ್ಲಿ ಉಪ ಕೇಂದ್ರಗಳಾಗಿ 'ನಮ್ಮ ಕ್ಲಿನಿಕ್' ಆರಂಭಿಸಲಾಗಿದೆ. ಪಿಎಚ್‌ಸಿ ಮಾದರಿಯಲ್ಲಿಯೇ ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಈ ಕ್ಲಿನಿಕ್ ಕಾರ್ಯನಿರ್ವಹಿಸಲಿದ್ದು, ವೈದ್ಯರು, ಸ್ಟಾಫ್ ನರ್ಸ್, ಗ್ರೂಪ್ ಡಿ, ಡಾಟಾ ಎಂಟ್ರಿ ಸಿಬ್ಬಂದಿ ಹಾಗೂ ಈ ಕ್ಲಿನಿಕ್ ಸಮೀಪದಲ್ಲಿರುವ ಪಿಎಚ್‌ಸಿಯ ಕಿರಿಯ ಆರೋಗ್ಯ ಸಹಾಯಕಿಯರು ಸೇರಿದಂತೆ ಇನ್ನಿತರ ಕ್ಷೇತ್ರದ ಕಾರ್ಯ ಸಿಬ್ಬಂದಿ, ಲಸಿಕಾ ಸಿಬ್ಬಂದಿ ಲಭ್ಯವಿದ್ದಾರೆ.

ನಮ್ಮ ಕ್ಲಿನಿಕ್‌ನಲ್ಲಿ ಗರ್ಭಿಣಿ ಆರೈಕೆ, ಬಾಣಂತಿ ಸೇವೆ, ನವಜಾತ ಶಿಶು ಆರೈಕೆ, ಚುಚ್ಚು ಮದ್ದು ಸೇವೆ, ಮಕ್ಕಳ ಹಾಗೂ ಹದಿಹರೆಯದವರಿಗೆ ಆರೋಗ್ಯ ಸೇವೆ, ಕುಟುಂಬ ಕಲ್ಯಾಣ ಯೋಜನೆಗಳ ಅನುಷ್ಠಾನ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ, ಸಾಂಕ್ರಾಮಿಕ ರೋಗಗಳ ನಿರ್ವಹಣೆ, ಅಸಾಂಕ್ರಾಮಿಕ ರೋಗಗಳ ನಿರ್ವಹಣೆ, ಹಿರಿಯ ನಾಗರಿಕರ ಆರೈಕೆ, ಕಣ್ಣು, ದಂತ ಆರೋಗ್ಯ ಸೇವೆಗಳ ಅನುಷ್ಠಾನ, ತುರ್ತು ವೈದ್ಯಕೀಯ ಸೇವೆ, ಮಾನಸಿಕ ಆರೋಗ್ಯ ಸೇವೆ ಸೇರಿದಂತೆ ರೋಗ ನಿರ್ಣಯ (ಡಯಾಗ್ನೋಸ್) ಪರೀಕ್ಷೆಗಳನ್ನು ಮಾಡಲಾಗುತ್ತದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಟಿ.ನರಸೀಪುರ, ಕೆ.ಆರ್.ನಗರ, ಶ್ರೀರಾಂಪುರ ಮತ್ತು ಹೂಟಗಳ್ಳಿಯಲ್ಲಿ ಆರಂಭವಾಗಿರುವ 'ನಮ್ಮ ಕ್ಲಿನಿಕ್'ಗೆ ಪ್ರತಿ ದಿನ 30ಕ್ಕೂ ಅಧಿಕ ಮಂದಿ ತಪಾಸಣೆಗೆ ಬರುತ್ತಿದ್ದಾರೆ. 2022ರ ಡಿ.16ರಿಂದ 2023ರ ಜ.16ರವರೆಗೂ 2,975 ಮಂದಿ ಭೇಟಿ ನೀಡಿದ್ದು, ಅದರಲ್ಲಿ ಪುರುಷರು 1,475, ಮಹಿಳೆಯರು 1,502 ಸೇರಿದ್ದಾರೆ. 2771 ಮಂದಿ ನಮ್ಮ ಕ್ಲಿನಿಕ್‌ನಲ್ಲಿಯೇ ಉಚಿತ ಔಷಧಿ ಪಡೆದರೆ, 788 ಮಂದಿ ರೋಗ ನಿರ್ಣಯ ಪರೀಕ್ಷೆಯನ್ನು ಮಾಡಿಸಿಕೊಂಡಿದ್ದಾರೆ.

ನಗರ ಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚಿದ್ದು, ಬಹುತೇಕರು ಆರೋಗ್ಯ ಸೇವೆಗಳಿಗಾಗಿ ಖಾಸಗಿ ಕ್ಲಿನಿಕ್‌ಗಳನ್ನು ಅವಲಂಭಿಸಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ನಮ್ಮ ಕ್ಲಿನಿಕ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮತ್ತಷ್ಟು ನಮ್ಮ ಕ್ಲಿನಿಕ್ ಆರಂಭಿಸುವ ಉದ್ದೇಶವಿದೆ. ಮುಂದಿನ ದಿನಗಳಲ್ಲಿ ಇದು ಸಾಧ್ಯವಾಗಲಿದೆ ಎಂದು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತಿಂಗಳಲ್ಲಿ 2900ಕ್ಕೂ ಅಧಿಕ ಮಂದಿಗೆ ನಾನಾ ರೀತಿಯ ಚಿಕಿತ್ಸೆ



ಈವರೆಗೆ ಚಿಕಿತ್ಸೆ ಪಡೆದವರ ಮಾಹಿತಿ

ಕೇಂದ್ರ	ಪುರುಷರು	ಮಹಿಳೆಯರು	ಒಟ್ಟು
ಹೆಚ್.ಡಿ.ಕೋಟೆ	207	281	488
ಹೂಟಗಳ್ಳಿ	377	345	722
ಕೆ.ಆರ್.ನಗರ	217	289	506
ಶ್ರೀರಾಂಪುರ	428	240	668
ನರಸೀಪುರ	244	347	591
ಒಟ್ಟು	1473	1502	2975

ಒನ್ ವೇನಲ್ಲಿ ಬಂದು ಬೊಲೆರೋಗೆ ಡಿಕ್ಕಿ ಹಿಡಿಯಲೆತ್ನಿಸಿದ ವೃದ್ಧ ಚಾಲಕನ ಕಿ.ಮೀ.ವರೆಗೆ

ಎಳೆದೊಯ್ದ ಸ್ಕೂಟರ್ ಸವಾರ



ಬೆಂಗಳೂರು: ಒನ್ ವೇ ನಲ್ಲಿ ಬಂದು ನಿಂತಿದ್ದ ಬೊಲೆರೋಗೆ ಡಿಕ್ಕಿ ಹೊಡೆದ ದ್ವಿಚಕ್ರವಾಹನ ಸವಾರ ಅದನ್ನು ಪ್ರಶ್ನಿಸಿದ ವೃದ್ಧ ಚಾಲಕನನ್ನು ಕಿಮೀ ಗಟ್ಟಲೆ ಮೃಗೀಯವಾಗಿ ಎಳೆದೊಯ್ದಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ದೆಹಲಿಯ ಕಾಂಜಾವಾಲಾ ಯುವತಿ ಹತ್ಯೆ ಘಟನೆ ಹಸಿರಾಗಿರುವಂತೆಯೇ ಅಂತಹುದೇ ಮತ್ತೊಂದು ಘಟನೆ ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ನಡೆದಿದ್ದು, ವೃದ್ಧ ಬೊಲೆರೋ ಚಾಲಕನನ್ನು ಬೈಕ್ ಸವಾರನೋರ್ವ ಅಮಾನವೀಯವಾಗಿ ಕಿಮೀ ಗಟ್ಟಲೆ ಎಳೆದೊಯ್ದಿರುವ ಘಟನೆ ಮಂಗಳವಾರ ನಡೆದಿದೆ.

ಮಾಗಡಿ ರಸ್ತೆ ಟೋಲ್ ಗೇಟ್ ಬಳಿ ಈ ಕೃತ್ಯ ನಡೆದಿದ್ದು, ಕುವೆಂಪು ಭಾಷಾಭಾರತಿ ಪ್ರಾಧಿಕಾರಕ್ಕೆ ತೆರಳುತ್ತಿದ್ದ ಬೊಲೆರೋ ಚಾಲಕ 71 ವರ್ಷದ ಮುತ್ತಪ್ಪ ಅವರ ಕಾರಿಗೆ ಸುಜುಕಿ ಆಕ್ಸೆಸ್‌ನಲ್ಲಿ ಬಂದ ದ್ವಿಚಕ್ರ ಸವಾರ ಸಾಹಿಲ್ ಎಂಬಾತ ಗುದ್ದಿದ್ದು, ಈ ವೇಳೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ದ್ವಿಚಕ್ರ ವಾಹನ ಚಾಲಕ ಸಾಹಿಲ್ ಪರಾರಿಯಾಗಲು ಯತ್ನಿಸಿದ್ದು ವೇಳೆ ಮುತ್ತಪ್ಪ ಅವರು ಆತನ ಸ್ಕೂಟರ್ ಹಿಂದೆ ಹಿಡಿದುಕೊಂಡಿದ್ದಾರೆ. ಅದನ್ನು ನೋಡಿಯೂ ಕೂಡ ಆತ ಏಕಾಏಕಿ ಗಾಡಿ ಚಲಾಯಿಸಿಕೊಂಡು ಹೋಗಿದ್ದಾನೆ.

ಬೈಕ್ ಓಡಿಸುತ್ತಿದ್ದಂತೆಯೇ ಮುತ್ತಪ್ಪ ಅವರು ಕೆಳಗೆ ಬಿದ್ದಿದ್ದು, ಆದರೂ ಸ್ಕೂಟರ್ ಬಿಟ್ಟಿಲ್ಲ. ಅದಾಗ್ಯೂ ಆತ ಸ್ಕೂಟರ್ ಚಲಾಯಿಸಿಕೊಂಡು ಹೋಗಿದ್ದಾನೆ. ಈ ದೃಶ್ಯ ಕಂಡ ದಾರಿಹೋಕರು ಅದನ್ನು ತಮ್ಮ ವಾಹನಗಳಲ್ಲಿದ್ದುಕೊಂಡೇ ವಿಡಿಯೋ ಮಾಡಿಕೊಂಡಿದ್ದು, ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗಿದೆ. ಬಳಿಕ ಆಟೋ ಚಾಲಕ, ಮತ್ತೋರ್ವ ಬೈಕ್ ಸವಾರ ಮತ್ತು ಕ್ಯಾಬ್ ಚಾಲಕರೊಬ್ಬರು ಆತನ ಬೈಕ್ ಅನ್ನು ಬಲವಂತವಾಗಿ ನಿಲ್ಲಿಸಿದ್ದಾರೆ. ಬಳಿಕ ಗುಂಪುಸೇರಿದ ಸ್ಥಳೀಯರು ಬೈಕ್ ಚಾಲಕನನ್ನು ಥಳಿಸಿದ್ದಾರೆ. ಸಂತ್ರಸ್ಥ ಮುತ್ತಪ್ಪ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ವಿಜಯನಗರ ಸಂಚಾರ ಹಾಗೂ ಗೋವಿಂದರಾಜನಗರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಬಂಧಿಸಲಾಗಿದೆ.

ಸೋಲಿಗರು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಸಲಹೆ



ಮೈಸೂರು, ಜ.17– ದೇವರಲ್ಲಿ ನಂಬಿಕೆ ಹಾಗೂ ಭಕ್ತಿಯ ಜೊತೆಗೆ ಪೋಷಕರು ಮಕ್ಕಳನ್ನು ವಿದ್ಯಾ ವಂತರನ್ನಾಗಿ ಮಾಡಬೇಕು ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನಾ ಸಮನ್ವಯ ಅಧಿಕಾರಿ ಎನ್.ಮುನಿರಾಜು ಸಲಹೆ ನೀಡಿದರು. ನಗರದ ಕೆ.ಎನ್.ಪುರದಲ್ಲಿರುವ ಸೋಲಿಗರ ಕಾಲೋನಿಯಲ್ಲಿ ಏರ್ಪಡಿಸಲಾಗಿದ್ದ ಸಂಕ್ರಾಂತಿ ಹಬ್ಬದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶಾಸಕರಾದ ತನ್ವೀರ್ ಸೇಠ್ ಅವರ ಕಾಳಜಿ, ಶ್ರಮ ಹಾಗೂ ಸಮುದಾಯದವರ ಶ್ರಮದಿಂದ ಸೋಲಿಗರ ಭವನ ನಿರ್ಮಾಣವಾಗಿದೆ. ವಿದ್ಯುತ್ ಕಾರ್ಯ ನಡೆಯುತ್ತಿದ್ದು, ಇದು ಮುಗಿದ ಕೂಡಲೇ ಫೆಬ್ರವರಿ ಅಂತ್ಯದೊಳಗೆ ಸೋಲಿಗರ ಸಂಪ್ರದಾಯದಂತೆ ಭವನವನ್ನು ಉದ್ಘಾಟನೆ ಮಾಡಿ ಎಂದರು. ಇಲ್ಲಿರುವ ಸೋಲಿಗರು, ಕಾಡಿನಿಂದ ಮೈಸೂರು ನಗರಕ್ಕೆ ಬಂದು ಅಭಿವೃದ್ಧಿ ಹೊಂದುತ್ತಿದ್ದಾರೆ. ದೇವರಲ್ಲಿ ನಂಬಿಕೆ ಹಾಗೂ ಭಕ್ತಿಯ ಜೊತೆಗೆ ಪೋಷಕರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಸೋಲಿಗರು ತಮ್ಮ ಸಂಪ್ರದಾಯಗಳನ್ನು ಉಳಿಸಿ ಬೆಳಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು. ಪ್ರಬುದ್ಧ ಯೋಜನೆ ಅಡಿಯಲ್ಲಿ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ಕಳುಹಿಸಲು ಅವಕಾಶವಿದೆ. ಪೋಷಕರ ಆದಾಯ ಮಿತಿ 8 ಲಕ್ಷ ಒಳಗೆ ಇದ್ದರೆ ಓದಲು ಸಂಪೂರ್ಣ ಖರ್ಚು, 8ರಿಂದ 15ಲಕ್ಷ ರೂ.ಆದಾಯ ಇದ್ದರೆ ಶೇ.50 ರಷ್ಟು, 15–20ಲಕ್ಷ ಇದ್ದರೆ ಶೇ.33 ರಷ್ಟು ಅನುದಾನ ಸಿಗಲಿದೆ ಎಂದು ಸರಕಾರದ ಸೌಲಭ್ಯಗಳ ಬಗ್ಗೆ ವಿವರಣೆ ನೀಡಿದರು. ಕಾರ್ಯಕ್ರಮದಲ್ಲಿ ಎಸಿಪಿ ಶಶಿಧರ್, ಉದಯಗಿರಿ ಠಾಣೆ ಸಬ್ ಇನ್‌ಸ್ಪೆಕ್ಟರ್ ಸುನಿಲ್, ಅಧ್ಯಕ್ಷ ಡಿ.ನಂಜುಂಡಸ್ವಾಮಿ, ಉಪಾಧ್ಯಕ್ಷ ನಾಗರಾಜು, ಕಾರ್ಯದರ್ಶಿ ಅನಂತಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರಕ್ಕೆ ಕೀರ್ತಿ ತಂದ ಸೂದನ ಎಸ್ ಡಾಲಿ

ಮಾಸ್ಟರ್ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಸಾಧನೆ



ನಾಪೋಕ್ಲು, ಜ.17– ರಾಷ್ಟ್ರದ ಭರವಸೆಯ ಕ್ರೀಡಾಪಟು ಕೊಡಗು ಜಿಲ್ಲೆಯ ಪಾಲೂರು ಗ್ರಾಮದ ಸೂದನ ಎಸ್ ಡಾಲಿ, ಶ್ರೀಲಂಕಾದ ಸುಗತದಾಸ ಕ್ರೀಡಾಂಗಣದಲ್ಲಿ ನಡೆದ ಅಂತರ ರಾಷ್ಟ್ರೀಯ ಮಟ್ಟದ ಮಾಸ್ಟರ್ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಸಾಧನೆ ಮಾಡಿ ರಾಷ್ಟ್ರಕ್ಕೆ ಕೀರ್ತಿ ತಂದಿದ್ದಾರೆ.

ಡಾಲಿ ಜ.11 ರಿಂದ 15 ರವರೆಗೆ ನಡೆದ 800 ಮತ್ತು 1500 ಮೀ. ಸ್ಟೀಪಲ್ ಚೇಸ್ ಓಟದ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಹಾಗೂ 3000 ಮೀ. ಸ್ಟೀಪಲ್ ಚೇಸ್ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿ ಸಾಧನೆ ಮಾಡಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಈ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಕ್ರೀಡಾಂಗಣದಲ್ಲಿ ನಡೆದ 42ನೇ ರಾಜ್ಯ ಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಕೊಡಗಿನ ಮಾಸ್ಟರ್ ಅಸೋಸಿಯೇಷನ್ 15 ಕ್ರೀಡಾ ಪಟುಗಳು ಭಾಗವಹಿಸಿ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಪಡೆಯುವ ಮೂಲಕ ಸಾಧನೆ ಮಾಡಿದ್ದರು. ಈ ಕ್ರೀಡಾಪಟು ಗಳಲ್ಲಿ ಸೂದನ ಎಸ್ ಡಾಲಿ ಒಬ್ಬರು. 800 ಮೀಟರ್, 1500 ಮೀಟರ್ ಹಾಗೂ 5000 ಮೀಟರ್ ಓಟದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಚಿನ್ನದ ಪದಕವನ್ನು ಗಳಿಸಿದ್ದು, ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಇವರು 2021 ಫೆಬ್ರವರಿಯಲ್ಲಿ ವೆಸ್ಟ್ ಬೆಂಗಾಲ್‌ನ ಕೊಲ್ಕತ್ತಾದಲ್ಲಿ ನಡೆದ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಸಾಧನೆ ಮಾಡಿದ್ದಾರೆ.

ಸೌತ್ ಇಂಡಿಯಾ ಕ್ರೀಡಾಕೂಟ ಉಡುಪಿಯಲ್ಲಿ ಡಿಸೆಂಬರ್ 9 ಮತ್ತು 10 ರಂದು ನಡೆದಿದ್ದು, ಈ ಕ್ರೀಡಾ ಕೂಟದಲ್ಲಿ ಭಾಗವಹಿಸಿದ್ದಲ್ಲದೆ ಇದೀಗ ಶ್ರೀಲಂಕಾದಲ್ಲಿ ನಡೆದ ಮಾಸ್ಟರ್ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಪ್ರಶಸ್ತಿ ಗಳಿಸಿದ್ದಾರೆ.

ಸೂದನ ಎಸ್. ಡಾಲಿ ಸಣ್ಣ ಕೃಷಿಕ. ಸೂದನ ಪೂವಮ್ಮ ಮತ್ತು ದಿವಂಗತ ಸೋಮಪ್ಪನವರ ಮಗನಾಗಿದ್ದು, ಪತ್ನಿ ರಜನಿ (ಕುರುಂಜಿ) ಮತ್ತು ಮಗ ಗವೀನ್, ಮಗಳು ಘನಸ್ವಿರೊಂದಿಗೆ ಪಾಲೂರುನಲ್ಲಿ ವಾಸವಾಗಿದ್ದಾರೆ.

ಗಣಪತಿ ದೇವಾಲಯದಲ್ಲಿ ಹುಂಡಿ ಹಣ ಕಳವು

ಮಡಿಕೇರಿ, ಜ.17– ದೇವಾಲಯದ ಬೀಗ ಮುರಿದು ಹುಂಡಿಯಲ್ಲಿದ್ದ ನಗದು ಹಣ ಕಳವು ಮಾಡಿರುವ ಘಟನೆ ಚೆಟ್ಟಳ್ಳಿಯಲ್ಲಿ ನಡೆದಿದೆ. ಚೆಟ್ಟಳ್ಳಿ ಪ್ರೌಢ ಶಾಲೆಯ ಸಮೀಪದಲ್ಲಿರುವ ಶ್ರೀ ಗಣಪತಿ ದೇವಾಲಯದಲ್ಲಿ ಕಳ್ಳತನ ನಡೆದಿದ್ದು, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳವಾರ ಬೆಳಗ್ಗೆ ದೇವಾಲಯದ ಸಮಿತಿ ಅಧ್ಯಕ್ಷ ಮುಳ್ಳಂಡ ರತ್ತು ಚಂಗಪ್ಪ ಅವರು ಪೂಜೆ ಸಲ್ಲಿಸುವ ಸಲುವಾಗಿ ದೇವಾಲಯಕ್ಕೆ ಆಗಮಿಸಿದಾಗ ದೇವಾಲಯದ ಬೀಗ ಮುರಿದಿರುವುದು ಕಂಡು ಬಂದಿದೆ. ಈ ಕುರಿತು ರತ್ತು ಚಂಗಪ್ಪ ಅವರು ಚೆಟ್ಟಳ್ಳಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪರಿಶೀಲನೆ ನಡೆಸಿದ ಸಂದರ್ಭ ಹುಂಡಿಯ ಬೀಗ ಮುರಿದು ಅಂದಾಜು 5 ಸಾವಿರ ರೂ. ಕಳವು ಮಾಡಿರುವುದು ಕಂಡು ಬಂದಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಪ್ರಾರಂಭಿಸಿದ್ದಾರೆ.

ದಂತ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಉತ್ತಮ ಸೇವೆ ಸಲ್ಲಿಸಿ ಗೌರವ ಉಳಿಸಿಕೊಳ್ಳಿ

ವಿರಾಜಪೇಟೆ, ಜ.17– ಮೌಲ್ಯಧಾರಿತ ಸಮಾಜಕ್ಕೆ ವೈದ್ಯರ ಮೌಲ್ಯಯುತ ಸೇವೆ ಅಗತ್ಯ. ಜನರು ವೈದ್ಯರ ಸೇವೆ ದೇವರ ಸೇವೆ ಎಂದು ನಂಬಿದ್ದು, ಉತ್ತಮ ಸೇವೆ ಕಲ್ಪಿಸುವ ಮೂಲಕ ಅದನ್ನು ನಿಜವಾಗಿಸಬೇಕು ಎಂದು ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಂ.ಕೆ. ರಮೇಶ್ ತಿಳಿಸಿದ್ದಾರೆ.

ವಿರಾಜಪೇಟೆ ಬಳಿಯ ಕೊಡಗು ದಂತ ವೈದ್ಯಕೀಯ ಮಹಾವಿಧ್ಯಾಲಯದ ಸಭಾಂಗಣದಲ್ಲಿ ಅಂತಿಮ ವರ್ಷ ಪೂರೈಸಿದ ದಂತ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಪದವಿ ಪಡೆದುಕೊಳ್ಳುವ ಸುದಿನ. ಇದು ಸಾಮಾಜಿಕ ಜೀವನದ ಮೈಲುಗಲ್ಲು ಎಂದರು.

ಕೊಡಗು ದಂತ ಮಹಾವಿದ್ಯಾಲಯವು ಗುರುಕುಲದ ಮಾದರಿಯಲ್ಲಿ ಮೌಲ್ಯಯುತವಾದ ಶಿಕ್ಷಣ ನೀಡುತ್ತಿದೆ. ವೈದ್ಯರು ರೋಗಿಗಳನ್ನು ನಗುಮುಖದೊಂದಿಗೆ ಸ್ವಾಗತಿಸಬೇಕು ಹಾಗೂ ರೋಗಿಯ ರೋಗದ ಗುಣಲಕ್ಷಣಗಳನ್ನು ಅರಿತು ಚಿಕಿತ್ಸೆ ನೀಡಬೇಕು. ಹಲವು ಉತ್ತಮ ಆರೋಗ್ಯಕರ, ಹಿತವಾದ ಪ್ರಾಕೃತಿಕ ಜಗತ್ತನ್ನು ಕಲ್ಪಿಸಿರುವ ಸಮಾಜಕ್ಕೆ ಉತ್ತಮ ಸೇವೆಯನ್ನು ನೀಡುವುದರೊಂದಿಗೆ ಗೌರವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನ ಆಗಬೇಕು ಎಂದು ಅವರು ಹೇಳಿದರು. ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ. ಸುನೀಲ್ ಮುದ್ದಯ್ಯ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಹೊಂದಾಣಿಕೆ ಎಂಬುದು ಜೀವನದ ಪಾಠವಾಗಬೇಕು. ವೈದ್ಯರು ಕೂಡ ವ್ಯಕ್ತಿಗಳೊಂದಿಗೆ ಹೊಂದಾಣಿಕೆಯಿಂದ ಮುಂದುವರೆಯುವುದು ಅಗತ್ಯವಾಗಿದೆ. ವಿದ್ಯಾರ್ಥಿ ಜೀವನ ಪದವಿ ಪಡೆದ ನಂತರ ಕೊನೆಯಾಗಲಿದೆ. ಅದರೆ ಜೀವನದಲ್ಲಿ ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಮುಂದಾಗುವುದು ಮುಖ್ಯ ಎಂದರು. ರೋಗಿಗಳ ಬಗ್ಗೆ ಅಧ್ಯಯನ ನಡೆಸಿ ರೋಗದ ಗುಣಲಕ್ಷಣಗಳನ್ನು ತಿಳಿದು ಚಿಕಿತ್ಸೆಗೆ ಅಣಿಯಾಗಬೇಕು. ಕಾಲೇಜಿನ ಉತ್ತಮ ಪರಿಸರದಲ್ಲಿ ವಿದ್ಯೆ ಕಲಿಕೆ ಬೇಕೆ, ಸಮಾಜದಿಂದ ಕಲಿಯುವ ವಿದ್ಯೆ ಜೀವನ ಪರ್ಯಂತ ಅನ್ವಯವಾಗಲಿದೆ. ಉತ್ತಮ ವೈದ್ಯರುಗಳಾಗಿ ಸಮಾಜಕ್ಕೆ ಸೇವೆ ಸಲ್ಲಿಸುವಂತಾಗಬೇಕು ಎಂದರು.

ಸಮಾರಂಭದಲ್ಲಿ 85 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ.ಸುನೀಲ್ ಮುದ್ದಯ್ಯ ಅವರು ಚಿನ್ನದ ಪದಕವನ್ನು ಡಾ.ಆಲೆಮೆಂಗಡ ಶಾನ್‌ಶವಿ ಪೊನ್ನಮ್ಮ, ಕಂಜಿತಂಡ ಡಾ.ಎಂ.ಕುಶಾಲಪ್ಪ ಮತ್ತು ಡಾ.ಜೆ. ಜಯಲಕ್ಷ್ಮೀ ಅವರಿಗೆ ನೀಡಿದರು. ಎಲ್ಲಾ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಗಾಗಿ ಕೆ.ಪೊನ್ನಮ್ಮ ಕುಶಾಲಪ್ಪ ಚಿನ್ನದ ಪದಕವನ್ನು ಡಾ.ಕಂಜಿತಂಡ ಕುಶಾಲಪ್ಪ ಮುದ್ದಯ್ಯ ಅವರು ಪಡೆದುಕೊಂಡರು. ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾನಿಲಯದ ಡಾ.ಎಂ.ಕೆ.ರಮೇಶ್ ಅವರು ಸಾಧನೆಗೈದ ವಿದ್ಯಾರ್ಥಿಗಳಿಗೆ ಪದಕಗಳನ್ನು ವಿತರಿಸಿದರು.

ದಂತ ವೈದ್ಯಕೀಯ ಮಹಾವಿದ್ಯಾಲಯದ ಉಪ ಪ್ರಾಂಶುಪಾಲ ಡಾ.ಜಿತೇಶ್ ಜೈನ್ ಅವರು ಪದವಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಭೋದಿಸಿದರು. ಬಳಿಕ ವಿಧ್ಯಾರ್ಥಿಗಳಿಂದ ದೇಶಿಯ ಸಂಸ್ಕೃತಿಯನ್ನು ಬಿಂಬಿಸುವಂತ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ವೇದಿಕೆಯಲ್ಲಿ ದಂತ ವೈದ್ಯಕೀಯ ಪ್ರಮುಖರಾದ ಕೆ.ಕೆ.ಅಯ್ಯಪ್ಪ, ಉಪನ್ಯಾಸಕರಾದ ಡಾ. ಶಶಿಧರ್ ಮತ್ತು ಡಾ.ಬಿ.ಎಂ.ಶಾಂತಲ, ಪ್ರಾಂಶುಪಾಲರಾದ ಕೆ.ಸಿ.ಪೊನ್ನಪ್ಪ, ಸೇರಿದಂತೆ ವಿವಿಧ ವಿಭಾಗಗಳ ಉಪನ್ಯಾಸಕರು ಉಪಸ್ಥಿತರಿದ್ದರು. ವಿದ್ಯಾಲಯದ ಉಪನ್ಯಾಸಕರಾದ ಡಾ.ಶಶೀಧರ್ ಸ್ವಾಗತಿಸಿದರು, ವಿದ್ಯಾರ್ಥಿಗಳಾದ ಪ್ರತೀಕ್ಷಾ ಮತ್ತು ಕುಂಕುಂನಾಣಯ್ಯ, ಕಾರ್ಯಕ್ರಮದ ನಿರೂಪಿಸಿದರು.

ಹಿರಿಯ ಕಥೆಗಾರ ಶ್ರೀನಿವಾಸ್ ನಿಧನ



ಮಡಿಕೇರಿ, ಜ.17– ಕೊಡಗಿನ ಹಿರಿಯ ಕಥೆಗಾರ, ಕಗ್ಗೋಡ್ಲು ನಿವಾಸಿ ಪೂ.ರಾ. ಶ್ರೀನಿವಾಸ್(73) ಅವರು ಮಂಗಳವಾರ ನಿಧನರಾಗಿದ್ದಾರೆ. ವಿಭಿನ್ನ ಶೈಲಿಯ ಕಥೆಗಳಿಗೆ ಹೆಸರಾಗಿದ್ದ ಶ್ರೀನಿವಾಸ್ ಅವರು 'ಹುತ್ತರಿ ಮತ್ತು ಇತರ ಕಥೆಗಳು' ಎಂಬ ಕಥಾ ಸಂಕಲನವನ್ನು ಪ್ರಕಟಿಸಿದ್ದರು. ಮೃತರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮ ಕಗ್ಗೋಡ್ಲುವಿನಲ್ಲಿ ನಡೆಯಲಿದೆ.

ಪುರಸಭೆ ಮಾಜಿ ಅಧ್ಯಕ್ಷ ಎಂ.ಸಿ. ವಾಸುದೇವ್



ಮಡಿಕೇರಿ, ಜ.17– ಮಡಿಕೇರಿ ಪುರಸಭೆಯ ಮಾಜಿ ಅಧ್ಯಕ್ಷ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾಜಿ ಕಾರ್ಯದರ್ಶಿ ಹಾಗೂ ವಕೀಲ ಎಂ.ಸಿ.ವಾಸುದೇವ್ (80) ಅವರು ಮಂಗಳವಾರ ನಿಧನರಾಗಿದ್ದಾರೆ. ಮೃತರು ಮೂವರು ಪುತ್ರಿಯರನ್ನು ಅಗಲಿದ್ದಾರೆ. ಪುರಸಭೆಯ ಅಧ್ಯಕ್ಷರಾಗಿದ್ದಾಗ ಅವರು ಉತ್ತಮ ಆಡಳಿತ ನೀಡಿದ್ದರು. ಮೃತರ ಅಂತ್ಯಕ್ರಿಯೆ ಬುಧವಾರ ಬೆಂಗಳೂರಿನಲ್ಲಿ ನಡೆಯಲಿದೆ.

ಸಂತಾಪ: ಹಿರಿಯ ಕಾಂಗ್ರೆಸ್ಸಿಗ ಎಂ.ಸಿ.ವಾಸುದೇವ್ ಅವರ ನಿಧನಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾಅಚ್ಚಯ್ಯ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಧರ್ಮಜ ಉತ್ತಪ್ಪ, ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ, ಮಾಜಿ ಸಚಿವ ಬಿ.ಎ.ಜೀವಿಜಯ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ಟಿ.ಪಿ.ರಮೇಶ್, ಜಿಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ಕಾಂಗ್ರೆಸ್ ಸೇವಾದಳದ ಜಿಲ್ಲಾಧ್ಯಕ್ಷ ಕಾನೆಹಿತ್ಲು ಮೊಣ್ಣಪ್ಪ, ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಹೊಸೂರು ಸೂರಜ್, ಪ್ರಮುಖರಾದ ಕೆ.ಎ.ಯಾಕುಬ್, ಕೆ.ಯು.ಅಬ್ದುಲ್ ರಜಾಕ್, ಅಯ್ಯಪ್ಪ ಸೇರಿದಂತೆ ಎಲ್ಲಾ ಬ್ಲಾಕ್ ಮತ್ತು ವಿವಿಧ ಘಟಕಗಳ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಕುಡಿದ ಅಮಲಿನಲ್ಲಿ ಸಾಹಸಕ್ಕೆ ಯತ್ನಿಸಿದ ಕೂಲಿ, ಸುಟ್ಟ ಗಾಯಗಳಿಂದ ಮಹಿಳೆ ಸಾವು, ವಿಷ ಸೇವಿಸಿ ವ್ಯಕ್ತಿ ಆತ್ಮಹತ್ಯೆ

ವಿರಾಜಪೇಟೆ ತಾಲೂಕಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ಮೂವರ ಸಾವು

ವಿರಾಜಪೇಟೆ, ಜ.17– ತಾಲೂಕಿನಲ್ಲಿ ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಸಾವನ್ನಪ್ಪಿರುವ ಘಟನೆ ವರದಿಯಾಗಿದೆ.

ಕೂಲಿ ಕಾರ್ಮಿಕ ಸಾವು: ಕುಡಿದ ಅಮಲಿನಲ್ಲಿ ರಾಜಕಾಲುವೆ ಕಟ್ಟೆ ಮೇಲೆ ನಡೆದುಕೊಂಡು ಹೋಗುವ ಸಾಹಸ ಮಾಡಿದ ತಮಿಳುನಾಡಿನ ಆರ್ಮುಗ ಅಲಿಯಾಸ್ ಹರೀಶ್ ಆಯತಪ್ಪಿ ಬಿದ್ದು ಸಾವನ್ನಪ್ಪಿರುವ ಘಟನೆ ಇಲ್ಲಿನ ಮಟನ್ ಮಾರ್ಕೆಟ್ ಬಳಿ ಸಂಭವಿಸಿದೆ.

ಕೂಲಿ ಕೆಲಸಕ್ಕಾಗಿ ಸುಮಾರು 25 ವರ್ಷಗಳ ಹಿಂದೆ ವಿರಾಜಪೇಟೆಗೆ ಬಂದಿದ್ದ ಈತ ಇಲ್ಲಿನ ಸುತ್ತಮುತ್ತಲಿನ ತೋಟಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದ. ಸೋಮವಾರ (ಜ.16) ಕಂಠಪೂರ್ತಿ ಕುಡಿದು ಮಟನ್ ಮಾರ್ಕೆಟ್ ಬಳಿಯಿರುವ ರಾಜಕಾಲುವೆಯ ಕಟ್ಟೆಯ ಮೇಲೆ ನಡೆದುಕೊಂಡು ಹೋಗಲು ಪ್ರಯತ್ನಿಸಿ ಆಯತಪ್ಪಿ ಕೆಳಗೆ ಬಿದ್ದಾಗ ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿತ್ತು. ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲು ಕರೆದೊಯ್ಯುತ್ತಿದ್ದ ವೇಳೆ ಮಾರ್ಗಮಧ್ಯೆ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ವಿರಾಜಪೇಟೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಷ ಸೇವಿಸಿ ಆತ್ಮಹತ್ಯೆ: ಮತ್ತೊಂದು ಪ್ರಕರಣದಲ್ಲಿ ವ್ಯಕ್ತಿಯೋರ್ವ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಂಡಗಾಲ ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ನಿವಾಸಿ ಎಂ.ಎಂ. ರಿಯಾಜ್ (28) ಎಂಬಾತನೇ ಆತ್ಮಹತ್ಯೆಗೆ ಶರಣಾದವನು. ಈತ ಜ.13ರಂದು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ಸೇರಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಆತ್ಮಹತ್ಯೆಗೆ ಕಾರಣಗಳು ತಿಳಿದುಬಂದಿಲ್ಲ.

ಸುಟ್ಟಗಾಯಗಳಿಂದ ಮಹಿಳೆ ಸಾವು: ತೋಟದ ಲೈನ್ ಮನೆಯಲ್ಲಿ ಅಡುಗೆ ಮಾಡುತ್ತಿದ್ದ ಮಹಿಳೆಯೊಬ್ಬರು ಬೆಂಕಿ ತಗುಲಿ ಸುಟ್ಟಗಾಯಗಳಿಂದ ಸಾವನ್ನಪ್ಪಿರುವ ಪ್ರಕರಣ ವಿರಾಜಪೇಟೆ ತಾಲೂಕಿನ ಬಿಟ್ಟಂಗಾಲ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ವಾಸಿ ಮಂಜುಳಾ (26) ಎಂಬುವರೇ ಸಾವನ್ನಪ್ಪಿದ ಮಹಿಳೆ. ಜ.14ರಂದು ಇವರು ಮನೆಯಲ್ಲಿ ಅಡುಗೆ ಮಾಡುತ್ತಿದ್ದಾಗ ಬೆಂಕಿ ಹೊತ್ತಿಕೊಂಡಿದೆ. ತೀವ್ರ ಸುಟ್ಟ ಗಾಯಗಳಾದ ಈಕೆಯನ್ನು ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಾಡಹಗಲೇ ಹುಲಿ ದಾಳಿಗೆ ಹಸು ಬಲಿ

ಭಯಭೀತರಾದ ರೈತರು, ಕಾರ್ಮಿಕರು, ಶಾಲಾ ವಿದ್ಯಾರ್ಥಿಗಳು

ಸಿದ್ದಾಪುರ, ಜ.17– ಅರಣ್ಯದಂಚಿನ ಕಾಫಿ ತೋಟವೊಂದರಲ್ಲಿ ಮೇಯಲು ಬಿಟ್ಟಿದ್ದ ಹಸುವಿನ ಮೇಲೆ ಹುಲಿಯೊಂದು ದಾಳಿ ಮಾಡಿ ಕೊಂದು ಹಾಕಿರುವ ಘಟನೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಘಟ್ಟದಳ ಬಳಿ ನಡೆದಿದೆ. ಘಟ್ಟದಳ ನಿವಾಸಿ ನಂದ ಎಂಬುವರಿಗೆ ಸೇರಿದ 40 ಸಾವಿರ ರೂ. ಮೌಲ್ಯದ ಹಸುವನ್ನು ಕಾಫಿ ತೋಟದಲ್ಲಿ ಮೇಯಲು ಬಿಟ್ಟಿದ್ದ ಸಂದರ್ಭ ಹುಲಿ ದಾಳಿ ಮಾಡಿದೆ. ತೋಟದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರನ್ನು ಕಂಡ ಹುಲಿ ನಂತರ ಅಲ್ಲಿಂದ ಓಡಿಹೋಗಿದೆ.



ಗಂಭೀರವಾಗಿ ಗಾಯಗೊಂಡು ಚಿಂತಾಜನಕ ಸ್ಥಿತಿಯಲ್ಲಿದ್ದ ಹಸುವಿಗೆ ಪಾಲಿಬೆಟ್ಟ ವೈದ್ಯರು ಆರೈಕೆ ಮಾಡಿದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದೆ. ಸ್ಥಳಕ್ಕೆ ಅರಣ್ಯ ರಕ್ಷಕ ಅರುಣ್ ಸೇರಿದಂತೆ ಆರ್‌ಆರ್‌ಟಿ ಸಿಬ್ಬಂದಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಮಾಲ್ದಾರೆ, ಬಾಡಗ ಬಾಣಂಗಾಲ, ಮೈಲಾಪುರ ಸೇರಿದಂತೆ ಹಲವೆಡೆ ನಿರಂತರವಾಗಿ ಹುಲಿ ಕಾಣಿಸಿಕೊಳ್ಳುತ್ತಿದ್ದು, ಕಾರ್ಮಿಕರು, ಬೆಳೆಗಾರರು, ಶಾಲಾ ವಿದ್ಯಾರ್ಥಿಗಳು ಭಯಭೀತ ರಾಗಿದ್ದಾರೆ. ಜಾನುವಾರುಗಳ ಮೇಲೆ ದಾಳಿ ಮಾಡುವ ಮೂಲಕ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿ ಮಾಡುವ ಹುಲಿಯನ್ನು ಸೆರೆಹಿಡಿಯಬೇಕೆಂದು ಸ್ಥಳೀಯರು ಒತ್ತಾಯಿಸಿದರು. ಈ ಹಿಂದೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿದ್ದ ಹುಲಿಯೊಂದನ್ನು ವಾರಗಳ ಕಾಲ ಕಾರ್ಯಾಚರಣೆ ನಡೆಸಿ ಕೊನೆಗೂ ಸೆರೆಹಿಡಿದು ಬನ್ನೇರುಘಟ್ಟ ಉದ್ಯಾನವನಕ್ಕೆ ಬಿಡಲಾಗಿತ್ತು. ಇದೀಗ ಮತ್ತೊಂದು ಹುಲಿ ನಿರಂತರವಾಗಿ ಕಾಣಿಸಿಕೊಂಡು ಜಾನುವಾರುಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದು, ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿ ಮಾಡಿದೆ.

ಕಾಡಾನೆ ಹಿಂಡು ದಾಳಿ

ತೆಂಗಿನ ಸಸಿಗಳು, ಬಾಳೆ, ಹುರಳಿ ಫಸಲು ನಾಶ





ಶಾಸಕ ಪುಟ್ಟರಂಗಶೆಟ್ಟಿ ಭೇಟಿ, ಪರಿಶೀಲನೆ

ಚಾಮರಾಜನಗರ, ಜ.17– ಕಾಡಾನೆ ಹಿಂಡೊಂದು ದಾಳಿ ನಡೆಸಿದ ಪರಿಣಾಮ ಅಪಾರ ಪ್ರಮಾಣದ ಬೆಳೆ ನಷ್ಟವಾಗಿರುವ ಘಟನೆ ತಾಲೂಕಿನ ವಡ್ಗಲ್‌ಪುರ ಗ್ರಾಮದಲ್ಲಿ ಸೋಮವಾರ ರಾತ್ರಿ ಸಂಭವಿಸಿದೆ.

ಗ್ರಾಮದ ದೊಡ್ಡಪ್ಪನವರ ತೆಂಗಿನ ತೋಟ, ಲಿಂಗರಾಜು, ಬಸಪ್ಪ, ದೊಡ್ಡರಾಚಯ್ಯ, ಸಿದ್ಧರಾಜು, ಗುರುಸಿದ್ದಯ್ಯ ಎಂಬುವರ ಜಮೀನಿಗೆ ಕಾಡಾನೆ ಹಿಂಡು ದಾಳಿ ನಡೆಸಿ ಹುರುಳಿ ಫಸಲನ್ನು ತುಳಿದು ನಾಶಪಡಿಸಿದೆ.

ದೊಡ್ಡಪ್ಪ ಅವರ 4.25ಗುಂಟೆ ಜಮೀನಿನಲ್ಲಿ ಬೆಳೆದಿದ್ದ 400 ತೆಂಗಿನ ಸಸಿಗಳಲ್ಲಿ ಸುಮಾರು 150ಕ್ಕೂ ಹೆಚ್ಚು ಸಸಿಗಳನ್ನು ಬುಡ ಸಮೇತ ಕಿತ್ತು ಹಾಕಿದೆ. ಅಲ್ಲದೇ ಅದೇ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಫಸಲನ್ನು ನಾಶ ಮಾಡಿದ್ದು ಜಮೀನಿನ ಸುತ್ತಹಾಕಿದ್ದ ಕಲ್ಲು ಕಂಬಗಳನ್ನು ಮುರಿದು ಹಾಕಿವೆ.

ಶಾಸಕರ ಭೇಟಿ: ವಿಷಯ ತಿಳಿದು ಮಂಗಳವಾರ ಬೆಳಗ್ಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕಿ ದೀಪಾ ಜೆ.ಕಾಂಟ್ರಾಕ್ಟರ್ ಸೇರಿದಂತೆ ಇತರೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ, ನೀಡಿ ಪರಿಶೀಲನೆ ನಡೆಸಿದರು. ಸತ್ಯಮಂಗಲ ಅರಣ್ಯದಿಂದ ಬರುವ ಕಾಡಾನೆಗಳು ತಾಲೂಕಿನ ಮೂಡಲ ಹೊಸಹಳ್ಳಿ, ಅರಕಲವಾಡಿ, ವಡ್ಗಲ್‌ಪುರ, ಎಲಚಕೆರೆ, ಹೊನ್ನಹಳ್ಳಿ ಸೇರಿದಂತೆ ಇತರೆ ಗ್ರಾಮಗಳಿಗೆ ಪದೇ ಪದೆ ಲಗ್ಗೆ ಇಟ್ಟು ಬೆಳೆಗಳನ್ನು ನಾಶ ಮಾಡುವುದಲ್ಲದೇ, ರೈತರಿಗೂ ಸಹ ಹಾನಿ ಮಾಡುತ್ತಿದೆ. ಕೂಡಲೇ ಸಂಬಂಧಪಟ್ಟವರು ಕಾಡಾನೆಗಳ ದಾಳಿಗೆ ತಡೆಯೊಡ್ಡಬೇಕು ಎಂದರು.

ತಹಶೀಲ್ದಾರ್‌ಗೆ ಗ್ರಾಮಸ್ಥರ ತರಾಟೆ: ಕಳೆದ ಬಾರಿ ನಡೆದ ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯ ಸಂದರ್ಭದಲ್ಲಿ ಈ ವ್ಯಾಪ್ತಿಯಲ್ಲಿ ಕಾಡಾನೆಗಳು ದಾಳಿ ಹೆಚ್ಚಾಗಿದ್ದು, ಅವುಗಳ ತಡೆಗೆ ಕ್ರಮ ಕೈಗೊಳ್ಳುವಂತೆ ಅರಣ್ಯಾಧಿಕಾರಿಗಳಿಗೆ ಪತ್ರ ಬರೆಯುವಂತೆ ಅಂದಿನ ಸಭೆಯಲ್ಲಿ ಗ್ರಾಮಸ್ಥರು ತಹಸೀಲ್ದಾರ್ ಬಸವರಾಜು ಅವರಿಗೆ ಮನವಿ ಸಲ್ಲಿಸಿದ್ದರು.

ಈ ಸಂಬಂಧ ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಬಸವರಾಜು ಅವರನ್ನು ಅರಕಲವಾಡಿ ಮಹೇಶ್ ಅವರು ಪ್ರಶ್ನಿಸಿದಾಗ ಉಡಾಫೆಯ ಉತ್ತರ ನೀಡಿದ್ದರಿಂದ ಆಕ್ರೋಶಗೊಂಡ ರೈತರು ತಹಸೀಲ್ದಾರ್ ಅವರನ್ನು ಸುತ್ತುವರಿದು ತರಾಟೆಗೆ ತೆಗೆದುಕೊಂಡರು.

ಈ ವೇಳೆ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣಿಕೊಪ್ಪ ಹಾಗೂ ಪೊಲೀಸ್ ಸಿಬ್ಬಂದಿ ಮಧ್ಯ ಪ್ರವೇಶಿಸಿ ಜನರನ್ನು ಸಮಾಧಾನಪಡಿಸಿದರು. ಈ ವೇಳೆ ರೈತರೆಲ್ಲರೂ ನಮ್ಮ ಬೆಳೆ ನಾಶಕ್ಕೆ ಯಾವುದೇ ಪರಿಹಾರ ಕೊಡಬೇಡಿ. ಜಮೀನುಗಳಿಗೆ ಲಗ್ಗೆ ಇಟ್ಟು ನಾಶಪಡಿಸುವ ಆನೆಗಳನ್ನು ಸಾಯಿಸಲು ಅನುಮತಿ ಕೊಡಿ. ನಾವೇ ಅವುಗಳನ್ನು ತಡೆಗಟ್ಟುತ್ತೇವೆ ಎಂದು ಕಿಡಿಕಾರಿದರು.

ಹುಲಿ ಹಲ್ಲು, ಉಗುರು ಮಾರಾಟಕ್ಕೆ ಯತ್ನ, ಇಬ್ಬರ ಬಂಧನ

40 ಹುಲಿ ಉಗುರು, ಎರಡು ಹಲ್ಲುಗಳ ವಶ





ಕೊಳ್ಳೇಗಾಲ, ಜ.17– ಅಕ್ರಮವಾಗಿ ಸಂಗ್ರಹಿಸಿದ ಹುಲಿ ಹಲ್ಲು ಮತ್ತು ಉಗುರುಗಳನ್ನು ಮಾರಾಟಕ್ಕೆ ಕೊಂಡೊಯ್ಯುತ್ತಿದ್ದ ಇಬ್ಬರು ಆರೋಪಿಗಳನ್ನು ಮಾಲು ಸಮೇತ ಬಂಧಿಸುವಲ್ಲಿ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಯಶಸ್ವಿಯಾಗಿದ್ದಾರೆ.

ಅಂಡೆ ಕುರುಬರ ದೊಡ್ಡಿ ಗ್ರಾಮದ ಗೋಪಾಲ (37) ಮತ್ತು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಗೋರೆಬಾಳ ಗ್ರಾಮದ ಹನುಮೇಶ್ (31) ಬಂಧಿತರು.

ಇಬ್ಬರು ಆರೋಪಿ ಪಿ.ಜಿ. ಪಾಳ್ಯ ಅಡ್ಡರಸ್ತೆಯಲ್ಲಿ ಬೈಕ್‌ನಲ್ಲಿ 40 ಹುಲಿ ಉಗುರು, ಎರಡು ಹಲ್ಲುಗಳನ್ನು ಮಾರಾಟಕ್ಕೆ ಕೊಳ್ಳೇಗಾಲದ ಕಡೆ ತೆರಳುತ್ತಿದ್ದ ವೇಳೆ ಖಚಿತ ಮಾಹಿತಿ ಆಧರಿಸಿ ಅರಣ್ಯ ಸಂಚಾರಿ ದಳದ ಪಿಎಸ್ಐ ವಿಜಯರಾಜ, ಮುಖ್ಯಪೇದೆ ರಾಮಚಂದ್ರ, ಸ್ವಾಮಿ, ತಖೀವುಲ್ಲ, ಬಸವರಾಜು, ಶಂಕರ್, ಬಸವರಾಜ, ಚಾಲಕ ಪ್ರಭಾಕರ್ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಪಿಜಿ ಪಾಳ್ಯ ಅರಣ್ಯ ವ್ಯಾಪ್ತಿಯಲ್ಲಿ ಕೆಲವು ದಿನಗಳ ಹಿಂದೆ ಹುಲಿ ಸತ್ತು ಬಿದ್ದಿತ್ತು. ಅದರ ಹಲ್ಲು ಮತ್ತು ಉಗುರುಗಳನ್ನು ನಾವು ತೆಗೆದು ಇಟ್ಟುಕೊಂಡಿದ್ದೆವು ಎಂದು ಹೇಳಿಕೆ ನೀಡಿದ್ದು, ಹುಲಿಗಳು ನಿಜಕ್ಕೂ ಸತ್ತಿದ್ದವೇ, ಇಲ್ಲ ಆರೋಪಿಗಳ ಗುಂಪು ಕಟ್ಟಿಕೊಂಡು ಹಣದಾಸೆಗೆ ಹುಲಿಗಳ ಹತ್ಯೆ ಮಾಡಿದ್ದಾರೆಯೆ ಎಂಬುದು ಮುಂದಿನ ತನಿಖೆಯಿಂದ ತಿಳಿಯಬೇಕಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಸಂಚಾರಿ ದಳದ ಪೊಲೀಸರು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯದ ಅನುಮತಿ ಮೇರೆಗೆ ಗೋಪಾಲನನ್ನು ವಶಕ್ಕೆ ಪಡೆಯಲಾಗಿದೆ.

ಜ.20, ನಗರದಲ್ಲಿ ಕಿವುಡುತನ, ಮಾತಿನ ತೊಂದರೆಗಳ ಬೃಹತ್ ತಪಾಸಣಾ ಶಿಬಿರ



ಚಾಮರಾಜನಗರ, ಜ.17– ಜೆಎಸ್‌ಎಸ್ ಆಸ್ಪತ್ರೆ, ಮೈಸೂರು ಹಾಗೂ ಡಾ.ಬಾಬು ಸೋಷಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಜ.20ರಂದು ಶುಕ್ರವಾರ ನಗರದಲ್ಲಿ ಕಿವುಡುತನ ಹಾಗೂ ಮಾತಿನ ತೊಂದರೆಗಳ ಬೃಹತ್ ತಪಾಸಣಾ ಶಿಬಿರವನ್ನು ಅಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಡಾ.ಎ.ಆರ್.ಬಾಬು ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ನಗರದ ಜೋಡಿ ರಸ್ತೆಯಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಬೆಳಿಗ್ಗೆ 9 ಗಂಟೆ ಶಿಬಿರ ಆರಂಭವಾಗಲಿದ್ದು, ಮಧ್ಯಾಹ್ನ 1 ಗಂಟೆಯವರೆಗೆ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಮಕ್ಕಳು, ಹಿರಿಯರಿಗೆ ಕಿವುಡುತನ ಪರೀಕ್ಷೆ, ಬುದ್ಧಿ ಮಾಂದ್ಯತೆ, ಧ್ವನಿ ತೊಂದರೆಗಳ ಪರೀಕ್ಷೆ, ಸೆರೆಬ್ರಲ್ ಪಾಲ್ಸಿ, ಓದಿನಲ್ಲಿ ತೊಂದರೆ ಇರುವ ಮಕ್ಕಳ ಪರೀಕ್ಷೆ, ಉಚ್ಚಾರಣೆ ದೋಷ ಪರೀಕ್ಷೆ, ಬೆಳೆಯುವ ಮಕ್ಕಳಿಗೆ ಮಾತು ಮತ್ತು ಭಾಷೆಯ ತೊಂದರೆಗಳ ಪರೀಕ್ಷೆ, ಲಕ್ವಾ ಕಾಯಿಲೆ ನಂತರ ಮಾತಿನ ಪರೀಕ್ಷೆ, ಲಕ್ವಾ ಕಾಯಿಲೆ ನಂತರ ನುಂಗುವ ತೊಂದರೆಗಳ ಪರೀಕ್ಷೆ ಹಾಗೂ ಚಿಕಿತ್ಸೆ ನೀಡಲಾಗುವುದು ಎಂದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಐದು ವರ್ಷದೊಳಗಿನ ಪೂರ್ಣ ಕಿವುಡುತನ ಇರುವ ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಆಪರೇಷನ್ ಅನ್ನು ಉಚಿತವಾಗಿ ಕೇಂದ್ರ ಸರ್ಕಾರದ ಅಡಿಪ್ ಹಾಗೂ ರಾಜ್ಯ ಸರ್ಕಾರದ ಸಸ್ತ್ ಯೋಜನೆಯ ಅಡಿಯಲ್ಲಿ ಮಾಡಲಾಗುವುದು. ಇದಕ್ಕೆ ಸುಮಾರು 7 ರಿಂದ 8 ಲಕ್ಷ ರೂ. ವೆಚ್ಚವಾಗಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಡಾ.ಬಾಬು ಮನವಿ ಮಾಡಿದರು.

ಈಗಾಗಲೇ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಣ್ಣಿನ ಉಚಿತ ತಪಾಸಣೆ ಶಿಬಿರ, ಹೃದಯರೋಗ ತಪಾಸಣೆ ಶಿಬಿರವನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಲಾಗಿದೆ. ಇದರಿಂದ ತುಂಬಾ ಜನರಿಗೆ ಅನುಕೂಲವಾಗಿದೆ. ನಮ್ಮ ಟ್ರಸ್ಟ್ ಹಾಗೂ ಜೆಎಸ್‌ಎಸ್ ಆಸ್ಪತ್ರೆ ಮೈಸೂರು ಸಹಯೋಗದಲ್ಲಿ ಪ್ರಥಮ ಬಾರಿಗೆ ಕಿವುಡುತನ ಹಾಗೂ ಮಾತಿನ ತೊಂದರೆಗಳ ಬೃಹತ್ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ಜಿಪಂ ಮಾಜಿ ಸದಸ್ಯ ಸಿ.ಎನ್. ಬಾಲರಾಜು, ಬಿಜೆಪಿ ಮುಖಂಡರಾದ ನೂರೊಂದುಶೆಟ್ಟಿ, ಬಾಲಸುಬ್ರಹ್ಮಣ್ಯಂ ಹಾಜರಿದ್ದರು.

ಬಿಳಿಗಿರಿರಂಗನ ಬೆಟ್ಟದಲ್ಲಿ ಜ.26ರಿಂದ ಪಕ್ಷಿಗಳ ಗಣತಿ

ಹೊಸ ಪ್ರಭೇದಗಳ ನಿರೀಕ್ಷೆಯಲ್ಲಿ ವನ್ಯ ಪ್ರೇಮಿಗಳು



ಚಾಮರಾಜನಗರ, ಜ.17– ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ(ಬಿಆರ್‌ಟಿ) ಹುಲಿ ಸಂರಕ್ಷಿತಾರಣ್ಯ ಪ್ರದೇಶದಲ್ಲಿ ಜ.26ರಿಂದ 29ರವರೆಗೆ ಪಕ್ಷಿಗಳ ಗಣತಿ ಕಾರ್ಯ ನಡೆಯಲಿದ್ದು, ಅರಣ್ಯದಲ್ಲಿ ಹಕ್ಕಿಗಳ ಹೊಸ ಪ್ರಭೇದಗಳು ಪತ್ತೆಯಾಗಲಿವೆಯೇ ಎಂದು ವನ್ಯಪ್ರೇಮಿಗಳು ನಿರೀಕ್ಷಿಸುತ್ತಿದ್ದಾರೆ.

ಬಿಆರ್‌ಟಿ ಅರಣ್ಯದಲ್ಲಿ ಇದುವರೆಗೆ 282 ಪ್ರಭೇದದ ಹಕ್ಕಿಗಳನ್ನು ಗುರುತಿಸಲಾಗಿದೆ. 2012ರಲ್ಲಿ ಅರಣ್ಯ ಇಲಾಖೆ ಇಡೀ ಸಂರಕ್ಷಿತ ಪ್ರದೇಶದಲ್ಲಿ ವೈಜ್ಞಾನಿಕವಾಗಿ ಪಕ್ಷಿಗಳ ಗಣತಿ ನಡೆಸಿತ್ತು. 11 ವರ್ಷದ ಬಳಿಕ ಬಿಳಿಗಿರಿ ರಂಗನ ಬೆಟ್ಟದಲ್ಲಿ ಅರಣ್ಯದಲ್ಲಿರುವ ಹಕ್ಕಿ ಪ್ರಭೇದಗಳ ಗುರುತಿಸುವ ಕೆಲಸ ನಡೆಯಲಿದೆ.

ಅರಣ್ಯ ಇಲಾಖೆಯು ಇಕೊ ವಾಲ್ಯುಂಟಿಯರ್ಸ್ ಗ್ರೂಪ್ ಆಫ್ ಇಂಡಿಯಾದ ಸಹಕಾರ ಪಡೆದು ಸಮೀಕ್ಷೆ ಹಮ್ಮಿಕೊಳ್ಳಲಾಗಿದ್ದು, ಖ್ಯಾತ ಪಕ್ಷಿ ತಜ್ಞ ಡಾ.ಸಲೀಂ ಅಲಿ ಅವರು 1939ರಲ್ಲಿ ಇಲ್ಲಿನ ಅರಣ್ಯದಲ್ಲಿ ಸುತ್ತಾಡಿ, 100ಕ್ಕೂ ಹೆಚ್ಚು ಪಕ್ಷಿಗಳನ್ನು ಗುರುತಿಸಿದ್ದರು.

2011ರವರೆಗೆ ಈ ಕಾಡಿನಲ್ಲಿ 274 ಪ್ರಭೇದದ ಪಕ್ಷಿಗಳನ್ನು ಗುರುತಿಸಲಾಗಿತ್ತು. ಬಳಿಕ 2012ರಲ್ಲಿ ನಡೆದಿದ್ದ ಪಕ್ಷಿಗಳ ಗಣತಿಯಲ್ಲಿ ಎಂಟು ಹೊಸ ಪ್ರಭೇದಗಳು ಸೇರ್ಪಡೆಯಾಗಿ ಒಟ್ಟು 282 ಬಗೆಯ ಪಕ್ಷಿಗಳನ್ನು ಗುರುತಿಸಲಾಗಿತ್ತು. ಪ್ರಸ್ತುತ 11 ವರ್ಷದ ಬಳಿಕ ಪಕ್ಷಿಗಳ ಗಣತಿ ನಡೆಯುತ್ತಿದ್ದು, ಮತ್ತಷ್ಟು ಪ್ರಭೇದಗಳು ಪತ್ತೆಯಾಗುವ ನಿರೀಕ್ಷೆ ಇದೆ.

2021ರ ಜನವರಿಯಲ್ಲಿ ಬಿಳಿಗಿರಿ ರಂಗನಬೆಟ್ಟದಲ್ಲಿ ಮೂರು ದಿನ ಹಕ್ಕಿ ಹಬ್ಬ ನಡೆದಿತ್ತು. ಪಕ್ಷಿಗಳ ವೀಕ್ಷಣೆ, ಅವುಗಳ ಬಗ್ಗೆ ವಿಚಾರಗೋಷ್ಠಿ, ಬಿಆರ್‌ಟಿ ಅರಣ್ಯದ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನವನ್ನು ಹಕ್ಕಿ ಹಬ್ಬದ ಮೂಲಕ ಮಾಡಲಾಗಿತ್ತು.

2012ರಲ್ಲಿ ನಮ್ಮಲ್ಲಿ ಹಕ್ಕಿಗಳ ಗಣತಿ ನಡೆದಿತ್ತು. ಹೊಸ ಪ್ರಭೇಧ ಯಾವುದಾದರೂ ಇವೆಯೇ ಎಂಬುದನ್ನು ಪತ್ತೆ ಹಚ್ಚುವ ಉದ್ದೇಶದಿಂದ ಈ ವರ್ಷ ಸಮೀಕ್ಷೆ ನಡೆಸಲಾಗುತ್ತಿದೆ. ಜ. 18ರವರೆಗೆ ಸ್ವಯಂ ಸೇವಕರ ನೋಂದಣಿಗೆ ಅವಕಾಶ ನೀಡಲಾಗಿದೆ ಎಂದ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರೂ ಆದ ಡಿಸಿಎಫ್ ದೀಪ್ ಜೆ.ಕಾಂಟ್ರಾಕ್ಟರ್ ತಿಳಿಸಿದರು.

ಪಕ್ಷಿ ಗಣತಿ ಕಾರ್ಯಕ್ಕಾಗಿ ಸ್ವಯಂ ಸೇವಕರ ನೋಂದಾಣಿ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ಪಕ್ಷಿ ತಜ್ಞರು, ಪಕ್ಷಿಗಳ ಗಣತಿ ಹಾಗೂ ವೀಕ್ಷಣೆಯಲ್ಲಿ ಅನುಭವ ಹೊಂದಿರುವವರಿಗೆ ಅವಕಾಶ ನೀಡಲಾಗುವುದು. ಈ ಕಾರ್ಯಕ್ಕೆ 50ರಿಂದ 70 ಜನರಿಗೆ ಮಾತ್ರ ಅವಕಾಶ ನೀಡಲು ಚಿಂತಿಸಲಾಗಿದೆ ಎಂದರು. ನೋಂದಣಿ ಮಾಡಿಕೊಂಡವರು ವಿವಿಧ ತಂಡಗಳಲ್ಲಿ ಪೂರ್ವ ನಿರ್ಧಾರಿತ ಮಾರ್ಗಗಳಲ್ಲಿ ಕಾಡಿನಲ್ಲಿ ಸುತ್ತಾಡಿ ಪಕ್ಷಿಗಳ ವಿವರಗಳನ್ನು ದಾಖಲು ಮಾಡಲಿದ್ದಾರೆ. ಈ ಹಿಂದೆ ಗುರುತಿಸಲಾಗಿರುವ ಪಕ್ಷಿಗಳ ಪಟ್ಟಿಯನ್ನು ಮೊದಲೇ ಅವರಿಗೆ ನೀಡಲಾಗು ವುದು. ಹೊಸ ಪ್ರಭೇದ ಕಂಡು ಬಂದರೆ ಅದರ ಮಾಹಿತಿ ಯನ್ನು ದಾಖಲು ಮಾಡಿಕೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ವರುಣಾ ಪೊಲೀಸ್ ಠಾಣೆಗೆ ಚೇತನ್ ಸಬ್‌ಇನ್ಸ್‌ಪೆಕ್ಟರ್



ಕೊಳ್ಳೇಗಾಲ, ಜ.17– ಪಟ್ಟಣ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಚೇತನ್ ಅವರನ್ನು ಮೈಸೂರು ತಾಲೂಕಿನ ವರುಣಾ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಕಳೆದ ಎರಡು ವರ್ಷಗಳಿಂದ ಪಟ್ಟಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರನ್ನು ವರ್ಗಾವಣೆ ಮಾಡಿ ಇವರ ಸ್ಥಾನಕ್ಕೆ ಹುಲ್ಲಹಳ್ಳಿ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಬಿ.ಕೆ.ಮಹೇಶ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಜ. 20ರಂದು ನಗರದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ

ಚಾಮರಾಜನಗರ, ಜ.17– ಜಿಲ್ಲಾಡಳಿತ, ಜಿಪಂ ಮತ್ತು ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಜ.20ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ನಂಜನಗೂಡು, ಮೈಸೂರು ಹಾಗೂ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಮಾರುಕಟ್ಟೆ ಸೇವೆಗಳು, ಹಣಕಾಸು, ಇನ್ಶೂರೆನ್ಸ್, ಕೈಗಾರಿಕಾ, ಬ್ಯಾಂಕಿಂಗ್ ಮತ್ತು ಆಸ್ಪತ್ರೆ ಸೇವೆಗಳು ಹಾಗೂ ಇತರೆ ಎಲ್ಲಾ ರೀತಿಯ ಸೇವೆಗಳ ಸುಮಾರು 25ಕ್ಕೂ ಹೆಚ್ಚಿನ ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ.

ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ ಹಾಗೂ ಡಿಪ್ಲೊಮಾ, ನರ್ಸಿಂಗ್, ಜಿ.ಡಿ.ಎ ಮತ್ತು ಎಲ್ಲಾ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯುಳ್ಳ 18 ರಿಂದ 35 ವರ್ಷ ವಯೋಮಿತಿಯೊಳಗಿನ ಪುರುಷ ಮತ್ತು ಮಹಿಳಾ ನಿರುದ್ಯೋಗಿಗಳು ಜಿಲ್ಲಾ ಮಟ್ಟದ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರಗಳನ್ನೊಳಗೊಂಡ ಕನಿಷ್ಠ 10 ಪ್ರತಿಗಳೊಂದಿಗೆ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಸಂದರ್ಶನಕ್ಕೆ ಹಾಜರಾಗುವ ಮೊದಲು ನೊಂದಣಿ ಕೌಂಟರ್‌ನಲ್ಲಿ ಕಡ್ಡಾಯ ವಾಗಿ ನೊಂದಣಿಯಾಗಬೇಕು. ಮಾಹಿತಿಗಾಗಿ ದೂ.ಸಂ 08226–295080, ಮೊ.ಸಂ 7892190137, 8884865299, 9900677922 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ರೈಲಿಗೆ ತಲೆಕೊಟ್ಟು ಯುವಕ ಆತ್ಮಹತ್ಯೆ



ಚಾಮರಾಜನಗರ, ಜ.17– ಚಲಿಸುತ್ತಿದ್ದ ರೈಲಿಗೆ ಯುವಕನೊಬ್ಬ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬೇಡರಪುರದ ಬಳಿ ಮಂಗಳವಾರ ಬೆಳಗ್ಗೆ ನಡೆದಿದೆ.

ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ದಾಸನೂರು ಗ್ರಾಮದ ರವಿಕಿರಣ್ (27) ಆತ್ಮಹತ್ಯೆ ಮಾಡಿಕೊಂಡ ಯುವಕ. ಈತ ರೈಲು ಹಳಿಯ ಬಳಿಯೇ ಬೈಕ್ ನಿಲ್ಲಿಸಿ, ರೈಲು ಬರುವುದನ್ನೇ ಕಾದು ಸಾವಿಗೆ ಶರಣಾಗಿದ್ದಾನೆ ಎಂದು ಹೇಳಲಾಗಿದ್ದು, ಈತನ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ನಂಜನಗೂಡಿನ ರೈಲ್ವೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತದೇಹವನ್ನು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಒಪ್ಪಿಸಲಾಯಿತು.

ವಾಹನ ಸಹಿತ ಮರ ಮುಟ್ಟುಗೋಲು; ಮೇಲ್ಮನವಿಗೆ ಅವಕಾಶ

ಮೈಸೂರು, ಜ.17– ವಾಹನ ಸಹಿತ ಮರ ಮುಟ್ಟುಗೋಲು ಹಾಕಿಕೊಂಡಿರುವ ಸಂಬಂಧ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಮಲ್ಲನ ಮೂಲೆ ಮಠದ ರಾಂಪುರ ಚಾನಲ್ ಏರಿಯಲ್ಲಿ ಆಲದ ಜಾತಿಯ ಮರಗಳನ್ನು ಕಡಿದು ಏಳು ತುಂಡುಗಳನ್ನಾಗಿ ಮಾಡಿ 2017ರ ಮೇ 23ರಂದು ಈಚರ್(ಕೆಎಲ್–03, ಕೆ–5273) ವಾಹನದಲ್ಲಿ ಸಾಗಿಸುವ ಸಂದರ್ಭದಲ್ಲಿ ಮಾದನಹಳ್ಳಿ ಗ್ರಾಮದ ಬಳಿ ಅರಣ್ಯ ಅಧಿಕಾರಿಗಳು ತಪಾಸಣೆ ನಡೆಸಿದ್ದರು. ಆ ವೇಳೆ ಯಾವುದೇ ರಹದಾರಿ ಇಲ್ಲದೆ ದಾಖಲೆ ಸಲ್ಲಿಸದ ಕಾರಣ ಆರೋಪಿಗಳಾದ ಅಕ್ಬರ್ ಮತ್ತು ಡಿ.ಹ್ಯಾರಿಯನ್ನು ಬಂಧಿಸಿ, ಪ್ರಕರಣ ದಾಖಲಿಸಲಾಗಿತ್ತು.

ನಂತರ ನ್ಯಾಯಾಲಯದಲ್ಲಿ ವಿಚಾರಣೆಗೆ ವಾಹನ ಮಾಲೀಕ ನಂಜನಗೂಡಿನ ಜಬೀವುಲ್ಲಾ ಗೈರಾಗಿದ್ದರು. ಅರಣ್ಯ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದ ವಸ್ತುಗಳನ್ನು ಖಾಸಗಿ ಸ್ವತ್ತು ಎಂದು ಸಾಬೀತುಪಡಿಸುವಲ್ಲಿ ವಿಫಲವಾಗಿದ್ದರು. ಹಾಗಾಗಿ ಸ್ವತ್ತಿನ ಮಾಲೀಕತ್ವವು ಸರ್ಕಾರಕ್ಕೆ ಸೇರಿದ್ದೆಂದು ಈಚರ್ ವಾಹನ ಹಾಗೂ 13 ಆಲದ ತುಂಡುಗಳು (3.814 ಘನ ಮೀಟರ್) ಮತ್ತು ಅಂದಾಜು 2 ಟನ್ ಸೌದೆಯನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಂಡು ಕಳೆದ ಡಿಸೆಂಬರ್ 31 ರಂದು ಆದೇಶ ಹೊರಡಿಸಲಾಗಿದೆ. ಈ ಸಂಬಂಧ ಮೇಲ್ಮನವಿ ಸಲ್ಲಿಸಲು ಆದೇಶದ ದಿನದಿಂದ 30 ದಿನಗಳ ಕಾಲಾವಕಾಶವಿದ್ದು, ತಪ್ಪಿದ್ದಲ್ಲಿ ಇದೇ ಅಂತಿಮ ಆದೇಶವಾಗಿ ಊರ್ಜಿತಗೊಳ್ಳುತ್ತದೆ ಎಂದು ಮೈಸೂರು ವಿಭಾಗದ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಕಮಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ರಾಜ್ಯ ಬಿಜೆಪಿ ನಿರ್ಧಾರ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಒಂದಷ್ಟು ಮಾಹಿತಿಯನ್ನು ದೆಹಲಿ ನಾಯಕರು ಪಡೆದುಕೊಂಡಿದ್ದಾರೆ. ಹಳೆ ಮೈಸೂರು, ಉತ್ತರ ಕರ್ನಾಟಕ, ಕರಾವಳಿ ಭಾಗದ ಕೆಲ ಮಠಾಧಿಪತಿಗಳ ಜತೆ ಈಗಾಗಲೇ ಚರ್ಚೆ ಮಾಡಿದ್ದು, ಅದರಲ್ಲಿ ಕೆಲವರು ಕಣಕ್ಕಿಳಿಯಲು ಮುಂದಾಗಿದ್ದಾರೆ ಎಂಬ ಮಾಹಿತಿಯನ್ನು ರಾಜ್ಯ ನಾಯಕರು ವರಿಷ್ಠರಿಗೆ ನೀಡಿದ್ದಾರೆ. ಮಠಾಧಿಪತಿಗಳನ್ನು ಕಣಕ್ಕಿಳಿಸಿದರೆ ಚುನಾವಣೆಯಲ್ಲಿ ವಿವಿಧ ಜಾತಿಯ ಮತಗಳು ಕಮಲ ಪಾಳಯಕ್ಕೆ ದಕ್ಕುವುದು ಖಚಿತ ಎಂಬುದು ಬಿಜೆಪಿ ವರಿಷ್ಠರ ಲೆಕ್ಕಾಚಾರ. ಲಿಂಗಾಯತ, ದಲಿತ ಸೇರಿದಂತೆ ಹಲವು ಜಾತಿ, ಧರ್ಮಗಳ ಮಠಾಧಿಪತಿಗಳನ್ನು ಭೇಟಿ ಮಾಡಿ, ಅವರ ಮನವೊಲಿಸಿ ಎಂದು ತಿಳಿಸಿದ್ದಾರೆ.

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಹಲವು ಮಂದಿ ಮಠಾಧಿಪತಿಗಳಿಗೆ ಆದ್ಯತೆ ನೀಡಿದ ಪರಿಣಾಮವಾಗಿ ಬಿಜೆಪಿಯ ಭರ್ಜರಿ ಗೆಲುವಿಗೆ ಅದು ಸಹಕಾರಿಯಾಯಿತು. ಕರ್ನಾಟಕದಲ್ಲೂ ಇಂತಹ ಸೂತ್ರವನ್ನನುಸರಿಸಿಕೊಂಡರೆ ಬಿಜೆಪಿಯ ಶಕ್ತಿ ಸಹಜವಾಗಿ ಹೆಚ್ಚುತ್ತದೆ ಎಂಬುದು ಬಿಜೆಪಿ ಯೋಜನೆ. ಸದ್ಯಕ್ಕೆ ಕರ್ನಾಟಕದಲ್ಲಿ ಪಂಚಮಸಾಲಿ ಲಿಂಗಾಯತರ ಮೀಸಲಾತಿ ಬೇಡಿಕೆ ವಿವಾದ ತಾರಕಕ್ಕೇರಿದ್ದು,ಅವರ ಬೇಡಿಕೆಯನ್ನು ಈಡೇರಿಸದಿದ್ದರೆ ಇಪ್ಪತ್ತೈದು ಕ್ಷೇತ್ರಗಳಲ್ಲಿ ಬಿಜೆಪಿಗೆ ಹೊಡೆತ ಬೀಳುವುದು ಎಂಬ ಮಾಹಿತಿ ವರಿಷ್ಠರಿಗೆ ತಲುಪಿದೆ. ಲಿಂಗಾಯತ ಮತದಾರರ ಮೇಲೆ ವ್ಯತಿರಿಕ್ತ ಪರಿಣಾಮವಾಗುವುದರಿಂದ ಈ ಕೊರತೆಯನ್ನು ಸರಿದೂಗಿಸಿಕೊಳ್ಳಲು ಚುನಾವಣಾ ಕಣಕ್ಕಿಳಿಯುವಂತೆ ಹಲವು ಲಿಂಗಾಯತ ಮಠಾಧಿಪತಿಗಳನ್ನು ಕೋರಲಾಗಿದೆ ಎಂಬುದು ಈ ಮೂಲಗಳ ವಿವರ. ದಲಿತ ಮತಗಳನ್ನು ಸೇರಿದಂತೆ ಹಲವು ಜಾತಿ,ಧರ್ಮಗಳ ಮಠಾಧಿಪತಿಗಳನ್ನು ಕಣಕ್ಕಿಳಿಸುವ ಮೂಲಕ ಪಕ್ಷ ತನ್ನ ಶಕ್ತಿಯನ್ನು ವೃದ್ಧಿಸಿಕೊಳ್ಳಬಹುದು ಎಂಬುದು ಬಿಜೆಪಿ ವರಿಷ್ಠರ ಯೋಚನೆ.

ಕರ್ನಾಟಕದಲ್ಲಿ ಮರಳಿ ಅಧಿಕಾರ ಹಿಡಿಯಲು ಶತಾಯ ಗತಾಯ ಪ್ರಯತ್ನ ನಡೆಸಿರುವ ಬಿಜೆಪಿ ವರಿಷ್ಠರು ಮಠಾಧಿಪತಿಗಳನ್ನು ಕಣಕ್ಕಿಳಿಸಲು ಬಯಸಿರುವ ಬೆಳವಣಿಗೆ ರಾಜಕೀಯ ವಲಯಗಳಲ್ಲಿ ಸಂಚಲನವುಂಟು ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಚರ್ಚೆ

ನಿಮಿಷಗಳ ಕಾಲ ಚರ್ಚೆ ಮಾಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂಬ ಮಾಹಿತಿ ಎಲ್ಲೆಡೆ ಹರಿದಾಡುತ್ತಿರುವ ಬೆನ್ನಲ್ಲೇ ಪ್ರಧಾನಿಯವರು ಬಿಡುವಿಲ್ಲದ ಸಮಯದಲ್ಲೂ ಯಡಿಯೂರಪ್ಪ ಅವರನ್ನು ಕರೆಸಿಕೊಂಡು ಸಮಾಲೋಚನೆ ಮಾಡುವುದರ ಮೂಲಕ ಪಕ್ಷ ಅವರನ್ನು ಕಡೆಗಣಿಸಿಲ್ಲ ಎಂಬ ಸಂದೇಶವನ್ನು ನೀಡಿದ್ದಾರೆ.

ವಿಧಾನಸಭಾ ಚುನಾವಣೆಗೆ ಇನ್ನು ಅಲ್ಪಸಮಯ ಉಳಿದಿದ್ದು, ಈ ಸಂದರ್ಭದಲ್ಲಿ ಪಕ್ಷ ಸಂಘಟನೆ ಜೊತೆಗೆ ಮತದಾರರನ್ನು ಸೆಳೆಯಲು ವರ್ಚಸ್ವಿ ನಾಯಕರೊಬ್ಬರನ್ನು ಮುಂಚೂಣಿಗೆ ತರಲು ರಾಷ್ಟ್ರೀಯ ನಾಯಕರು ನಿರ್ಧರಿಸಿದ್ದಾರೆ. ರಾಜ್ಯಾಧ್ಯಕ್ಷರ ಬದಲಾವಣೆ ಯಾವುದೇ ಕ್ಷಣದಲ್ಲಾಗಲಿದೆ. ಈಗಾಗಲೇ ವರಿಷ್ಠರಿಗೆ ಎರಡು ಮೂರು ಹೆಸರುಗಳನ್ನು ಮುಂದಿಟ್ಟುಕೊಂಡಿದ್ದಾರೆ. ಅದರಲ್ಲಿ ಯಾರಿಗೆ ಪಟ್ಟ ನೀಡಿದರೆ, ಪಕ್ಷಕ್ಕೆ ಲಾಭ ಎಂಬುದರ ಬಗ್ಗೆ ಯಡಿಯೂರಪ್ಪ ಅವರಿಂದ ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ.

ಅಷ್ಟೇ ಅಲ್ಲ ಸರ್ಕಾರದಲ್ಲೂ ಕೆಲವು ಮಾರ್ಪಾಟು ಮಾಡಲು ತೀರ್ಮಾನಿಸಿದ್ದಾರೆ. ಆ ಬಗ್ಗೆಯು ಸಲಹೆ ಪಡೆದಿದ್ದಾರೆ. ಚುನಾವಣಾ ಸಿದ್ಧತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಪ್ರಧಾನಿಯವರು ಯಡಿಯೂರಪ್ಪ ಅವರ ಬಳಿ ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.

ಇದೇ ಸಮಯದಲ್ಲಿ ಯಡಿಯೂರಪ್ಪನವರು ಶಿವಮೊಗ್ಗದಲ್ಲಿನ ಹೊಸ ವಿಮಾನ ನಿಲ್ದಾಣ ಉದ್ಘಾಟನೆಗೆ ಪ್ರಧಾನಿಯವರನ್ನು ಆಹ್ವಾನಿಸಿದ್ದಾರೆ. ನೀರಾವರಿ ನಿಗಮ ಕೇಂದ್ರ ಕಚೇರಿ ದಾವಣಗೆರೆಗೆ ಸ್ಥಳಾಂತರ ಬೆಂಗಳೂರು, ಜ.17 (ಕೆಎಂಶಿ)–ಕರ್ನಾಟಕ ನೀರಾವರಿ ನಿಗಮದ ಕೇಂದ್ರ ಕಚೇರಿಯನ್ನು ರಾಜಧಾನಿಯಿಂದ ದಾವಣಗೆರೆ ಕೇಂದ್ರ ಸ್ಥಾನಕ್ಕೆ ಸ್ಥಳಾಂತರಿಸಲು ಸರ್ಕಾರ ಆದೇಶ ಹೊರಡಿಸಿದೆ. ನಿಗಮದಡಿ ತುಂಗ ಮತ್ತು ಭದ್ರ ಮೇಲ್ದಂಡೆ ಯೋಜನೆಗಳು, ತುಂಗಭದ್ರ ಆಣೆಕಟ್ಟು, ಕಳಸಬಂಡೂರಿ ಯೋಜನೆ ಘಟ್ಟಪ್ರಭಾ, ಮಲಪ್ರಭಾ ಹಾಗೂ ಕಾರಂಜ ಯೋಜನೆಗಳು ಅಲ್ಲದೆ ಇತರೆ ಏತ ನೀರಾವರಿ ಯೋಜನೆಗಳು ಇದರ ವ್ಯಾಪ್ತಿಯಲ್ಲಿ ಬರಲಿವೆ. ರಾಜ್ಯ ಸರ್ಕಾರ ಒಂಭತ್ತು ಪ್ರಮುಖ ಸರ್ಕಾರಿ ಕಚೇರಿ ಮತ್ತು ನಿಗಮಗಳನ್ನು ಕೇಂದ್ರ ಸ್ಥಾನದಿಂದ ಮಧ್ಯ ಹಾಗೂ ಉತ್ತರ ಕರ್ನಾಟಕ ಭಾಗಕ್ಕೆ ಸ್ಥಳಾಂತರಿಸಲು ತೀರ್ಮಾನಿಸಿದೆ. ಇದರ ಮೊದಲ ಭಾಗವಾಗಿ ಕರ್ನಾಟಕ ನೀರಾವರಿ ನಿಗಮಗಳನ್ನು ದಾವಣಗೆರೆಗೆ ಸ್ಥಳಾಂತರಿಸುವುದರಿಂದ ಯೋಜನೆಗಳು ಮತ್ತಷ್ಟು ಪ್ರಗತಿಗೆ ಸಹಕಾರಿಯಾಗಲಿದೆ ಎಂದು ಅಂದಾಜಿಸಿದೆ.

ಮೂವರು ಸಿಐಡಿ ವಶಕ್ಕೆ

ಸರ್ಕಾರಿ ಅಭಿಯೋಜಕರ ಮೂಲಕ ಮೈಸೂರಿನ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಚಾರಣೆಗಾಗಿ ಆರೋಪಿಗಳನ್ನು ತಮ್ಮ ವಶಕ್ಕೆ ನೀಡುವಂತೆ ಮನವಿ ಮಾಡಿದ್ದರು. ಆ ವೇಳೆ ಮೈಸೂರು ಕೇಂದ್ರ ಕಾರಾಗೃಹದಿಂದ ಸ್ಯಾಂಟ್ರೋ ರವಿ ಹಾಗೂ ಮತ್ತಿಬ್ಬರು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸ ಲಾಗಿತ್ತು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶ ಗುರುರಾಜ್ ಅವರು, ಜನವರಿ 30ರವರೆಗೆ ಆರೋಪಿಗಳನ್ನು ಸಿಐಡಿ ಪೊಲೀಸರ ವಶಕ್ಕೆ ಒಪ್ಪಿಸಿ, ಆದೇಶಿಸಿದರು. ನಂತರ ಆರೋಪಿಗಳನ್ನು ವಶಕ್ಕೆ ಪಡೆದಿರುವ ಸಿಐಡಿ ಡಿವೈಎಸ್ಪಿ ನರಸಿಂಹ ಮೂರ್ತಿ ಹಾಗೂ ತನಿಖಾ ತಂಡದ ಅಧಿಕಾರಿಗಳು, ಪೊಲೀಸ್ ಭದ್ರತೆಯಲ್ಲಿ ಕೆ.ಆರ್.ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ಸಂಜೆ ಬೆಂಗಳೂರಿಗೆ ಕರೆದೊಯ್ದರು ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನ ವಿಧಾನಸೌಧದ ಹಿಂಭಾಗ ಏಟ್ರಿಯಾ ಹೋಟೆಲ್ ಬಳಿ ಇರುವ ಸಿಐಡಿ ಕಚೇರಿಯ ಆರ್ಥಿಕ ಅಪರಾಧ ವಿಭಾಗದಲ್ಲಿ ಆರೋಪಿಗಳನ್ನು ವಿಚಾರಣೆಗೊಳಪಡಿಸುವ ಅಧಿಕಾರಿಗಳು, ಅಗತ್ಯ ಬಿದ್ದರೆ ಕೃತ್ಯ ನಡೆದಿದೆ ಎನ್ನಲಾದ ಸ್ಥಳ ಮಹಜರು ನಡೆಸುವ ಸಲುವಾಗಿ ಸ್ಯಾಂಟ್ರೋ ರವಿ ಮತ್ತು ಇತರರನ್ನು ಮೈಸೂರಿಗೆ ಕರೆತರುವ ಸಾಧ್ಯತೆಗಳಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ನಡುವೆ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಆದೇಶದಂತೆ ಸ್ಯಾಂಟ್ರೋ ರವಿ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿದ್ದು, ಆ ಸಂಬಂಧದ ದಾಖಲಾತಿಗಳನ್ನೊಳಗೊಂಡ ಕಡತಗಳು, ವಶಪಡಿಸಿಕೊಂಡಿರುವ ಸಾಕ್ಷ್ಯಗಳನ್ನೂ ತನಿಖಾಧಿಕಾರಿಗಳಿಗೆ ಒಪ್ಪಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ತಿಳಿಸಿದ್ದಾರೆ.

ಸಂತ್ರಸ್ತೆಯಿಂದ ಮತ್ತೊಂದು ಪ್ರಕರಣ ದಾಖಲು

ದೇವರಾಜ ಠಾಣೆಗೆ ಲಿಖಿತ ದೂರು ನೀಡಿದ್ದಾರೆ. ಚೆಕ್‌ಬುಕ್‌ನಲ್ಲಿದ್ದ ಸಹಿ ಮಾಡದ ಮತ್ತೆರಡು ಚೆಕ್‌ಲೀಫ್‌ಗಳನ್ನೂ ಹಾಗೆಯೇ ಇಟ್ಟುಕೊಂಡಿದ್ದಾರೆ. ಈ ಸಂಬಂಧ 2020ರ ಸೆಪ್ಟೆಂಬರ್ 24ರಂದು ದೂರು ನೀಡಿದ್ದೆ. ಆದರೆ ಚೆಕ್‌ಗಳನ್ನು ಬ್ಯಾಂಕಿಗೆ ಸಲ್ಲಿಸಿ ದುರುಪಯೋಗಪಡಿಸಿಕೊಂಡಿರುವ ಸ್ಯಾಂಟ್ರೋ ರವಿ ಮತ್ತು ಪ್ರಕಾಶ್ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ನನ್ನ ಪತಿ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ಮತ್ತು ಸಹಚರ ಹೆಚ್.ಪ್ರಕಾಶ್ ಚೆಕ್‌ಬುಕ್ ಕಳವು ಮಾಡಿ ಅದರಲ್ಲಿ ಸಹಿ ಮಾಡಿದ್ದ 4 ಚೆಕ್‌ಗಳಲ್ಲಿ ತಮ್ಮ ಹೆಸರು ಬರೆದುಕೊಂಡು ಬ್ಯಾಂಕಿಗೆ ಸಲ್ಲಿಸಿ, ಹಂತ ಹಂತವಾಗಿ 5 ಲಕ್ಷ, 10 ಲಕ್ಷ ರೂ. ಹಣ ಕೊಡಬೇಕೆಂದು ಆರೋಪಿಸಿ ನನ್ನ ವಿರುದ್ಧ ಈಗ ಚೆಕ್‌ಬೌನ್ಸ್ ಕೇಸ್ ದಾಖಲಿಸಿದ್ದಾರೆ ಎಂದು ಆಕೆ ದೂರಿನಲ್ಲಿ ಆರೋಪಿಸಿದ್ದಾರೆ. ನನ್ನ ಚೆಕ್‌ಗಳನ್ನು ಕಳವು ಮಾಡಿ ದುರುಪಯೋಗಪಡಿಸಿಕೊಂಡಿರುವ ಸ್ಯಾಂಟ್ರೋ ರವಿ ಮತ್ತು ಪ್ರಕಾಶ್ ವಿರುದ್ಧ ಪ್ರಕರಣ ದಾಖಲಿಸಬೇಕೆಂಬ ಆಕೆಯ ದೂರಿನನ್ವಯ ಜನವರಿ 16ರಂದು ದೇವರಾಜ ಠಾಣೆ ಪೊಲೀಸರು ಐಪಿಸಿ ಸೆಕ್ಷನ್ 465, 468, 506, 420, ರೆಡ್‌ವಿತ್ 34 ರೀತ್ಯಾ ಪ್ರಕರಣ (ಸಂಖ್ಯೆ 0005/2023) ದಾಖಲಿಸಿಕೊಂಡಿದ್ದಾರೆ. 2020ರ ಸೆಪ್ಟೆಂಬರ್ 22ರಂದು ಬೆಳಗ್ಗೆ 11.30 ಗಂಟೆ ವೇಳೆಗೆ ಸಯ್ಯಾಜಿರಾವ್ ರಸ್ತೆಯಲ್ಲಿ ಸ್ಕೂಟಿ ಸ್ಟ್ರೀಕ್ ಸ್ಕೂಟರ್ ನಿಲ್ಲಿಸಿ ದೇವರಾಜ ಮಾರುಕಟ್ಟೆಗೆ ಹೋಗಿ ಬರುವಷ್ಟರಲ್ಲಿ ಡಿಕ್ಕಿಯಲ್ಲಿರಿಸಿದ್ದ ಕೆನರಾ ಬ್ಯಾಂಕ್ ಚಾಮರಾಜ ಮೊಹಲ್ಲಾ ಶಾಖೆಯ ಪಾಸ್‌ಬುಕ್ ಹಾಗೂ ಚೆಕ್‌ಬುಕ್ ಕಳವಾಗಿವೆ. ಅದರಲ್ಲಿ 4 ಖಾಲಿ ಚೆಕ್ ಹಾಳೆಗಳಿಗೆ ಸಹಿ ಮಾಡಿದ್ದೇನೆ ಎಂದು ದೇವರಾಜ ಠಾಣೆಗೆ ದೂರು ನೀಡಿ ಪಡೆದಿರುವ ಸ್ವೀಕೃತಿ ಪ್ರತಿಯನ್ನು ಸಂತ್ರಸ್ತೆ ದೂರಿನಲ್ಲಿ ಸಲ್ಲಿಸಿದ್ದಾರೆ.

ಹಸಿದ ವಿದ್ಯಾರ್ಥಿನಿಯರಿಗೆ ಗುರುಗಳ 'ಸಂತೃಪ್ತಿ'

● ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಮಕ್ಕಳಿಗೆ ಹಸಿವು ನೀಗುವ ವಾತ್ಸಲ್ಯ

● ಪ್ರಾಂಶುಪಾಲ ಡಾ.ಡಿ.ರವಿ ಅವರ ಅಂತಃಕರಣಕ್ಕೆ ಸ್ಪಂದಿಸಿದ ಸಹೋದ್ಯೋಗಿಗಳು





ಮೈಸೂರು, ಜ.17(ಎಸ್‌ಬಿಡಿ)– ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ನಿನ್ನೆಯಿಂದ ಜಾರಿಯಲ್ಲಿರುವ ಮಾದರಿ 'ಸಂತೃಪ್ತಿ' ಯೋಜನೆ ಅಪಾರ ಪ್ರಶಂಸೆಗೆ ಭಾಜನವಾಗಿದೆ.

'ಸಂತೃಪ್ತಿ' ಶೈಕ್ಷಣಿಕ ಕಾರ್ಯಕ್ರಮವಲ್ಲವಾದರೂ ಅದಕ್ಕೆ ಪೂರಕವಾದ ಸತ್ಕಾರ್ಯ ಎನ್ನುವುದು ವಿಶೇಷ. ದೂರದ ಊರುಗಳಿಂದ ಬರುವ ವಿದ್ಯಾರ್ಥಿನಿಯರಿಗಾಗಿ ರೂಪಿತವಾಗಿರುವ ಕಾಲೇಜಿನ ಸ್ಥಳೀಯ ವ್ಯವಸ್ಥೆ. ಜ್ಞಾನದಾಹದಿಂದ ಬೆಳ್ಳಂಬೆಳಗ್ಗೆ ಕಾಲೇಜು ಸೇರುವ ವಿದ್ಯಾರ್ಥಿನಿಯರ ಆಸಕ್ತಿದಾಯಕ ಕಲಿಕೆಗೆ ಹಸಿವು ಅಡ್ಡಿಯಾಗಬಾರದೆಂಬ ಕಾಳಜಿಯ ಯೋಜನೆ.

ಹೌದು, ಶೈಕ್ಷಣಿಕ ಕೇಂದ್ರವಾಗಿರುವ ಮೈಸೂರಿಗೆ ದೂರದ ಊರುಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್, ಬಿಸಿಎಂ, ಸಮುದಾಯ ಅಥವಾ ಕಾಲೇಜು ಹಾಸ್ಟೆಲ್‌ಗಳಲ್ಲಿ ಸಾವಿರಾರು ಮಂದಿ ಆಶ್ರಯ ಪಡೆದಿದ್ದಾರೆ. ಆದರೆ ಯಾವುದೇ ಹಾಸ್ಟೆಲ್‌ನಲ್ಲೂ ಉಳಿಯದೆ ನಿತ್ಯ 70–80 ಕಿ.ಮೀ. ದೂರದಿಂದ ಓಡಾಡುವ ವಿದ್ಯಾರ್ಥಿಗಳಿಗೆ ಸಹಜವಾಗಿ ಹಲವು ಸಮಸ್ಯೆಗಳಿವೆ. ಅದರಲ್ಲೂ ಹಸಿವು ಸಹಿಸಿಕೊಳ್ಳುವುದು ಪ್ರಮುಖ ಸವಾಲು.

ಎಲ್ಲರೂ ಒಂದೇ ಕುಟುಂಬದವರು...

ಹಸಿವಿನ ಸಂಕಟದಿಂದ ಪಾರಾಗಲು ಉಚಿತ ಆಹಾರ ಪಡೆಯಲು ವಿದ್ಯಾರ್ಥಿನಿಯರು ಸಲೀಸಾಗಿ ಒಪ್ಪಲಿಲ್ಲ. ಬೆಳಗ್ಗೆ ಬೇಗ ಬರಬೇಕಿರುವುದರಿಂದ ಮನೆಯಲ್ಲಿ ಉಪಾಹಾರ ತಯಾರಿ ಸಾಧ್ಯವಾಗದು. ಇತ್ತ ನಿತ್ಯ 30–50 ರೂ. ವ್ಯಯಿಸಿ ಕ್ಯಾಂಟಿನ್‌ಗಳಲ್ಲಿ ಊಟ ಮಾಡುವುದೂ ಕಷ್ಟಸಾಧ್ಯ. ಹಾಗೆಂದ ಮಾತ್ರಕ್ಕೆ ನಾವ್ಯಾಕೆ ಉಚಿತ ಆಹಾರ ಪಡೆಯಬೇಕು. ಸಂಜೆ ಮನೆಗೆ ಹೋಗಿ ಊಟ ಮಾಡಿದರೆ ಆಯಿತು ಎಂಬ ಭಾವನೆಯಿಂದ ವಿದ್ಯಾರ್ಥಿನಿಯರು ಹಿಂದೇಟು ಹಾಕಿದರು. ಆಗ ಅವರೊಂದಿಗೆ ಸಮಾಲೋಚನೆ ನಡೆಸಿ ನಾವೆಲ್ಲಾ ಒಂದೇ ಕುಟುಂಬದವರು, ಇದು ನಮ್ಮ ಮನೆ ಎಂದು ಭಾವಿಸಿ ಊಟ ಮಾಡಿ, ಕಲಿಕೆ ಆಸಕ್ತಿಯನ್ನು ಹಸಿವು ನುಂಗುವುದು ಬೇಡ ಎಂದೆಲ್ಲಾ ಅವರಿಗೆ ಮನವರಿಕೆ ಮಾಡಿಕೊಡಬೇಕಾಯ್ತು.

-ಡಾ.ಡಿ.ರವಿ, ಪ್ರಾಂಶುಪಾಲ, ಮಹಾರಾಣಿ ವಿಜ್ಞಾನ ಕಾಲೇಜು

ಕೆಲ ವಿದ್ಯಾರ್ಥಿಗಳು ತೃಪ್ತಿಯಾಗಿ ಒಂದು ಹೊತ್ತು ಊಟ ಮಾಡಿದರೇ ಹೆಚ್ಚು. ಹೀಗೆ ಹಸಿವಿನಿಂದಲೇ ಕಲಿಯಬೇಕಾದ ವಿದ್ಯಾರ್ಥಿನಿಯರಿಗೆ 'ಸಂತೃಪ್ತಿ' ಯೋಜನೆಯಡಿ ಮಧ್ಯಾಹ್ನ ಊಟದ ವ್ಯವಸ್ಥೆ ಕಲ್ಪಿಸುವ ಮೂಲಕ ಮಹಾರಾಣಿ ವಿಜ್ಞಾನ ಕಾಲೇಜು ಗುರುವೃಂದ ಮಾದರಿಯಾಗಿದೆ.

ಮೈಸೂರು ಸುತ್ತಮುತ್ತಲಿನ ಗ್ರಾಮಗಳಿಂದ ಮಾತ್ರವಲ್ಲ ಹೊಳೆನರಸೀಪುರ, ಹೆಚ್.ಡಿ.ಕೋಟೆ, ಕೆ.ಆರ್.ಪೇಟೆ, ನಾಗಮಂಗಲ, ಕೊಳ್ಳೆಗಾಲ, ಚಾಮರಾಜನಗರ, ನಂಜನಗೂಡು, ಪಿರಿಯಾಪಟ್ಟಣ ಹೀಗೆ ದೂರದೂರುಗಳಿಂದ ನಿತ್ಯ ಕಾಲೇಜಿಗೆ ಬಂದು ಹೋಗುತ್ತಾರೆ. ವಿಜ್ಞಾನ ವಿದ್ಯಾರ್ಥಿನಿಯರಾದ ಕಾರಣ ಬೆಳಗ್ಗೆ 8 ಗಂಟೆಯಿಂದಲೇ ಲ್ಯಾಬ್ ತರಗತಿಗಳು ಆರಂಭವಾಗುತ್ತವೆ. ಈ ಸಮಯಕ್ಕೆ ಸರಿಯಾಗಿ ಕಾಲೇಜಿಗೆ ಬರಬೇಕೆಂದರೆ ಬೆಳಗ್ಗೆ 6 ಗಂಟೆ ಅಥವಾ ಅದಕ್ಕೂ ಮುನ್ನ ಊರು ಬಿಡಬೇಕು. ಅಷ್ಟೊತ್ತಿಗೆ ಉಪಾಹಾರ ತಯಾರಿಸುವುದು ಪೋಷಕರಿಗೂ ಸಾಧ್ಯವಾಗುವುದಿಲ್ಲ. ಹಾಗಂತ ಕಾಲೇಜಿಗೆ ತಡವಾಗಿ ಬಂದರೆ ಕಲಿಕೆಗೆ ತೊಂದರೆಯಾಗುತ್ತದೆ. ಕಾಲೇಜಿನಲ್ಲಿ ಕ್ಯಾಂಟಿನ್ ಇದ್ದರೂ ಉಪಾಹಾರಕ್ಕಾಗಿ ನಿತ್ಯ ಹಣ ವ್ಯಯಿಸುವುದು ಎಲ್ಲರಿಗೂ ಸಾಧ್ಯವಿಲ್ಲ. ಅಂತಹವರಿಗೆ 'ಸಂತೃಪ್ತಿ'ಯಾಗಿ ಮಧ್ಯಾಹ್ನ ಊಟ ಕಲ್ಪಿಸಿರುವುದು ಪ್ರಶಂಸನೀಯ.

ವ್ಯವಸ್ಥೆ ಹೀಗಿದೆ: ಮಧ್ಯಾಹ್ನದ ಊಟದ ಅಗತ್ಯವಿರುವ ವಿದ್ಯಾರ್ಥಿನಿಯರನ್ನು ಸಮಿತಿಯೊಂದರ ಮೂಲಕ ಗುರುತಿಸಿ, ಪಟ್ಟಿ ಮಾಡಲಾಗಿದೆ. ಅವರಿಗೆ ನಿತ್ಯ ಟೋಕನ್ ವಿತರಿಸಲಾಗುತ್ತದೆ. ಮಧ್ಯಾಹ್ನ ಕಾಲೇಜು ಆವರಣದಲ್ಲೇ ಇರುವ ಮೊಬೈಲ್ ಕ್ಯಾಂಟಿನ್‌ಗೆ ನೀಡಿ ಊಟ ಪಡೆಯಬಹುದು. ಅನ್ನಸಾಂಬಾರ್, ಬಾತು, ಪುಳಿಯೋಗರೆ, ವೆಜ್ ಪಲಾವ್ ಹೀಗೆ ಒಂದೊಂದು ದಿನ ಒಂದು ರೀತಿಯ ಆಹಾರವನ್ನು ವಿದ್ಯಾರ್ಥಿನಿಯರಿಗೆ ನೀಡಲಾಗುತ್ತದೆ. ಸದ್ಯ ನೂರಕ್ಕೂ ಹೆಚ್ಚು ವಿದ್ಯಾರ್ಥಿನಿಯರು 'ಸಂತೃಪ್ತಿ'ಯಾಗಿ ಊಟ ಮಾಡುತ್ತಿದ್ದಾರೆ.

ಪ್ರಾಂಶುಪಾಲರ ಚಿಂತನೆಗೆ ಸಹಕಾರ: ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಶಿಕ್ಷಣದ ಜೊತೆಗೆ ಅಗತ್ಯವಿದ್ದವರಿಗೆ ಉಚಿತ ದಾಸೋಹ ಕಲ್ಪಿಸಲು ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ ಅವರೇ ಪ್ರಮುಖ ಕಾರಣಕರ್ತರು. ಗ್ರಾಮೀಣ ಪ್ರದೇಶದಿಂದ ಅದರಲ್ಲೂ ದೂರದಿಂದ ಬರುವ ವಿದ್ಯಾರ್ಥಿನಿಯರಿಗೆ ಉಚಿತ ಊಟದ ವ್ಯವಸ್ಥೆ ಕಲ್ಪಿಸಬೇಕೆಂಬ ಅವರ ಚಿಂತನೆಗೆ ಪ್ರಾಧ್ಯಾಪಕರು ಕೈ ಜೋಡಿಸಿದ್ದಾರೆ. ರವಿ ಅವರು 'ಸಂತೃಪ್ತಿ' ಯೋಜನೆ ಬಗ್ಗೆ ಪ್ರಸ್ತಾಪಿಸಿ ತಾವೇ ಮೊದಲಿಗೆ ವಂತಿಕೆ ನೀಡಿದ್ದಾರೆ. ನಂತರದಲ್ಲಿ 30–40 ಮಂದಿ ಪ್ರಾಧ್ಯಾಪಕರೂ ತಮ್ಮ ವೇತನದಲ್ಲಿ ಒಂದಿಷ್ಟು ಹಣವನ್ನು ಈ ಸತ್ಕಾರ್ಯಕ್ಕೆ ಕೊಟ್ಟಿದ್ದಾರೆ. ಈ ಹಣವನ್ನು ಕ್ಯಾಂಟಿನ್‌ನವರಿಗೆ ನೀಡಲಾಗುತ್ತದೆ. ಇದರ ನಿರ್ವಹಣೆಗಾಗಿಯೇ ಸಮಿತಿ ರಚನೆ ಮಾಡಲಾಗಿದ್ದು, ಬೇರೆ ರೀತಿಯ ಮಾತುಗಳಿಗೆ ಆಸ್ಪದ ನೀಡದಂತೆ ನಿಗಾ ವಹಿಸಲಾಗಿದೆ. ಸದ್ಯ ಕಾಲೇಜಿನ ಗುರುವೃಂದವೇ 'ಸಂತೃಪ್ತಿ'ಗೆ ನೆರವಾಗಿದ್ದು, ಯಾವುದೇ ಸಂಘ–ಸಂಸ್ಥೆಯ ಸಹಕಾರ ಅಥವಾ ಸರ್ಕಾರದ ಒಂದು ರೂ. ಹಣವನ್ನೂ ಬಳಕೆ ಮಾಡುತ್ತಿಲ್ಲ.

ಎಲ್ಲರಿಗೂ ಹಸಿವಿನ ಅರಿವಿದೆ: 'ಸಂತೃಪ್ತಿ' ಸತ್ಕಾರ್ಯದ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ, ನಾನೂ ಮಹಾರಾಜ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಹಸಿವಿನ ಕಷ್ಟ ತಿಳಿದಿದ್ದೇನೆ ದೂರದ ಹಳ್ಳಿಗಳಿಂದ ವಿದ್ಯಾಭ್ಯಾಸಕ್ಕೆ ಬಂದವರಲ್ಲಿ ಬಹುತೇಕರಿಗೆ ಹಸಿವಿನ ಅರಿವಿದೆ ಹಾಗಾಗಿ ಬೆಳಗ್ಗೆ 8 ಗಂಟೆಗೆ ಕಾಲೇಜಿಗೆ ಬರುವ ವಿದ್ಯಾರ್ಥಿನಿಯರು ಹಸಿವಿನಿಂದ ಕಲಿಯಬಾರದು ಎಂಬ ಚಿಂತೆ ಕಾಡುತ್ತಿತ್ತು. ಈ ನಿಟ್ಟಿನಲ್ಲಿ ಏನಾದರೂ ಮಾಡಬೇಕೆಂದು ಚಿಂತನೆ ಮಾಡಿ, 'ಸಂತೃಪ್ತಿ' ಯೋಜನೆಗೆ ನಿರ್ಧರಿಸಲಾಯಿತು. ಗಂಭೀರ ಚಿಂತನೆಯಲ್ಲವಾದರೂ ಅನುಷ್ಠಾನವಾದ ಬಳಿಕ ಅದರ ಮಹತ್ವ ತಿಳಿಯಿತು. ಜ.16ರಿಂದ 'ಸಂತೃಪ್ತಿ' ಶುರುವಾಗಿದ್ದು, ಅನೇಕ ಸಹೋದ್ಯೋಗಿಗಳು ಸ್ವಯಂ ಪ್ರೇರಣೆಯಿಂದ ಹಣ ನೀಡಿದ್ದಾರೆ. ಸಂಘ–ಸಂಸ್ಥೆಗಳ ನೆರವಾಗಲೀ ಸರ್ಕಾರದ ಅನುದಾನವಾಗಲೀ ಬಳಸಿಲ್ಲ. ಈ ಯೋಜನೆಯನ್ನು ನಿರಂತರವಾಗಿ ಮುಂದುವರೆಸುವ ಆಶಯವಿದೆ ಎಂದು ತಿಳಿಸಿದರು.

ಆಕರ್ಷಕ ಕಾವಾ ಕಹಳೆಯ ಜಾಥಾ



ಮೈಸೂರು, ಜ.17(ಎಂಕೆ)– ವಿನೂತನ ಕಲಾಕೃತಿಗಳು ಅನಾವರಣಗೊಳ್ಳುವ ಕಾವಾ ಮೇಳ–2023ದ ಅಂಗವಾಗಿ ಕಾವಾ ಕಹಳೆಯ ಜಾಥಾ ನಡೆಸಲಾಯಿತು.

ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಅತ್ಯಾಕರ್ಷಕ ವೇಷಭೂಷಣ ತೊಟ್ಟು, ಕಾವಾ ಮೇಳದ ನಾಮ ಫಲಕಗಳನ್ನು ಹಿಡಿದು ಜಮಾಯಿಸಿದ ಕಾವಾ ವಿದ್ಯಾರ್ಥಿಗಳ 'ಕಲೆಯ ನಡೆ ಜನರೆಡೆಗೆ ಜನರ ನಡೆ ಕಾವಾ ಕಡೆ' ಎಂಬ ಕಾವಾ ಕಹಳೆಯ ಜಾಥಾಗೆ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು. ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭಗೊಂಡ ಕಾವಾ ಕಹಳೆಯ ಜಾಥಾ ಕೆ.ಆರ್.ವೃತ್ತ, ಚಿಕ್ಕಗಡಿಯಾರ, ಸಯ್ಯಾಜಿರಾವ್ ರಸ್ತೆ ಮೂಲಕ ಆಯುರ್ವೇದಿಕ್ ವೃತ್ತದಿಂದ ವಾಪಸ್ ಸಯ್ಯಾಜಿರಾವ್ ರಸ್ತೆ ಮೂಲಕ ಗಾಂಧಿವೃತ್ತ, ದೊಡ್ಡಗಡಿಯಾರದಿಂದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ ಸಾಗಿ ಮುಕ್ತಾಯಗೊಂಡಿತು. ಮಾರ್ಗದುದ್ದಕ್ಕೂ ಹಾಡು–ನೃತ್ಯದ ಮೂಲಕ ನೋಡುಗರ ಗಮನ ಸೆಳೆದ ಕಾವಾ ವಿದ್ಯಾರ್ಥಿಗಳು ಕಾವಾ ಮೇಳದ ಮಾಹಿತಿಯುಳ್ಳ ಕರಪತ್ರಗಳನ್ನು ವಿತರಣೆ ಮಾಡಿದರು.

ಜ.20ರಿಂದ ಕಾವಾ ಮೇಳ: ಸಿದ್ಧಾರ್ಥ ನಗರದ ಜರ್ಮನ್ ಪ್ರೆಸ್ ಆವರಣದಲಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು(ಕಾವಾ) ಆವರಣದಲ್ಲಿ ಜ.20 ರಿಂದ 22ರವರೆಗೆ ಕಾವಾ ಮೇಳ ನಡೆಯಲಿದ್ದು, ಚಿತ್ರಕಲೆ, ಶಿಲ್ಪಕಲೆ, ಮುದ್ರಣ ಕಲೆ, ಅನ್ವಯ ಕಲೆ, ಛಾಯಾಚಿತ್ರ ಸೇರಿದಂತೆ ಹತ್ತು–ಹಲವು ಕಲೆಯ ವೈವಿದ್ಯತೆಯ ಅನಾವರಣಗೊಳ್ಳಲಿದೆ. ಕಾವಾ ಕಾಲೇಜು ಡೀನ್ ದೇವರಾಜ್, ಪ್ರಾಧ್ಯಾಪಕರಾದ ಚಂದ್ರಶೇಖರ್, ವೀರಣ್ಣ ಅರ್ಕಸಾಲಿ, ಬಿರಾದರ್ ಮತ್ತಿತರರಿದ್ದರು.

ಮೈಸೂರು ವಿವಿ ಅತಿಥಿ ಉಪನ್ಯಾಸಕರ ಪರಿಷ್ಕೃತ ವೇತನ ಶೀಘ್ರ ಜಾರಿಗೊಳಿಸಿ

ಉನ್ನತ ಶಿಕ್ಷಣ ಸಚಿವರಲ್ಲಿ ಎಂಎಲ್‌ಸಿ ಮರಿತಿಬ್ಬೇಗೌಡ ಆಗ್ರಹ ; ತಪ್ಪಿದಲ್ಲಿ ಹೋರಾಟದ ಎಚ್ಚರಿಕೆ



ಮೈಸೂರು,ಜ.17(ಪಿಎಂ)– ಸಿಂಡಿಕೇಟ್ ಸಭೆಯ ನಿರ್ಣಯದಂತೆ ಮೈಸೂರು ವಿವಿ ಅತಿಥಿ ಉಪನ್ಯಾಸಕರಿಗೆ ಪರಿಷ್ಕೃತ ವೇತನ ಜಾರಿಗೊಳಿಸಲು ಉನ್ನತ ಶಿಕ್ಷಣ ಸಚಿವರು ಶೀಘ್ರ ಕ್ರಮ ವಹಿಸಬೇಕು. ಇಲ್ಲವಾದರೆ ಅತಿಥಿ ಉಪನ್ಯಾಸಕರ ಹೋರಾಟಕ್ಕೆ ಬೆಂಬಲವಾಗಿ ನಿಲ್ಲುತ್ತೇನೆ. ಅವರ ಹೋರಾಟದಲ್ಲಿ ಭಾಗವಹಿಸುತ್ತೇನೆ ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಮೈಸೂರು ವಿವಿ ಹೊರತುಪಡಿಸಿ ರಾಜ್ಯದ ಎಲ್ಲಾ ವಿವಿಗಳಲ್ಲಿ ಯುಜಿಸಿ ನಿಯಮದಂತೆ ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸಲಾಗಿದೆ. ಮೈಸೂರು ವಿವಿಯಲ್ಲಿಯೂ ವೇತನ ಪರಿಷ್ಕರಿಸಿ, ತದನಂತರ ಹಿಂಪಡೆದು ಅತಿಥಿ ಉಪನ್ಯಾಸಕರಿಗೆ ಅನ್ಯಾಯ ಮಾಡಲಾಗಿದೆ. ಅತಿಥಿ ಉಪನ್ಯಾಸಕರಿಗೆ ಮೈಸೂರು ವಿವಿ ಆಂತರಿಕ ಸಂಪನ್ಮೂಲದಿಂದ ವೇತನ ನೀಡಲಾಗುತ್ತದೆ. ಇದಕ್ಕೆ ಆರ್ಥಿಕ ಇಲಾಖೆ ಆಕ್ಷೇಪ ವ್ಯಕ್ತಪಡಿಸಲು ಬರುವುದಿಲ್ಲ. ಬೇರೆ ವಿವಿಗಳ ಅತಿಥಿ ಉಪನ್ಯಾಸಕರ ಪರಿಷ್ಕೃತ ವೇತನಕ್ಕೆ ಇಲ್ಲದ ಆರ್ಥಿಕ ಇಲಾಖೆ ಆಕ್ಷೇಪ, ಮೈಸೂರು ವಿವಿಗೆ ಮಾತ್ರ ಏಕೆ ಎಂದು ಪ್ರಶ್ನಿಸಿದರು.

ಬೆಳಗಾವಿ ಅಧಿವೇಶನದ ಪರಿಷತ್ ಕಲಾಪದಲ್ಲಿ ಸದಸ್ಯರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಉನ್ನತ ಶಿಕ್ಷಣ ಸಚಿವರು, ಅಧಿವೇಶನ ಮುಗಿದ ಕೂಡಲೇ ಮೈಸೂರು ವಿವಿ ಅತಿಥಿ ಉಪನ್ಯಾಸಕರ ಸಮಸ್ಯೆ ಬಗೆಹರಿಸುವುದಾಗಿ ಹೇಳಿದ್ದರು. ಆದರೆ ಇಷ್ಟು ದಿನಗಳಾದರೂ ಬಗೆಹರಿಸಿಲ್ಲ. ಸಚಿವರ ಇಂತಹ ನಡವಳಿಕೆಯನ್ನು ಖಂಡಿಸುತ್ತೇನೆ. ಕೂಡಲೇ ಅವರು ಆರ್ಥಿಕ ಇಲಾಖೆ ಅಧಿಕಾರಿಗಳು ಮತ್ತು ವಿವಿ ಅಧಿಕಾರಿ ಸಭೆ ನಡೆಸಿ, ಯುಜಿಸಿ ನಿಯಮದಂತೆ ಅತಿಥಿ ಉಪನ್ಯಾಸಕರಿಗೆ ಪರಿಷ್ಕೃತ ವೇತನ ನೀಡಲು ಕ್ರಮ ವಹಿಸಬೇಕು.

-ಮರಿತಿಬ್ಬೇಗೌಡ

ವಿವಿಯ ಸಿಂಡಿಕೇಟ್, ಹಣಕಾಸು ಸಮಿತಿ ಸಮ್ಮತಿ ಇಲ್ಲದೆ, ಹಿಂದಿನ ಕುಲಪತಿಗಳು ತಮ್ಮ ಅಧಿಕಾರಾವಧಿಯ ಕೊನೆ ದಿನಗಳಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿದ್ದ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ವೇತನವನ್ನು 50 ಸಾವಿರ ರೂ.ನಿಂದ 60 ಸಾವಿರ ರೂ.ಗೆ ಪರಿಷ್ಕರಿಸಿದ್ದಾರೆ. ಇದಕ್ಕೆ ಆರ್ಥಿಕ ಇಲಾಖೆ ಆಕ್ಷೇಪ ವ್ಯಕ್ತಪಡಿಸಿ, ಸುಮ್ಮನಾಗಿದೆ ಎಂದು ದೂರಿದರು.

ಸರ್ಕಾರಕ್ಕೆ ವಾರ್ಷಿಕ 100 ಕೋಟಿ ಉಳಿತಾಯ: 666 ಖಾಯಂ ಬೋಧಕ ಹುದ್ದೆಗಳನ್ನು ಮೈಸೂರು ವಿವಿಯಲ್ಲಿ ಸೃಜಿಸಲಾಗಿದೆ. ಅದರಲ್ಲಿ 406 ಹುದ್ದೆಗಳು ದೀರ್ಘ ಕಾಲದಿಂದಲೂ ಖಾಲಿ ಉಳಿದಿವೆ. ಇವುಗಳ ಭರ್ತಿಗೆ ಸರ್ಕಾರ ಕ್ರಮ ವಹಿಸಿಲ್ಲ. ಅಲ್ಲದೆ, ಕಳೆದ 12 ವರ್ಷಗಳಿಂದ 77 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಹೈದರಾಬಾದ್ ಕರ್ನಾಟಕದಡಿ 17 ಹುದ್ದೆಗಳನ್ನೂ ಭರ್ತಿ ಮಾಡಿಲ್ಲ. ಈ 406 ಹುದ್ದೆಗಳಿಂದ ಮಾಸಿಕವಾಗಿ 10 ಕೋಟಿ ರೂ. ರಾಜ್ಯ ಸರ್ಕಾರಕ್ಕೆ ಉಳಿತಾಯವಾಗುತ್ತಿದೆ. ಅದರಂತೆ ವರ್ಷಕ್ಕೆ 100 ಕೋಟಿ ರೂ. ಸರ್ಕಾರಕ್ಕೆ ಉಳಿತಾಯ ಆಗುತ್ತಿದೆ. ಆದರೆ ಪರಿಷ್ಕೃತ ವೇತನ ನೀಡಿದರೆ ವರ್ಷಕ್ಕೆ ಕೇವಲ 24 ಕೋಟಿ ರೂ. ವೆಚ್ಚವಾಗಲಿದೆ. ವಿವಿಯಲ್ಲಿ ಸುಮಾರು 900 ಅತಿಥಿ ಉಪನ್ಯಾಸಕರು ಇದ್ದು, ಇವರು ಕೆಲಸ ಮಾಡಲಿಲ್ಲವೆಂದರೆ ವಿವಿಗೆ ಬೀಗ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜ.22ರಂದು ಬಲಿಜ ವಿದ್ಯಾರ್ಥಿನಿಯರ ಹಾಸ್ಟೆಲ್ ಉದ್ಘಾಟನೆ



ಮೈಸೂರು,ಜ.17(ಪಿಎಂ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಯೋಗಿ ನಾರೇಯಣ ಬಣಜಿಗ (ಬಲಿಜ) ಸಂಘದ ಡಾ.ಎಂ.ಎಸ್.ರಾಮಯ್ಯ ವಿದ್ಯಾರ್ಥಿನಿಯರ ವಸತಿನಿಲಯದ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಜ.22ರಂದು ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಗೋಪಾಲಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮುದಾಯದ ಶಿಕ್ಷಣಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಂಘದ ಆವರಣದಲ್ಲಿ ಈಗಾಗಲೇ ಪುರುಷರ ಹಾಸ್ಟೆಲ್ ಇದ್ದು, ಇದೀಗ ಸಂಘದ ಆವರಣದಲ್ಲಿ ಲಭ್ಯವಿದ್ದ ಕಟ್ಟಡ ನವೀಕರಿಸಿ ಸಮಾಜದ ವಿದ್ಯಾರ್ಥಿನಿಯರ ಹಾಸ್ಟೆಲ್ ಆರಂಭಿಸಲಾಗುತ್ತಿದೆ. ಇದರ ನವೀಕರಣಕ್ಕೆ ಮಾಜಿ ಸಚಿವ ಎಂ.ಆರ್.ಸೀತಾರಾಮ್ ಕೊಡುಗೆ ಸಾಕಷ್ಟಿದೆ ಎಂದರು.

ಸಂಘದ ಆವರಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಅವರ ಸಾನ್ನಿಧ್ಯದಲ್ಲಿ ನಡೆಯುವ ಸಮಾರಂಭವನ್ನು ಮಾಜಿ ಸಚಿವ ಎಂ.ಆರ್.ಸೀತಾರಾಮ್ ಉದ್ಘಾಟಿಸಲಿದ್ದಾರೆ. ಇದೇ ವೇಳೆ ಡಾ.ಎಂ.ಎಸ್.ರಾಮಯ್ಯ ವಿದ್ಯಾರ್ಥಿನಿಯರ ವಸತಿನಿಲಯದ ಉದ್ಘಾಟನೆಯನ್ನು ಎಂ.ಆರ್.ಸೀತಾರಾಮ್ ಅವರ ಪತ್ನಿ ಶೃತಿ ಸೀತಾರಾಮ್ ನೆರವೇರಿಸಲಿದ್ದಾರೆ ಎಂದು ತಿಳಿಸಿದರು.

ಬಳಿಕ ಸಮುದಾಯದ ವಧು–ವರರ ಸಮಾವೇಶ ಏರ್ಪಡಿಸಿದ್ದು, ಈ ಕುರಿತು ಹೆಚ್ಚಿನ ವಿವರಗಳಿಗೆ ದೂ.ಸಂ. 0821–2340734 ಅನ್ನು ಸಂಪರ್ಕಿಸಬಹುದು. ಇದೇ ಸಂದರ್ಭದಲ್ಲಿ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳೊಂದಿಗೆ ತೇರ್ಗಡೆ ಹೊಂದಿದ ಮೈಸೂರು–ಚಾಮರಾಜನಗರ ಜಿಲ್ಲೆಗಳ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

2ಎ ಮೀಸಲಾತಿಗೆ ಒತ್ತಾಯ: ಬಲಿಜ ಸಮುದಾಯಕ್ಕೆ ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲೂ 2ಎ ಮೀಸಲಾತಿ ಸೌಲಭ್ಯ ನೀಡಬೇಕು. ಈ ಸಂಬಂಧ ಜ.27ರಂದು ಕರ್ನಾಟಕ ಪ್ರದೇಶ ಬಲಿಜ ಸಂಘದಿಂದ ನಡೆಯಲಿರುವ ಬಲಿಜ ಸಂಕಲ್ಪ ಯಾತ್ರೆಗೆ ಸಂಘ ಬೆಂಬಲ ನೀಡಿದ್ದು, ಈ ಯಾತ್ರೆಯಲ್ಲಿ ಮೈಸೂರು ಭಾಗದಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಾಗುವುದು ಎಂದು ತಿಳಿಸಿದರು. ಸಂಘದ ಖಜಾಂಚಿ ಕೆ.ಚಂದ್ರಶೇಖರ್, ಲೆಕ್ಕ ಪರಿಶೋಧಕ ಡಿ.ನಾಗರಾಜ, ನಿರ್ದೇಶಕ ಬಿ.ಕೆ.ಸುರೇಶ್, ಮಂಡ್ಯದ ಸರ್ವ ಬಣಜಿಗ ಸಂಘದ ಸಹ ಕಾರ್ಯದರ್ಶಿ ಹೆಚ್.ಪಿ.ಮೋಹನ್ ಗೋಷ್ಠಿಯಲ್ಲಿದ್ದರು.

ಪ್ರಿಯಾಂಕಾರ 2 ಸಾವಿರದ ಮೋಡಿಗೆ ಯಾವ ಮಹಿಳೆಯರೂ ಮರುಳಾಗಲ್ಲ!

ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್



ಮೈಸೂರು, ಜ.17(ಆರ್‌ಕೆಬಿ)– ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ಕುಟುಂಬದ ಓರ್ವ ಮಹಿಳೆಗೆ ಎರಡು ಸಾವಿರ ರೂ. ಆರ್ಥಿಕ ನೆರವು ನೀಡುವುದಾಗಿ ಕಾಂಗ್ರೆಸ್ ರಾಷ್ಟ್ರೀಯ ನಾಯಕಿ ಪ್ರಿಯಾಂಕಾ ಗಾಂಧಿ ಬೆಂಗಳೂರಿನಲ್ಲಿ ನಡೆದ 'ನಾ ನಾಯಕಿ' ಸಮಾವೇಶದಲ್ಲಿ ಘೋಷಣೆ ಮಾಡಿರುವುದು ಕೇವಲ ಮಹಿಳೆಯರ ಮೂಗಿಗೆ ತುಪ್ಪ ಸವರುವ ತಂತ್ರವಾಗಿದೆ ಎಂದು ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಇಂದಿಲ್ಲಿ ಟೀಕಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ನೀಡುವುದಾಗಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ ಇವೆಲ್ಲವೂ ರಾಜ್ಯದ ಜನರನ್ನು ತಪ್ಪು ದಾರಿಗೆ ಎಳೆಯುವ ತಂತ್ರವಾಗಿದೆ. ಇದಕ್ಕೆ ರಾಜ್ಯದ ಮಹಿಳೆಯರಾಗಲೀ, ಜನರಾಗಲೀ ಮನ್ನಣೆ ನೀಡುವುದಿಲ್ಲ ಎಂದು ತಿಳಿಸಿದರು.

ಕನಿಷ್ಠ ಗ್ರಾಮ ಪಂಚಾಯಿತಿ ಸದಸ್ಯೆಯೂ ಆಗಿಲ್ಲದ, ಕೇವಲ ಮನೆತನದ ಹೆಸರಿನಲ್ಲಿ ನಾಯಕಿ ಎನಿಸಿಕೊಂಡಿರುವ ಪ್ರಿಯಾಂಕಾ ಗಾಂಧಿ ಪ್ರಜಾ ನಾಯಕಿ ಆಗಲು ಸಾಧ್ಯವೇ. ಹಿಂದೆ ಸುದೀರ್ಘ ಕಾಲ ಆಡಳಿತ ನಡೆಸಿದ ಇಂದಿರಾಗಾಂಧಿಯವರೇ ಮಹಿಳೆಯರಿಗೆ ಏನೂ ಕೊಟ್ಟಿಲ್ಲ. ಅಂಥ ಕುಟುಂಬದ ಹೆಸರೇಳಿಕೊಂಡು ಬಂದಿರುವ ಪ್ರಿಯಾಂಕಾ ಗಾಂಧಿ ಹೇಳಿಕೆಗೆ ಮಹತ್ವ ಇದೆಯೇ ಎಂದು ಪ್ರಶ್ನಿಸಿದರು.

ಮಹಿಳಾ ಉನ್ನತೀಕರಣಕ್ಕೆ ಪ್ರಧಾನಿ ನರೇಂದ್ರ ಮೋದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಬಿ.ಎಸ್.ಯಡಿಯುರಪ್ಪ ನೀಡಿದ ಭಾಗ್ಯಲಕ್ಷ್ಮಿ ಯೋಜನೆ, ಮೋದಿಯವರು ಹೆಣ್ಣು ಮಕ್ಕಳಿಗೆ ಬಯಲು ಮುಕ್ತ ಶೌಚಾಲಯ ನಿರ್ಮಿಸಿರುವುದು, ಕೇಂದ್ರದಲ್ಲಿ 11 ಮಹಿಳೆಯರಿಗೆ ಮಂತ್ರಿ ಸ್ಥಾನ ನೀಡಿರುವುದು, ಎಂಟು ಮಹಿಳೆಯರಿಗೆ ವಿವಿಧ ರಾಜ್ಯಗಳಲ್ಲಿ ರಾಜ್ಯಪಾಲರನ್ನಾಗಿ ಮಾಡಿರುವುದು, ಅಲ್ಲದೆ, ದೇಶದ ಉನ್ನತ ಸ್ಥಾನವಾದ ಪ್ರಥಮ ಪ್ರಜೆಯನ್ನು (ರಾಷ್ಟ್ರಪತಿ) ಮಹಿಳೆಗೆ ಅವಕಾಶ ಕಲ್ಪಿಸಿಕೊಟ್ಟಿರುವುದು ಬಿಜೆಪಿ ಸರ್ಕಾರ ಎಂಬುದು ಜನರಿಗೆ ಗೊತ್ತಿದೆ. ಹಾಗಾಗಿ ರಾಜ್ಯದ ಕಾಂಗ್ರೆಸ್ ಮುಖಂಡರ ಇಂತಹ ನಾಟಕದ ಹೇಳಿಕೆಗೆ ಎಂದಿಗೂ ಮರಳಾಗುವುದಿಲ್ಲ ಎಂದು ತಿಳಿಸಿದರು.

ಉಪ ಮೇಯರ್ ಡಾ.ರೂಪಾ ಮಾತನಾಡಿ, ಬಿಜೆಪಿ ಸರ್ಕಾರ ಪೋಷಣ್ ಅಭಿಯಾನ, ಭಾಗ್ಯಲಕ್ಷ್ಮಿ, ಮಾತೃವಂದನಾ, ಮುದ್ರಾ ಯೋಜನೆಯಡಿ ಮಹಿಳೆಯರ ಸ್ವಾವಲಂಬನೆಗೆ ಸಾಲ ಸೌಲಭ್ಯ, ಸ್ವಚ್ಛ ಭಾರತ್ ಅಭಿಯಾನದಡಿ ಮಹಿಳೆಯರಿಗೆ ಶೌಚಾಲಯ, ಬೇಟಿ ಬಚಾವೋ–ಬೇಟಿ ಪಡಾವೋ ಇವೆಲ್ಲವೂ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಮಹಿಳೆಯರಿಗಾಗಿಯೇ ನೀಡಿದ ವಿಶೇಷ ಕಾರ್ಯಕ್ರಮಗಳು. ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಬಿಜೆಪಿ ನೀಡಿದ್ದರೂ, ಮಹಿಳೆಯರಿಗೆ ಬಿಜೆಪಿ ಏನೂ ನೀಡಿಲ್ಲ, ಮಾಡಿಲ್ಲ ಎಂಬ ಕಾಂಗ್ರೆಸ್ ಮುಖಂಡರ ಆರೋಪ ನಿರಾಧಾರ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ನಗರಪಾಲಿಕೆ ಸದಸ್ಯೆ ವೇದಾವತಿ, ಬಿಜೆಪಿ ಜಿಲ್ಲಾ ಸಹ ವಕ್ತಾರ ಡಾ.ವಸಂತಕುಮಾರ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ಉಪಸ್ಥಿತರಿದ್ದರು.

ಬಿಜೆಪಿ, ಜೆಡಿಎಸ್‌ಗೆ ಸೈದ್ಧಾಂತಿಕ ನೆಲೆಗಟ್ಟಿಲ್ಲ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆರೋಪ



ಬೈಲಕುಪ್ಪೆ, ಜ.17– ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳಿಗೆ ಯಾವುದೇ ಸೈದ್ಧಾಂತಿಕ ನೆಲೆಗಟ್ಟಿಲ್ಲ. ಆದ್ದರಿಂದ ಜನಸಾಮಾನ್ಯರ ಕಷ್ಟಗಳು ಅವರಿಗೆ ಅರ್ಥವಾಗುವುದಿಲ್ಲ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆರೋಪಿಸಿದರು.

ಪಿರಿಯಾಪಟ್ಟಣ ತಾಲೂಕಿನ ದೊಡ್ಡಹೊನ್ನೂರು ಗ್ರಾಮದಲ್ಲಿ ಬೈಲುಕುಪ್ಪೆ ಕಾಂಗ್ರೆಸ್ ಸಮಿತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಜನಸಾಮಾನ್ಯರ ಬವಣೆ ಅರ್ಥ ಮಾಡಿಕೊಳ್ಳದೇ ಭ್ರಷ್ಟಾಚಾರ ನಡೆಸಲು ಹವಣಿಸುತ್ತಿವೆ. ಇದನ್ನು ಜನಸಾಮಾನ್ಯರು ಅರ್ಥ ಮಾಡಿಕೊಳ್ಳಬೇಕು. ಈ ಎರಡೂ ಪಕ್ಷಗಳು ಸಂವಿಧಾನಾತ್ಮಕ ಮತ್ತು ಪ್ರಜಾಪ್ರಭುತ್ವಾತ್ಮಕ ಸಿದ್ಧಾಂತಗಳನ್ನು ಗಾಳಿಗೆ ತೂರಿ ಆಡಳಿತ ನಡೆಸುವ ಮೂಲಕ ಇಲ್ಲಸಲ್ಲದ ಕಾಯ್ದೆಗಳನ್ನು ಜಾರಿಗೊಳಿಸಿ ಜನಸಾಮಾನ್ಯರನ್ನು ಸಂಕಷ್ಟಕ್ಕೆ ದೂಡುತ್ತಿದ್ದಾರೆ. ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರದೆ ವಾಮಮಾರ್ಗಗಳ ಮೂಲಕ ಅಧಿಕಾರಕ್ಕೆ ಬಂದು ಆಡಳಿತ ನಡೆಸುತ್ತಿದ್ದಾರೆ ಎಂದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ಜಾರಿಗೊಳಿಸಿದ್ದ ಹಲವು ಯೋಜನೆಗಳು ಇಂದಿಗೂ ಜನಸಾಮಾನ್ಯರ ಮನೆ ಬಾಗಿಲಿಗೆ ತಲುಪುತ್ತಿದೆ. ಮಾಜಿ ಶಾಸಕ ಕೆ.ವೆಂಕಟೇಶ್ ಅವರು ತಮ್ಮ ಅಧಿಕಾರವಧಿಯಲ್ಲಿ ಸಾವಿರಾರು ಕೋಟಿ ಅನುದಾನ ತಂದು ತಾಲೂಕಿನ ಅಭಿವೃದ್ಧಿ ಮಾಡಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು ಜಯ ಗಳಿಸಬೇಕಿತ್ತು ಆದರೆ ಕಾರ್ಯಕರ್ತರ ಮೈಮರೆವಿನಿಂದ ಸೋಲು ಅನುಭವಿಸಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಪರಿಸ್ಥಿತಿ ಬಾರದಂತೆ ಜಾಗೃತಿ ವಹಿಸಬೇಕಿದೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದು ಖಚಿತ. ಹೀಗಾಗಿ ಮಾಜಿ ಶಾಸಕ ಕೆ.ವೆಂಕಟೇಶ್ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡಿದರೇ ಮಂತ್ರಿ ಮಾಡಿ ತಾಲೂಕಿನ ಅಭಿವೃದ್ಧಿಗೆ ಮತ್ತಷ್ಟು ಒತ್ತು ನೀಡಲಾಗುವುದು ಎಂದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಅವಕಾಶವಾದಿ ರಾಜಕಾರಣ ಮಾಡುತ್ತಿವೆ. ಇವರಿಗೆ ಜನತೆಯ ಹಿತಕ್ಕಿಂತ ಕೇವಲ ಅಧಿಕಾರ ಮುಖ್ಯ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ರಾಜ್ಯದ ಮತದಾರರು ಈ ಎರಡು ಪಕ್ಷಗಳನ್ನು ತಿರಸ್ಕರಿಸಲಿದ್ದು, ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ. ಆದ್ದರಿಂದ ಮಾಜಿ ಶಾಸಕ ಕೆ.ವೆಂಕಟೇಶ್ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡಲು ಕಾರ್ಯಕರ್ತರು ಶ್ರಮಿಸಬೇಕು ಎಂದು ಮನವಿ ಮಾಡಿದರು.

> ಬಿಜೆಪಿ ಸರ್ಕಾರದ ದುರಾಡಳಿತದಿಂದ ಉಳ್ಳವರು ಮಾತ್ರ ಅಭಿವೃದ್ಧಿ ಹೊಂದುತ್ತಿದ್ದು, ಜನಸಾಮಾನ್ಯರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ಬಡವರು ಸೇರಿದಂತೆ ಎಲ್ಲಾ ವರ್ಗದ ಹಿತ ಕಾಯಲು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಅವಶ್ಯಕ. ಹೀಗಾಗಿ ಪ್ರತಿಯೊಬ್ಬರೂ ಪಕ್ಷ ಸಂಘಟನೆಗೆ ಶ್ರಮಿಸಬೇಕು.
> - ಡಾ.ಡಿ.ತಿಮ್ಮಯ್ಯ, ವಿಧಾನಪರಿಷತ್ ಸದಸ್ಯ

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೆ.ವೆಂಕಟೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮುಖಂಡ ಕರೀಗೌಡ ಮಾತನಾಡಿದರು. ಈ ವೇಳೆ ಮೈಸೂರು ಜಿಲ್ಲಾ ಕಾಂಗ್ರೆಸ್ ಹಿರಿಯ ಕಾರ್ಯದರ್ಶಿ ಸಮಿವುಲ್ಲಾ ಖಾನ್, ಟಿ.ಡಿ.ಗಣೇಶ್, ನಿತಿನ್ ವೆಂಕಟೇಶ್, ಡಿ.ಟಿ.ಸ್ವಾಮಿ, ಅನಿತಾ ತೋಟಪ್ಪ ಶೆಟ್ಟಿ, ಕೆ.ಹೊಲದಪ್ಪ, ರೆಹಮತ್ ಜಾನ್‌ಬಾಬು, ಸುಮಾ, ಗೀತಾ, ಕಲ್ಯಾಣಪ್ಪ, ಪಿ.ಮಹದೇವ್, ಜವರಪ್ಪ, ಗ್ರಾಪಂ ಅಧ್ಯಕ್ಷೆ ಸುಮಾ, ಉಪಾಧ್ಯಕ್ಷೆ ಗೀತಾ, ಸದಸ್ಯರಾದ ರಘು, ಬಾಲಾಜಿ, ನಿಸಾರ್ ಅಹ್ಮದ್, ಮಂಜುನಾಥ್, ನವೀನ್, ಪಿ.ಪಿ.ಮಹದೇವ್, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಸೇರಿದಂತೆ ಮತ್ತಿತರರಿದ್ದರು.

ಬಸಲಾಪುರದಲ್ಲಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ



ಕಂಪಲಾಪುರ, ಜ.17– ಕಳೆದ 30 ವರ್ಷ ಶಾಸಕರಾಗಿದ್ದವರು ಏನು ಮಾಡಿದ್ದಾರೆ. ನಾನು ಒಂದು ಬಾರಿ ಶಾಸಕನಾಗಿ ಏನು ಮಾಡಿದ್ದೇನೆ ಎಂಬುದು ಪಿರಿಯಾಪಟ್ಟಣ ತಾಲೂಕಿನ ಜನತೆಗೆ ಗೊತ್ತಿದೆ ಎಂದು ಶಾಸಕ ಕೆ.ಮಹದೇವ್ ವ್ಯಂಗ್ಯವಾಡಿದರು.

ಇಲ್ಲಿಗೆ ಸಮೀಪದ ಬಸಲಾಪುರದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು 2008, 2013ರ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲು ಅನುಭವಿಸಿದೆ. 2018ರ ಚುನಾವಣೆಯಲ್ಲಿ ನಿಮ್ಮೆಲ್ಲರ ಅನುಕಂಪದಿಂದ ಶಾಸಕನಾಗಿ ಆಯ್ಕೆಯಾದೆ. 2 ವರ್ಷ ಕೊರೊನಾ ಬಂದು ಇಡೀ ರಾಜ್ಯವೇ ಸ್ತಬ್ಧವಾಯಿತು. ನಂತರ ಒಂದು ವರ್ಷ ಅತಿವೃಷ್ಟಿ ಈ 2 ಕಾರಣಗಳಿಂದ ಯಾವುದೇ ಅಭಿವೃದ್ಧಿ ಕೆಲಸ ಮಾಡಲಾಗಲಿಲ್ಲ. ಉಳಿದ 2 ವರ್ಷಗಳ ಅವಧಿಯಲ್ಲಿ 30 ವರ್ಷಗಳಿಂದ ಆಗದ ಕೆಲಸಗಳನ್ನು ಒಂದು ಮುಕ್ಕಾಲು ವರ್ಷದಲ್ಲಿ ಮಾಡಿದ್ದೇನೆ. ಕ್ಷೇತ್ರದ ಜನತೆ ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಚಿರಋಣಿ. ಮುಂದೆ ನಿಮ್ಮ ಮನೆ ಮಗನಾಗಿ ಹೆಚ್ಚು ಕೆಲಸ ಮಾಡುತ್ತೇನೆ. ಮತ್ತೊಮ್ಮೆ ನಿಮ್ಮೆಲ್ಲರ ಬೆಂಬಲ ಬೇಕು. ನಾವು ಎಷ್ಟು ದಿನ ಅಧಿಕಾರದಲ್ಲಿರುತ್ತೇವೆ ಎಂಬುದು ಮುಖ್ಯವಲ್ಲ ಅಧಿಕಾರದಲ್ಲಿದ್ದಾಗ ಎಷ್ಟು ಕೆಲಸ ಮಾಡಿದ್ದೇವೆ ಎಂಬುದು ಮುಖ್ಯ ಎಂದರು.

ಕುಡಿಯುವ ನೀರಿನಲ್ಲಿ ಕಬ್ಬಿಣದ ಅಂಶ: ನೀವು ಕುಡಿಯುವ ನೀರಿನಲ್ಲಿ ಕಬ್ಬಿಣದ ಅಂಶ ಸೇರುತ್ತಿದ್ದು, ಸಾವಿರಾರು ಜನ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದಾರೆ. ಇದನ್ನು ಮನಗಂಡು ತಾಲೂಕಿನ 303 ಹಳ್ಳಿಗಳಿಗೆ ಕಾವೇರಿ ನೀರು ಪೂರೈಸುವ ಕ್ರಿಯಾಯೋಜನೆ ಸಿದ್ಧಗೊಂಡಿದ್ದು, ಇನ್ನೇನು ಕೆಲ ದಿನಗಳಲ್ಲಿ ಸಾಕಾರಗೊಳ್ಳಲಿದೆ. ಮುಖ್ಯಮಂತ್ರಿಗಳನ್ನು ಆಹ್ವಾನಿಸಿ ಚಾಲನೆ ನೀಡಲಾಗುವುದು ಎಂದರು.

ಹಿರಿಯ ವಕೀಲ ಗೋವಿಂದೇಗೌಡ ಮಾತನಾಡಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ತಾಲೂಕು ವಕೀಲರ ಸಂಘದ ಅಧ್ಯಕ್ಷ ಜಿ.ಜೆ.ಸತೀಶ್, ದೊಡ್ಡ ಬೇಲಾಳು ಗ್ರಾಪಂ ಅಧ್ಯಕ್ಷ ಸೈಯದ್ ಜವೇರಿಯಾ, ಉಪಾಧ್ಯಕ್ಷ ರಾಮನಾಯ್ಕ, ಸದಸ್ಯರಾದ ಅಂಬಿಕಾ, ಶಿಲ್ಪ, ಸ್ವಾಮಿ, ಸಹಕಾರ ಸಂಘದ ಅಧ್ಯಕ್ಷ ಕೆ.ಶಿವಣ್ಣ, ನಿರ್ದೇಶಕ ಎಂ.ಟಿ.ಕುಮಾರ್, ಬಸವರಾಜೇಅರಸ್, ಕಂಪಲಾಪುರಕೊಪ್ಪಲು ಡೇರಿ ಅಧ್ಯಕ್ಷ ಕೆ.ಎಂ.ಲಕ್ಷ್ಮಣ್, ಗ್ರಾಮದ ಮುಖಂಡರಾದ ಶ್ರೀನಿವಾಸಗೌಡ, ರಾಮೇಗೌಡ, ಪುಟ್ಟೇಗೌಡ, ಅಂದಾನಿಗೌಡ, ಮಂಜು ಸೇರಿದಂತೆ ಇತರರಿದ್ದರು.

ಕೃಷಿಗೆ ಹಗಲು ವೇಳೆ ವಿದ್ಯುತ್ ನೀಡಲು ಮನವಿ

ಬನ್ನೂರು, ಜ.17– ರೈತರ ಕೃಷಿ ಚಟುವಟಿಕೆಗೆ ಹಗಲು ವೇಳೆ ವಿದ್ಯುತ್ ನೀಡುವಂತೆ ರಾಜ್ಯ ರೈತ ಸಂಘದ ಹೋಬಳಿ ಅಧ್ಯಕ್ಷ ಹುಚ್ಚೇಗೌಡ, ಚೆಸ್ಕಾಂ ಸಹಾಯಕ ಅಭಿಯಂತರ ಯೋಗೇಶ್‌ಗೆ ಮನವಿ ಸಲ್ಲಿಸಿದರು.



ಪಟ್ಟಣದ ಚೆಸ್ಕಾಂ ಕಚೇರಿಯಲ್ಲಿ ಮಾತನಾಡಿದ ರೈತರು, ಚೆಸ್ಕಾಂ ಅಧಿಕಾರಿಗಳು ರೈತರಿಗೆ ಸ್ಪಂದಿಸುತ್ತಿಲ್ಲ. ರೈತರು ಸಮಸ್ಯೆ ಹೇಳಿಕೊಂಡು ಫೋನ್ ಮಾಡಿದರೆ ಹಾರಿಕೆ ಉತ್ತರ ನೀಡುತ್ತಾರೆ. ವ್ಯವಸಾಯಕ್ಕೆ ರಾತ್ರಿ ವೇಳೆ ವಿದ್ಯುತ್ ನೀಡುತ್ತಿದ್ದು, ಕಾಡುಪ್ರಾಣಿ ಹಾವಳಿಯಿಂದ ರೈತರು ಗದ್ದೆಗೆ ನೀರು ಬಿಡಲು ಹೋಗುತ್ತಿಲ್ಲ. ಇದರಿಂದ ರೈತರ ಬೆಳೆಗಳು ನಾಶವಾಗುತ್ತಿದೆ. ಹೀಗಾಗಿ ಮುಂದಿನ ದಿನದಲ್ಲಿ ಹಗಲು ಹೊತ್ತು ವಿದ್ಯುತ್ ನೀಡುವಂತೆ ಒತ್ತಾಯಿಸಿದರು. ಇದಕ್ಕುತ್ತರಿಸಿದ ಸಹಾಯಕ ಅಭಿಯಂತರ ಯೋಗೇಶ್ ವಿಚಾರವನ್ನು ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು. ಈ ವೇಳೆ ಮುಖಂಡರಾದ ರಾಮಾಚಾರಿ, ಮಹೇಶ್, ಜಯರಾಮು, ರಾಮಣ್ಣ ನಿರಂಜನ್ ಕುಮಾರ್, ಕೃಷ್ಣ ಶ್ರೀಕಂಠೇಗೌಡ, ರೇವಣ್ಣ, ಮಹದೇವ, ಶಿವಕುಮಾರ, ಸಿದ್ದೇಗೌಡ, ನಾಗೇಂದ್ರ, ಹೇಮಂತ್ ಸೇರಿದಂತೆ ಹಲವರಿದ್ದರು.



ದಾವಣಗೆರೆಯ ರಾಜನಹಳ್ಳಿಯಲ್ಲಿ ಫೆ.8, 9ರಂದು ನಡೆಯುವ ಶ್ರೀಮಹರ್ಷಿ ವಾಲ್ಮೀಕಿ ಜಾತ್ರೆಗೆ ತಿ.ನರಸೀಪುರ ತಾಲೂಕಿನ ಮೂಗೂರು ಹೋಬಳಿ ನಾಯಕ ಸಮುದಾಯವನ್ನು ಜಾತ್ರಾ ಸಮಿತಿಯಿಂದ ಆಹ್ವಾನಿಸಿ, ಕರಪತ್ರ ಬಿಡುಗಡೆಗೊಳಿಸಲಾಯಿತು. ಈ ವೇಳೆ ತಾಲೂಕು ನಾಯಕರ ಸಂಘದ ಹಂಗಾಮಿ ಅಧ್ಯಕ್ಷ ಚಿಕ್ಕಣ್ಣ, ಜಾತ್ರೆ ಸಮಿತಿ ಅಧ್ಯಕ್ಷ ಮಾದಪ್ಪ, ಮಾದಾಪುರ ಗ್ರಾಪಂ ಸದಸ್ಯ ಮಹೇಶ್, ಕುಮಾರ, ಸಣ್ಣಮಾದನಾಯಕ, ರೇವಣ್ಣ, ರವಿಕುಮಾರ್, ಸಿದ್ದಪ್ಪಾಜಿ, ಮಹದೇವ, ಸುರೇಶ, ನಾಗರಾಜು, ದೇವರಾಜು ಮತ್ತಿತರರಿದ್ದರು.

ಸಾಲಿಗ್ರಾಮದಲ್ಲಿ ನೂತನ ತಾಪಂ ಕಚೇರಿ ಉದ್ಘಾಟನೆ



ಸಾಲಿಗ್ರಾಮ, ಜ.17– ಕೆ.ಆರ್.ನಗರ ಮತ್ತು ಸಾಲಿಗ್ರಾಮಗಳನ್ನು 2 ತಾಲೂಕುಗಳಾಗಿ ವಿಂಗಡಿಸಿರುವುದು ಅಭಿವೃದ್ಧಿಗಾಗಿಯೇ ಹೊರತು ಯಾವುದೇ ರಾಜಕೀಯ ದುರುದ್ದೇಶಕ್ಕಾಗಿ ಅಲ್ಲ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದಲ್ಲಿ ನೂತನವಾಗಿ ಆರಂಭವಾದ ತಾಲೂಕು ಪಂಚಾಯಿತಿ ಕಚೇರಿ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಸಾಲಿಗ್ರಾಮವನ್ನು ನೂತನ ತಾಲೂಕು ಕೇಂದ್ರವನ್ನಾಗಿ ಮಾಡಲಾಯಿತು. ರೈತರು, ಮಹಿಳೆಯರು ಹಾಗೂ ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ದೂರದ ತಾಲೂಕು ಕೇಂದ್ರಕ್ಕೆ ಹೋಗಿ ಬರಬೇಕಾಗಿತ್ತು. ಈ ಸಂಕಷ್ಟ ತಪ್ಪಿಸಲು ವಿಧಾನಸಭಾ ಕ್ಷೇತ್ರದಲ್ಲಿ 2 ತಾಲೂಕುಗಳನ್ನು ರಚಿಸಲಾಯಿತು ಎಂದರು.

ಸಾಲಿಗ್ರಾಮ, ಕೆ.ಆರ್.ನಗರ 2 ತಾಲೂಕು ಆಗಿರುವುದರಿಂದ ಸರ್ಕಾರದಿಂದ ಹೆಚ್ಚಿನ ಅನುದಾನ ಬಂದು ಹೆಚ್ಚಿನ ಅಭಿವೃದ್ಧಿಯಾಗಲಿದೆ ಎಂದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ನೂತನ ತಾಪಂ ಕಚೇರಿ ಉದ್ಘಾಟಿಸಿದರು. ಆದಿಚುಂಚನಗಿರಿ ಶಾಖಾ ಮಠದ ಸೋಮನಾಥ ಸ್ವಾಮೀಜಿ, ತಾಪಂ ಇಓ ಸತೀಶ್, ತಹಸೀಲ್ದಾರ್ ಕೆ.ಎನ್.ಮೋಹನ್ ಕುಮಾರ್, ಇನ್ಸ್‌ಪೆಕ್ಟರ್ ಶ್ರೀಕಾಂತ್, ಎಎಸ್‌ಐ ವಸಂತ್, ತಾಲೂಕು ಕಸಾಪ ಅಧ್ಯಕ್ಷ ಎಸ್.ಕೆ.ಮಧುಚಂದ್ರ, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಅಣ್ಣೇಗೌಡ, ತಾಲೂಕು ಜೆಡಿಎಸ್ ಅಧ್ಯಕ್ಷ ಮೆಡಿಕಲ್ ರಾಜಣ್ಣ, ಗುರು ಶಿರೋಮಣಿ ಪ್ರಶಸ್ತಿ ಪುರಸ್ಕೃತ ಎಸ್.ಆರ್.ರಾಮೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮಶೇಖರ್, ಮಾಜಿ ನಿರ್ದೇಶಕ ಕುಚೇಲ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ, ಉಪಾಧ್ಯಕ್ಷೆ ನೀಲಮ್ಮ, ಪಿಡಿಓ ಮಂಜುನಾಥ್, ದೇವಿಕಾ, ಪ್ರಕಾಶ್, ಮಧು ಇದ್ದರು.

ಕೆಐಎಡಿಬಿಯಿಂದ ಭೂಸ್ವಾಧೀನ ವಿರೋಧಿಸಿ ಪ್ರತಿಭಟನೆ



ನಂಜನಗೂಡು, ಜ.17– ತಾಲೂಕಿನ ಮುದ್ದಹಳ್ಳಿ, ಎಲಚಗೆರೆ, ಸಿಂಧುವಳ್ಳಿಪುರ ಗ್ರಾಮದ ಬಳಿ ಕೆಐಎಡಿಬಿಯಿಂದ ಭೂಸ್ವಾಧೀನ ಪ್ರಕ್ರಿಯೆ ವಿರೋಧಿಸಿ ರೈತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ಜಮಾಯಿಸಿದ ಮುದ್ದಹಳ್ಳಿ, ಎಲಚಗೆರೆ, ಸಿಂಧುವಳ್ಳಿಪುರ ಗ್ರಾಮದ ರೈತರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ತಾಲೂಕು ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಭೂ ಸ್ವಾಧೀನ ಪ್ರಕ್ರಿಯೆ ರದ್ದುಪಡಿಸುವಂತೆ ಒತ್ತಾಯಿಸಿದರು.

ರೈತ ಮುಖಂಡ ಶ್ರೀನಿವಾಸ್ ಮಾತನಾಡಿ, ಭೂಮಿ ಮಾರಾಟ ಮಾಡಲು ರೈತರು ಸಿದ್ಧವಿಲ್ಲ ಎಂದು ಹೇಳಿದರೂ, ರೈತರ ಭೂಮಿ ಕೆಐಎಡಿಬಿ ವಶಪಡಿಸಿಕೊಳ್ಳಲು ಮುಂದಾಗಿದೆ. ಈ ಕೂಡಲೇ ಭೂಸ್ವಾಧೀನ ಪ್ರಕ್ರಿಯೆ ರದ್ದುಗೊಳಿಸಬೇಕು. ಇಲ್ಲವಾದಲ್ಲಿ ಉಗ್ರ ಪ್ರತಿಭಟನೆ ರೂಪಿಸುವುದಾಗಿ ಎಚ್ಚರಿಸಿದರು.

ರೈತ ಮಹಿಳೆ ಚಿನ್ನಮ್ಮ ಮಾತನಾಡಿ, ಭೂಮಿ ನಂಬಿಕೊಂಡು ನಾವು ಜೀವನ ನಡೆಸುತ್ತಿದ್ದೇವೆ. ಅಲ್ಲದೆ ನಮ್ಮ ಪೂರ್ವಿಕರ ಕಳೇಬರಗಳನ್ನು ಈ ಜಮೀನಿನಲ್ಲೇ ಹೂತಿದ್ದೇವೆ. ಒಂದು ವೇಳೆ ಭೂಮಿ ಮಾರಾಟ ಮಾಡಿಕೊಂಡರೆ ನಮಗೆ ಹೂಳಲೂ ಸಹ ಭೂಮಿ ಇರುವುದಿಲ್ಲ. ಆದ್ದರಿಂದ ನಾನು ಯಾವುದೇ ಕಾರಣಕ್ಕೂ ಭೂಮಿ ಮಾರಾಟ ಮಾಡುವುದಿಲ್ಲ. ಸರ್ಕಾರ ಕೂಡಲೇ ಭೂಸ್ವಾಧೀನ ಪ್ರಕ್ರಿಯೆ ಕೈ ಬಿಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸರ್ವೋದಯ ಸಂಘಟನೆಯ ಉಗ್ರನರಸಿಂಹೇಗೌಡ, ನಂಜುಂಡಸ್ವಾಮಿ, ದಸಂಸ ಸಂಚಾಲಕರಾದ ಬಸವಣ್ಣ, ಮಲ್ಲೇಶ್, ಬಸವರಾಜು, ಮಾದೇವಸ್ವಾಮಿ, ವಿಜಯಕುಮಾರ್, ಆಕಾಶ್, ಶಶಿಧರ್ ಸೇರಿದಂತೆ ರೈತರು ಮತ್ತು ವಿವಿಧ ಸಂಘಟನೆಗಳ ಮುಖಂಡರಿದ್ದರು.

ಹಸ್ತಿಕೇರಿ ಮಠದಲ್ಲಿ ದತ್ತಾತ್ರೇಯ ಸದಾನಂದರ ವಾರ್ಷಿಕೋತ್ಸವ



ತಲಕಾಡು, ಜ.17– ತಿ.ನರಸೀಪುರ ತಾಲೂಕಿನ ತಲಕಾಡು ಹಸ್ತಿಕೇರಿ ಮಠದ ವಿಕಾಸ ವೇದಿಕೆ ಟ್ರಸ್ಟ್ ಆಶ್ರಯದಲ್ಲಿ ದತ್ತಾತ್ರೇಯ ಸದಾನಂದರ 8ನೇ ವಾರ್ಷಿಕೋತ್ಸವ ನೆರವೇರಿತು.

ಮಾಜಿ ಶಾಸಕ ಡಾ.ಭಾರತಿ ಶಂಕರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಠಮಾನ್ಯಗಳು ಸಮಾಜದ ಸಹಬಾಳ್ವೆಗೆ ಸಹಕರಿಸುತ್ತಾ ತಮ್ಮದೇ ಆದ ಕೊಡುಗೆ ನೀಡುತ್ತಿವೆ ಎಂದರು.

ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಾತನಾಡಿ, ಹಸ್ತಿಕೇರಿ ಮಠದ ಸ್ವಾಮಿಗಳು ಈ ಇಳಿ ವಯಸ್ಸಿನಲ್ಲೂ ಸಮಾಜಸೇವೆ ಮಾಡುತ್ತಿರುವುದು ಸಂತೋಷದ ವಿಚಾರ ಎಂದರು.

ಈ ವೇಳೆ ಬಿಜೆಪಿ ಕ್ಷೇತ್ರಾಧ್ಯಕ್ಷ ಲೋಕೇಶ್ ನಾಯಕ್, ಡಾ.ರೇವಣ್ಣ ಮಾತನಾಡಿದರು. ದತ್ತಾತ್ರೇಯರ ಭಜನೆ, ಆರತಿ ಸೇವೆ ಮಾಡುತ್ತಿರುವ ಮಹೇಶ್, ಮಂಜುಳಾ, ಸರೋಜಮ್ಮ ಮಂಗಳ, ರೂಪಾ, ಮಲ್ಲೇಶ್, ರೂಪ, ಅಕ್ಷತಾ, ಜಯಶೀಲ, ಗಿರೀಶ, ಪೂಜಾ, ಉಮಾ, ರಾಜೇಶ್ವರಿ, ನೀಲಮ್ಮ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಹಸ್ತಿಕೇರಿ ಮಠದ ಡಾ.ಸಿದ್ದ ಮಲ್ಲಿಕಾರ್ಜುನಸ್ವಾಮಿ, ಜಿ.ಎನ್.ಲೋಕೇಶ್, ವಿಜಯ್ ಕುಮಾರ್, ಅನಿಲ್, ಯಶೋಧ, ಗೋವಿಂದರಾಜು, ಸಿ.ಬಸವಣ್ಣ ಇನ್ನಿತರರಿದ್ದರು.

ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರ ತಾಂಡವ: ಬೀಚನಹಳ್ಳಿ ಚಿಕ್ಕಣ್ಣ ಆರೋಪ



ಹೆಚ್.ಡಿ.ಕೋಟೆ, ಜ.17– ಪಟ್ಟಣದ ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಆರೋಪಿಸಿದರು.

ತಹಸೀಲ್ದಾರ್ ರತ್ನಾಂಬಿಕಾ ಹಾಗೂ ಕಂದಾಯ, ಸರ್ವೇ ಅಧಿಕಾರಿಗಳು ರೈತರಿಂದ ಅರ್ಜಿ ಸ್ವೀಕರಿಸಿ ಕ್ರಮಬದ್ಧವಾಗಿ ಸಾಗುವಳಿ ಪತ್ರ ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಪಟ್ಟಣದ ತಾಲೂಕು ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆದು ಮಾತನಾಡಿದ ಅವರು, ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಮಿತಿಮೀರಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಾಗಿದೆ. ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ತಹಸೀಲ್ದಾರ್ ಅವರನ್ನು ಪ್ರಶ್ನಿಸಲು ತಾಲೂಕು ಕಚೇರಿಗೆ ಆಗಮಿಸಿದರೇ, ತಹಸೀಲ್ದಾರ್ ಅವರು ನಾಪತ್ತೆಯಾಗಿದ್ದಾರೆ. ಹೀಗಾಗಿ ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ತಾಲೂಕು ಕಚೇರಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದಿಂದ ರೈತರು ಕಂಗಾಲಾಗಿದ್ದಾರೆ. ಸಾಗುವಳಿ ಪತ್ರ ಪಡೆಯಲು ರೈತರು ಲಕ್ಷಾಂತರ ಹಣ ನೀಡಬೇಕಿದೆ. ಅಧಿಕಾರಿಗಳು ಸಾಗುವಳಿ ಪತ್ರ ನೀಡಲು ರೈತರಿಗೆ ಹಣಕ್ಕೆ ಬೇಡಿಕೆ ಇಡುತ್ತಿರುವುದು ಸೇರಿದಂತೆ ಇಲ್ಲಿನ ಎಲ್ಲಾ ಭ್ರಷ್ಟಾಚಾರದ ಬಗ್ಗೆ ವಿವರವಾಗಿ ತಿಳಿಸಿದ್ದೇನೆ. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ಈ ಸಂಬಂಧ ಉಪ ವಿಭಾಗಾಧಿಕಾರಿಗಳನ್ನು ಸಂಪರ್ಕಿಸುವಂತೆ ತಿಳಿಸಿದ್ದು, ಈ ಬಗ್ಗೆ ತನಿಖೆ ಮಾಡಿಸುವುದಾಗಿ ತಿಳಿಸಿದ್ದಾರೆ ಎಂದರು.

> ಸಾಗುವಳಿ ಹಾಗೂ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ತಹಸೀಲ್ದಾರ್ ರತ್ನಾಂಬಿಕೆ ಅವರಿಗೆ ನಮ್ಮ ಮನೆಯಲ್ಲಿ 50 ಸಾವಿರ ನೀಡಿದ್ದೇ, ಸಾಲದು ಎಂದು 1 ಲಕ್ಷ ರೂ. ಪಡೆದಿದ್ದಾರೆ. ಆದರೆ ಸಮಸ್ಯೆ ಮಾತ್ರ ಬಗೆಹರಿದಿಲ್ಲ. ಇನ್ನೂ 2 ಲಕ್ಷ ರೂ.ಗಳಿಗೆ ತಹಸೀಲ್ದಾರ್ ಬೇಡಿಕೆ ಇಟ್ಟಿದ್ದಾರೆ. ಜಮೀನಿಗೆ ರಸ್ತೆ ಬಿಡಿಸಿ ಕೊಡಿ ಎಂದು 10 ಸಾವಿರ ನೀಡಿದರೂ ಕೆಲಸವಾಗಿಲ್ಲ. ಹೀಗಾಗಿ ಜಿಲ್ಲಾಧಿಕಾರಿಗಳು ಇಂತಹ ಭ್ರಷ್ಟ ಅಧಿಕಾರಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿ ಉತ್ತಮ ಕೆಲಸ ಮಾಡುವ ದಕ್ಷ ಅಧಿಕಾರಿಗಳನ್ನು ನೇಮಕ ಮಾಡಿಕೊಡಬೇಕು.
> - ಎ.ಜಿ.ಕಾಳೇಗೌಡ, ರೈತ ಮುಖಂಡ



> ನನ್ನ ವಿರುದ್ಧದ ಆರೋಪಗಳು ಸತ್ಯಕ್ಕೆ ದೂರವಾದದು. ನಾನು ಯಾರಿಂದಲೂ ಯಾವುದೇ ಹಣ ಪಡೆದಿಲ್ಲ. ನನ್ನ ಬಗ್ಗೆ ಇಲ್ಲಸಲ್ಲದ ಆರೋಪ ಮಾಡಲಾಗುತ್ತಿದೆ.
> - ರತ್ನಾಂಬಿಕಾ, ತಹಸೀಲ್ದಾರ್.

ಈ ವೇಳೆ ಮುಖಂಡರಾದ ನರಸಿಂಹೇಗೌಡ, ರಾಜೇಂದ್ರ ಶಫೀವುಲ್ಲಾ, ಗೋಪಾಲಸ್ವಾಮಿ, ಚಾ.ನಂಜುಂಡಮೂರ್ತಿ, ಮಿಲ್ ನಾಗರಾಜು, ಗುರುಸ್ವಾಮಿ, ಶಾಂತರಾಜ್, ಶಿವರಾಜ್, ಮಂಜು, ಪ್ರೇಮ್ ಕುಮಾರ್, ವೇಣು, ನಿಂಗನಾಯಕ, ಕೃಷ್ಣ, ಸೂರಿ, ಮನ್ಸೂರ್, ರಂಗಪ್ಪ, ನಾಗನಾಯಕ, ರವಿ, ಮಹೇಂದ್ರ, ಗೋವಿಂದೇಗೌಡ, ನಿರಂಜನ್, ಪ್ರಕಾಶ್, ದೊರೆ, ಮಣಿಕಂಠ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ತುನಿವು (ತ): ಬೆ.10.05ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ರಾ.10.10ಕ್ಕೆ, ವಾರಿಸು (ತ): ಸಂ.4ಕ್ಕೆ
ಸ್ಕ್ರೀನ್ 2	ತುನಿವು (ತ): ಬೆ.8ಕ್ಕೆ, ಸಂ.4.05ಕ್ಕೆ, ವೇದ (ಕ): ಮ.1.05ಕ್ಕೆ, ವಾರಿಸು (ತ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ವಾರಿಸು (ತ): ಬೆ.8.30ಕ್ಕೆ, ಮ.1.05ಕ್ಕೆ, ವೇದ (ಕ): ಸಂ.4.20ಕ್ಕೆ, ರಾ.10.20ಕ್ಕೆ, ತುನಿವು (ತ): ರಾ.7.30ಕ್ಕೆ.
ಸ್ಕ್ರೀನ್ 4	ವಾರಿಸು (ತ): ಬೆ.7.30ಕ್ಕೆ, ಬೆ.11.15ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಮ.2.40ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಮಿಸ್ಟರ್ ಬ್ಯಾಚುಲರ್ (ಕ): ಬೆ.10.30ಕ್ಕೆ, ಸಂ.4.35ಕ್ಕೆ, ರಾ.10.20ಕ್ಕೆ, ವೇದ (ಕ): ಮ.1.25ಕ್ಕೆ, ಕಾಕ್ಟೇಲ್ (ಕ): ರಾ.7.35ಕ್ಕೆ.
ಸ್ಕ್ರೀನ್ 2	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.40ಕ್ಕೆ, ಮ.2.30ಕ್ಕೆ, ಸಂ.6.20ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಸ್ಪೂಕಿ ಕಾಲೇಜ್ (ಕ): ಬೆ.10ಕ್ಕೆ, ಥಗ್ ಆಫ್ ರಾಮಘಡ (ಕ): ಮ.12.50ಕ್ಕೆ, ಮಿಸ್ ನಂದಿನಿ (ಕ): ಮ.3.25ಕ್ಕೆ, ಬೇಡಿಯಾ (ಹಿಂ): ಸಂ.6ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ರಾ.9.10ಕ್ಕೆ.
ಸ್ಕ್ರೀನ್ 4	ವೈಶಂಪಾಯನ ತೀರ (ಕ): ಬೆ.11.30ಕ್ಕೆ, ಸ್ಪೂಕಿ ಕಾಲೇಜ್ (ಕ): ಮ.1.55ಕ್ಕೆ, ರಾ.7.10ಕ್ಕೆ, ಲವ್‌ಸ್ಟೋರಿ 1998 (ಕ): ಸಂ.4.45ಕ್ಕೆ, ವೇದ (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.


ಪದ್ಮ ಚಿತ್ರಮಂದಿರ	(ದೂ: 2521923)
ವಾರಿಸು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕುಟ್ಟೆ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ತುನಿವು (ತ)	4 ಪ್ರದರ್ಶನಗಳು
ಗಾಯಿತ್ರಿ	
ತುನಿವು (ತ)	4 ಪ್ರದರ್ಶನಗಳು
ರಾಜ್‌ಕಮಲ್	
ತುನಿವು (ತ)	4 ಪ್ರದರ್ಶನಗಳು
ಸಂಗಂ	
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ವಾರಿಸು (ತ)	4 ಪ್ರದರ್ಶನಗಳು
ಲಿಡೋ	
ವೀರಸಿಂಹ ರೆಡ್ಡಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ವಾರಿಸು (ತ)	4 ಪ್ರದರ್ಶನಗಳು
ಪ್ರಭಾ	
ಲವ್ ಸ್ಟೋರಿ (ಕ) ಕಾಕ್ಟೇಲ್ (ಕ)	2 ಪ್ರದರ್ಶನಗಳು

ಗೃಹಿಣಿ ನಾಪತ್ತೆ



ತಿ.ನರಸೀಪುರ, ಜ.17– ಗಾರ್ಮೆಂಟ್ಸ್‌ಗೆ ಹೋಗಿ ಬರುವುದಾಗಿ ಹೇಳಿ ಹೋದ ಗೃಹಿಣಿಯೊಬ್ಬರು ಇಬ್ಬರು ಮಕ್ಕಳೊಂದಿಗೆ ನಾಪತ್ತೆಯಾಗಿರುವ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ತಾಲೂಕಿನ ಕನ್ನಹಳ್ಳಿ ಗ್ರಾಮದ ಆಟೋ ಚಾಲಕ ನಿಂಗರಾಜು ಅವರ ಪತ್ನಿ, ಕಾವ್ಯ(28) ನಾಪತ್ತೆಯಾಗಿದ್ದು, ಪತ್ನಿಯನ್ನು ಹುಡುಕಿಕೊಡುವಂತೆ ನಿಂಗರಾಜು ಪೊಲೀಸರಿಗೆ ದೂರು ನೀಡಿದ್ದಾರೆ. ಕಾವ್ಯ ತನ್ನ ತಮ್ಮನ ಮನೆಯಲ್ಲಿ ಮಕ್ಕಳೊಂದಿಗೆ ವಾಸವಿದ್ದು, ನಿಂಗರಾಜು ಹೋಗಿ ಬಂದು ಮಾಡುತ್ತಿದ್ದ ಎನ್ನಲಾಗಿದೆ. ಜ.5ರಂದು ಬೆಳಗ್ಗೆ ಗಾರ್ಮೆಂಟ್ಸ್‌ಗೆ ಹೋಗಿ ಬರುವುದಾಗಿ ಹೇಳಿ ಇಬ್ಬರು ಮಕ್ಕಳೊಂದಿಗೆ ಹೋದ ಕಾವ್ಯ ಮನೆಗೆ ವಾಪಸ್ಸಾಗಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದು, ಬನ್ನಹಳ್ಳಿಹುಂಡಿ ಗ್ರಾಮದ ಲಾರಿ ಚಾಲಕನ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ. ಎಸ್‌ಐ ಕೆ.ಮಹೇಶ್ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕರಾಟೆ ಸ್ಪರ್ಧೆ ವಿಜೇತ ವಿದ್ಯಾರ್ಥಿಗಳಿಗೆ ಅಭಿನಂದನೆ



ಹುಣಸೂರು, ಜ.17– ನಗರದ ಶಾಸ್ತ್ರಿ ವಿದ್ಯಾಸಂಸ್ಥೆಯಲ್ಲಿ ನಡೆದ ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆಯಲ್ಲಿ ಇತ್ತೀಚೆಗೆ ಅಸ್ಸಾಂನ ಗುವಾಹಟಿಯಲ್ಲಿ ನಡೆದ ಕರಾಟೆ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದ ವಿದ್ಯಾರ್ಥಿಗಳನ್ನು ಗಾವಡಗೆರೆ ಗುರುಲಿಂಗ ಜಂಗಮ ಮಠದ ಶ್ರೀನಟರಾಜ ಸ್ವಾಮೀಜಿ, ಸಂಸ್ಥೆಯ ಕಾರ್ಯದರ್ಶಿ ರಾಧಾಕೃಷ್ಣ ಅಭಿನಂದಿಸಿದರು.

ಅಸ್ಸಾಂನ ಗುವಾಹಟಿಯ ಡಾ.ಟಿ.ಎಓ ಇನ್‌ಡೋರ್ ಸ್ಟೇಡಿಯಂನಲ್ಲಿ ನಡೆದ ಪ್ರಥಮ ಅಂತರರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ ಕತಾ ವಿಭಾಗದಲ್ಲಿ ಶಾಲೆಯ 10ನೇ ತರಗತಿ ವಿದ್ಯಾರ್ಥಿ, ಹೆಚ್.ಎಸ್. ಗಜೇಂದ್ರ – ಮಮತ ದಂಪತಿ ಪುತ್ರ ಹೆಚ್.ಜಿ.ತರುಣ್ ದ್ವಿತೀಯ, 9ನೇ ತರಗತಿ ವಿದ್ಯಾರ್ಥಿ ಮಹೇಶ್–ಶ್ವೇತ ದಂಪತಿ ಪುತ್ರ ಎಂ.ಯಶಸ್ ತೃತೀಯ ಸ್ಥಾನ ಹಾಗೂ ಮೈಸೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದ ತುಷಾರ್ ಅವರನ್ನು ಅಭಿನಂದಿಸಲಾಯಿತು.

ಕರಾಟೆ ಶಿಕ್ಷಕ ಪ್ರಸನ್ನರಾಜೇ ಅರಸ್ ಮಾತನಾಡಿ, ಸ್ಪರ್ಧೆಯಲ್ಲಿ ನೇಪಾಳ, ಬಾಂಗ್ಲಾದೇಶ, ಟಿಬೆಟ್ ಸೇರಿದಂತೆ 7 ರಾಷ್ಟ್ರಗಳಿಂದ 400ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಪಂದ್ಯಾವಳಿಯಲ್ಲಿ ನಮ್ಮ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಈ ವೇಳೆ ಸಂಸ್ಥೆ ನಿರ್ದೇಶಕ ಸಚಿತ್, ಪ್ರಾಂಶುಪಾಲ ರವಿಶಂಕರ್, ಗುರುಮೂರ್ತಿ ಸೇರಿದಂತೆ ಶಾಲೆ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳಿದ್ದರು.


ನಲ್ಲೆಯ ಒಡನಾಡಿ, ಜನಸೇವಕ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯರಾದ
ಶ್ರೀ ಪಿ. ಪ್ರಶಾಂತ್‌ಗೌಡ
ರವರಿಗೆ
ಶ್ರೀ ದಿ. ಪೈ.ಟಿ. ಲಕ್ಷ್ಮಣ್
ಜನ್ಮದಿನದ ಶುಭಾಶಯಗಳು
ಶ್ರೀ ಟಿ. ಪುಟ್ಟಸ್ವಾಮಿ (ಪುರುಷಿ)
ತಾಯಿ ಚಾಮುಂಡೇಶ್ವರಿಯು ಇವರಿಗೆ ಆಯಸ್ಸು, ಆರೋಗ್ಯ, ಅಧಿಕಾರ ನೀಡಿ ಹರಸಲಿಯೆಂದು ಕೋರುತ್ತೇವೆ.
@bhi design: 97407 97701
ಶುಭಕೋರುವವರು: ಪಿ. ಪ್ರಶಾಂತ್‌ಗೌಡ ಸ್ನೇಹ ಬಳಗ, ಬೆಳ್ಳಿಕಟ್ಟೆ ಮೀಸಲು, ದೇವರಾಜ ಮೊಹಲ್ಲಾ


ಅಧ್ಯಕ್ಷರು, ಕಲ್ಪವೃಕ್ಷ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ(ರಿ), ಪಿರಿಯಾಪಟ್ಟಣ
ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ, ಸಹೃದಯಿ, ಯುವ ನೇತಾರ, ಸ್ನೇಹ ಜೀವಿ
ಪಿ. ಪ್ರಶಾಂತ್‌ಗೌಡ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಇವರಿಗೆ ತಾಯಿ ಮಸಣಿಕಮ್ಮ ದೇವಿ ಸದಾ ಕಾಲ ಆರೋಗ್ಯ, ಆಯುಷ್ಯ
ಹಾಗೂ ಹೆಚ್ಚಿನ ಅಧಿಕಾರ ನೀಡಿ ಹರಸಲಿ ಎಂದು ಕೋರುತ್ತೇವೆ.
ಶುಭಕೋರುವವರು:
ಕಲ್ಪವೃಕ್ಷ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ(ರಿ.)
ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ, ಪಿರಿಯಾಪಟ್ಟಣ


ಜನಸೇವಕ, ಸ್ನೇಹಜೀವಿ, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯರಾದ
ಶ್ರೀ ಪಿ. ಪ್ರಶಾಂತ್‌ಗೌಡ
ರವರಿಗೆ
ಜನ್ಮದಿನದ ಶುಭಾಶಯಗಳು
@bhi design: 97407 97701